ಗುರುವಾರ, ಜನವರಿ 4, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 4 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ ಗುಜರಾತ್‌ನ ಸೂರತ್‌ನಲ್ಲಿ ವಜ್ರದ ಉದ್ಯಮಕ್ಕೆ ಹೊಸ ಕಚೇರಿ ಆರಂಭವಾಗಿದೆ



ಸಂಖ್ಯೆ-ಸುದ್ದಿ ಕರ್ನಾಟಕಕ್ಕೆ ಭಾರಿ ಅನ್ಯಾಯ ಗುಜರಾತಿಗೆ ವಿಪರೀತ ಏರಿಕೆ

ಅಧಿಕಾರಿಗೆ ಸಮನ್ಸ್: 'ಸುಪ್ರೀಂ' ನಿಯಮ 10

'ಕಲ್ಲಡ್ಕ ಬಗ್ಗೆ ಮೃದು ಧೋರಣೆ ಏಕೆ?' 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,356 ▼	21,517 ▼	₹65,250 (ಬೆಂಗಳೂರು) ▼	₹75,500 (ಬೆಂಗಳೂರು) ▼	83.30 ▲

ಕರ್ನಾಟಕಕ್ಕೆ 15ನೇ ಹಣಕಾಸು ಆಯೋಗದ ಅನುದಾನ

ಸಿಕ್ಕಿದ್ದು ಅಲ್ಪ, ಬರಬೇಕಿದೆ ಅಧಿಕ

• ಮಂಜುನಾಥ ಹೆಬ್ಬಾರ್

ನವದೆಹಲಿ: 15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ ಕರ್ನಾಟಕ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಮೂರು ವರ್ಷಗಳಲ್ಲಿ ಬಂದಿರುವ ಅನುದಾನ ಕಡಿಮೆ. ಬರಬೇಕಾಗಿರುವ ಅನುದಾನದ ಪ್ರಮಾಣ ಜಾಸ್ತಿ ಇದೆ.


2021ರಿಂದ 2026ರ ಅವಧಿಗೆ ₹29,110 ಕೋಟಿ ಅನುದಾನವನ್ನು (ಸ್ಥಳೀಯ ಸಂಸ್ಥೆ, ವಿಪತ್ತು ನಿರ್ವಹಣೆ ಹಾಗೂ ಆರೋಗ್ಯ ಕ್ಷೇತ್ರ) ಕರ್ನಾಟಕಕ್ಕೆ ಬಿಡುಗಡೆ ಮಾಡಲು ಆಯೋಗ ಶಿಫಾರಸು ಮಾಡಿತ್ತು. ಮೂರು ವರ್ಷಗಳಲ್ಲಿ ₹11,449 ಕೋಟಿಯಷ್ಟೇ ಬಿಡುಗಡೆಯಾಗಿದೆ. ಇದರಲ್ಲಿ ತೆರಿಗೆ ಪಾಲು ಹಂಚಿಕೆಯ ಬಳಿಕ ಆದಾಯ ಕೊರತೆ ಅನುದಾನವೂ (1,631 ಕೋಟಿ) ಸೇರಿದೆ. ಈ ಅನುದಾನವನ್ನು ಕೇಂದ್ರ ಸರ್ಕಾರ 2021–22ನೇ ಆರ್ಥಿಕ ವರ್ಷದಲ್ಲೇ ಬಿಡುಗಡೆಗೊಳಿಸಿದೆ. ಆದರೆ, ಸ್ಥಳೀಯ ಸಂಸ್ಥೆಗಳ ಅನುದಾನ ₹14,630 ಕೋಟಿ ಬರಬೇಕಾಗಿದೆ.

ರಾಜ್ಯದ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆಗಳನ್ನು ನಡೆಸದ ಕಾರಣಕ್ಕೆ 15ನೇ ಹಣಕಾಸು ಆಯೋಗದ ಅಡಿಯಲ್ಲಿ ಅನುದಾನ ಬಿಡುಗಡೆ ಮಾಡಿಲ್ಲ ಎಂಬುದು ಕೇಂದ್ರದ ಸಮಜಾಯಿಷಿ.

'ಸಂವಿಧಾನದ 243 ಇ ವಿಧಿಯ ಅಡಿಯ ಪ್ರಕಾರ, ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸಕಾಲಕ್ಕೆ ಚುನಾವಣೆ ನಡೆಸುವುದು ರಾಜ್ಯ ಸರ್ಕಾರಗಳ ಹೊಣೆ. ಚುನಾವಣೆ ನಡೆಸಲು ಅಡ್ಡಿಯಾಗಿರುವ ಆಡಳಿತಾತ್ಮಕ ತೊಡಕುಗಳನ್ನು ನಿವಾರಿಸುವಂತೆ ಕರ್ನಾಟಕ ಸರ್ಕಾರಕ್ಕೆ 2023ರ ಏಪ್ರಿಲ್ ತಿಂಗಳಲ್ಲೇ ಸಲಹೆ ನೀಡಲಾಗಿತ್ತು' ಎಂದು ಹಣಕಾಸು ಸಚಿವಾಲಯದ ಮೂಲಗಳು ತಿಳಿಸಿವೆ.

5ನೇ ಪುಟ ನೋಡಿ

ಬಿಡುಗಡೆಯಾದ ಅನುದಾನ




ಅನುದಾನ ಹಂಚಿಕೆ (ಐದು ವರ್ಷಗಳ ಅವಧಿಗೆ)


₹1,631 ಕೋಟಿ — ತೆರಿಗೆ ಪಾಲು ಹಂಚಿಕೆಯ ಬಳಿಕ ಆದಾಯ ಕೊರತೆ ಅನುದಾನ

₹21,877 ಕೋಟಿ — ಸ್ಥಳೀಯ ಸಂಸ್ಥೆಗಳ ಅನುದಾನ

₹4,369 ಕೋಟಿ — ವಿಪತ್ತು ನಿರ್ವಹಣೆ ಅನುದಾನ

₹1,233 ಕೋಟಿ — ಆರೋಗ್ಯ ಕ್ಷೇತ್ರದ ಅನುದಾನ






(ಮಾಹಿತಿ–ಕೇಂದ್ರ ಹಣಕಾಸು ಸಚಿವಾಲಯ)

*2022–23ರಲ್ಲಿ ಅನುದಾನ ಕೊಟ್ಟಿಲ್ಲ

'ಅದಾನಿ' ವಿರುದ್ಧ ಎಸ್‌ಐಟಿಗೆ ನಕಾರ

ಷೇರು ಮೌಲ್ಯದ ಮೇಲೆ ಕೃತಕ ಪ್ರಭಾವದ ಆರೋಪ • ಸೆಬಿ ತನಿಖೆ ವಿಶ್ವಾಸಾರ್ಹ

ನವದೆಹಲಿ (ಪಿಟಿಐ): ಅದಾನಿ ಸಮೂಹವು ತನ್ನ ಕಂಪನಿಗಳ ಷೇರು ಮೌಲ್ಯದ ಮೇಲೆ ಕೃತಕವಾಗಿ ಪ್ರಭಾವ ಬೀರುವ ಕೆಲಸ ಮಾಡಿದೆ ಎಂಬ ಆರೋಪಗಳ ಕುರಿತ ತನಿಖೆಯನ್ನು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ಅಥವಾ ಸಿಬಿಐಗೆ ವರ್ಗಾಯಿಸಬೇಕು ಎಂಬ ಕೋರಿಕೆಯನ್ನು ಸುಪ್ರೀಂ ಕೋರ್ಟ್ ಬುಧವಾರ ತಿರಸ್ಕರಿಸಿದೆ. ಇದು ಅದಾನಿ ಸಮೂಹದ ಪಾಲಿಗೆ ಸಿಕ್ಕ ಜಯ ಎಂದು ವಿಶ್ಲೇಷಿಸಲಾಗಿದೆ.



ಸಮೂಹದ ವಿರುದ್ಧ ಬಾಕಿ ಇರುವ ಎರಡು ಪ್ರಕರಣಗಳ ವಿಚಾರಣೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಮೂರು ತಿಂಗಳಲ್ಲಿ ಪೂರ್ಣಗೊಳಿಸುವಂತೆ ಕೋರ್ಟ್, ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಸೂಚಿಸಿದೆ. ಸೆಬಿ ಸಮಗ್ರವಾದ ತನಿಖೆಯನ್ನು ನಡೆಸುತ್ತಿದೆ, ಈ ತನಿಖೆಯು ವಿಶ್ವಾಸ ಮೂಡಿಸುವಂತೆ ಇದೆ ಎಂದು ಕೋರ್ಟ್ ಹೇಳಿದೆ.

ಸೆಬಿ ರೂಪಿಸುವ ನಿಯಮಗಳ ವಿಚಾರವಾಗಿ ತನ್ನ ನಿಲುವನ್ನು ಹೇರುವ ಕೆಲಸವನ್ನು ನ್ಯಾಯಾಲಯ ಮಾಡಬಾರದು ಎಂದು ಹೇಳಿರುವ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠವು, ಪ್ರಕರಣದ ವಾಸ್ತವಾಂಶಗಳು ತನಿಖೆಯನ್ನು ಸೆಬಿಯಿಂದ ಇನ್ನೊಂದು ಸಂಸ್ಥೆಗೆ ವರ್ಗಾಯಿಸುವ ಅಗತ್ಯವನ್ನು ಸೃಷ್ಟಿಸಿಲ್ಲ ಎಂದು ತಿಳಿಸಿದೆ.

11ನೇ ಪುಟ ನೋಡಿ

ಅದಾನಿ ಷೇರು ಜಿಗಿತ

ನವದೆಹಲಿ (ಪಿಟಿಐ): ಅದಾನಿ ಸಮೂಹದ ಬಗ್ಗೆ 'ಹಿಂಡನ್‌ಬರ್ಗ್ ರೀಸರ್ಚ್' ಕಂಪನಿ ಮಾಡಿರುವ ಆರೋಪ ಕುರಿತ ತನಿಖೆಯನ್ನು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ಒಪ್ಪಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದ ಬೆನ್ನಲ್ಲೇ ಅದಾನಿ ಕಂಪನಿಗಳ ಷೇರು ಮೌಲ್ಯ ಏರಿಕೆ ಕಂಡಿದೆ.


ಬುಧವಾರ ಷೇರುಪೇಟೆಯಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಇಳಿಕೆಯ ಹಾದಿಯಲ್ಲಿ ಸಾಗಿದರೂ ಸುಪ್ರೀಂ ಕೋರ್ಟ್ ಆದೇಶವು ಅದಾನಿ ಕಂಪನಿಗಳ ಪಾಲಿಗೆ ವರದಾನವಾಯಿತು. ಅದಾನಿ ಒಡೆತನದ 10 ಕಂಪನಿಗಳ ಮಾರುಕಟ್ಟೆ ಮೌಲ್ಯವು ₹15 ಲಕ್ಷ ಕೋಟಿಯ ಗಡಿ ದಾಟಿದೆ. ಬುಧವಾರ ಒಂದೇ ದಿನ ಅದಾನಿ ಸಮೂಹದ ಮಾರುಕಟ್ಟೆ ಮೌಲ್ಯಕ್ಕೆ ₹64,189 ಕೋಟಿ ಸೇರ್ಪಡೆಯಾಗಿದೆ.

ಅದಾನಿ ಎನರ್ಜಿ ಸೆಲ್ಯೂಷನ್ಸ್ ಶೇ 11.60, ಅದಾನಿ ಟೋಟಲ್ ಗ್ಯಾಸ್ ಷೇರಿನ ಮೌಲ್ಯ ಶೇ 9.84ರಷ್ಟು ಹೆಚ್ಚಳವಾಗಿದೆ. ಅದಾನಿ ಗ್ರೀನ್ ಎನರ್ಜಿ ಶೇ 6, ಅದಾನಿ ಪವರ್ ಶೇ 4.99ರಷ್ಟು ಏರಿಕೆಯಾಗಿದೆ.

ಅದಾನಿ ವಿಲ್ಮಾರ್ ಶೇ 3.97, ಎನ್‌ಡಿಟಿವಿ ಶೇ 3.66, ಅದಾನಿ ಎಂಟರ್‌ಪ್ರೈಸಸ್ ಶೇ 2.45, ಅದಾನಿ ಪೋರ್ಟ್ಸ್ ಶೇ 1.39, ಅಂಬುಜಾ ಸಿಮೆಂಟ್ಸ್ ಶೇ 0.94, ಎಸಿಸಿ ಷೇರು ಶೇ 0.10ರಷ್ಟು ಏರಿಕೆ ದಾಖಲಿಸಿದೆ.

ಆರಂಭಿಕ ವಹಿವಾಟಿನಲ್ಲಿ ಅದಾನಿ ಎನರ್ಜಿ ಸೆಲ್ಯೂಷನ್ಸ್ ಶೇ 17.83, ಎನ್‌ಡಿಟಿವಿ ಶೇ 11.39, ಅದಾನಿ ಟೋಟಲ್ ಗ್ಯಾಸ್ ಶೇ 9.99, ಅದಾನಿ ಗ್ರೀನ್ ಎನರ್ಜಿ ಶೇ 9.13 ಹಾಗೂ ಅದಾನಿ ಎಂಟರ್‌ಪ್ರೈಸಸ್ ಷೇರು ಶೇ 9.11ರಷ್ಟು ಏರಿಕೆ ಕಂಡಿತ್ತು. ಅದಾನಿ ಪೋರ್ಟ್ಸ್ ಹಾಗೂ ಅಂಬುಜಾ ಸಿಮೆಂಟ್ಸ್ 52 ವಾರಗಳ ಹಿಂದಿನ ಗರಿಷ್ಠ ಮಟ್ಟದಲ್ಲಿ ಏರಿಕೆ ದಾಖಲಿಸಿವೆ.

'ಸತ್ಯಕ್ಕೆ ಸಂದ ಜಯ'



'ಸತ್ಯಕ್ಕೆ ಜಯ ಸಂದಿದೆ. ಭಾರತದ ಅಭಿವೃದ್ಧಿಗೆ ನಮ್ಮ ಸಮೂಹದ ಕಂಪನಿಗಳ ಕೊಡುಗೆ ಮುಂದುವರಿಯಲಿದೆ'

–ಇದು ಹಿಂಡನ್‌ಬರ್ಗ್ ರೀಸರ್ಚ್ ವಿವಾದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶದ ಬಗ್ಗೆ ಉದ್ಯಮಿ ಗೌತಮ್ ಅದಾನಿ ನೀಡಿದ ಪ್ರತಿಕ್ರಿಯೆ.

'ಸತ್ಯಮೇವ ಜಯತೆ. ನಮ್ಮ ಸಮೂಹದೊಟ್ಟಿಗೆ ನಿಂತ ಎಲ್ಲರಿಗೂ ನಾನು ಆಭಾರಿಯಾಗಿದ್ದೇನೆ' ಎಂದು ಅವರು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದಾರೆ.

'ಅಯೋಧ್ಯೆ: ಗೋಧ್ರಾ ರೀತಿ ದುರಂತ ಸಂಭವ'

ಬೆಂಗಳೂರು: 'ಅಯೋಧ್ಯೆಗೆ ರಾಮಮಂದಿರ ಉದ್ಘಾಟನೆಗೆ ಹೋಗುವವರಿಗೆ ಸರ್ಕಾರವೇ ರಕ್ಷಣೆ ಕೊಡಬೇಕು. ಗೋಧ್ರಾ ದುರಂತದರೀತಿ ಮತ್ತೊಮ್ಮೆ ಏನಾದರೂ ಆಗಬಹುದು' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು. 4

ಪದವಿಗೆ ಏಕರೂಪದ ಶುಲ್ಕಕ್ಕೆ ಸಮ್ಮತಿ

ಬೆಂಗಳೂರು: ರಾಜ್ಯದ ವಿಶ್ವವಿದ್ಯಾಲಯಗಳು ಹಾಗೂ ಪದವಿ ಕಾಲೇಜುಗಳ ಸ್ನಾತಕ ಹಾಗೂ ಸ್ನಾತಕೋತ್ತರ ಕೇಂದ್ರಗಳಲ್ಲಿ ಏಕ ರೂಪದ ಶುಲ್ಕ ನಿಗದಿ ಮಾಡಬೇಕು ಎಂಬ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಶಿಫಾರಸನ್ನು ಉನ್ನತ ಶಿಕ್ಷಣ ಇಲಾಖೆ ಅಂಗೀಕರಿಸಿದೆ. 4

ಇರಾನ್‌ನಲ್ಲಿ ಸ್ಫೋಟ 103 ಮಂದಿ ಸಾವು

ದುಬೈ: ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್‌ನ ಕಮಾಂಡರ್ ಮೇಜರ್ ಜನರಲ್ ಖಾಸಿಂ ಸುಲೇಮಾನಿ ಹತ್ಯೆಯ ನಾಲ್ಕನೇ ವರ್ಷದ ಸ್ಮರಣೆ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದ ವೇಳೆ ಬುಧವಾರ ಸಂಭವಿಸಿದ ಎರಡು ಸ್ಫೋಟಗಳಲ್ಲಿ ಕನಿಷ್ಠ 103 ಮಂದಿ ಮೃತಪಟ್ಟಿದ್ದಾರೆ. 10

ಚಿನಕುರಳಿ

ಪ್ರಕಾಶ್ ಶೆಟ್ಟಿ





ಪ್ರತಿಭಟನೆ 1992ರ ಗಲಭೆ ಪ್ರಕರಣದ ಆರೋಪಿಯ ಬಂಧನ ಖಂಡಿಸಿ ಹುಬ್ಬಳ್ಳಿಯ ಶಹರ ಪೊಲೀಸ್ ಠಾಣೆ ಎದುರು ಬುಧವಾರ ನಡೆದ ಪ್ರತಿಭಟನೆಯಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಶಾಸಕರಾದ ಮಹೇಶ ಟೆಂಗಿನಕಾಯಿ, ಅರವಿಂದ ಬೆಲ್ಲದ, ಎಂ.ಆರ್. ಪಾಟೀಲ ಹಾಗೂ ಬಿಜೆಪಿ ಮುಖಂಡರು ಪಾಲ್ಗೊಂಡಿದ್ದರು -ಪ್ರಜಾವಾಣಿ ಚಿತ್ರ 4

ಅಂಗನವಾಡಿ ಸಹಾಯಕಿಯ ಮೂಗು ಕತ್ತರಿಸಿದ ಪಾನಮತ್ತ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮನೆ ಅಂಗಳದಲ್ಲಿನ ಹೂಗಳನ್ನು ಅಂಗನವಾಡಿ ಕೇಂದ್ರದ ಮಕ್ಕಳು ಕಿತ್ತಿದ್ದಾರೆ ಎಂದು ಸಿಟ್ಟಾದ ಮನೆಯ ಮಾಲೀಕ ಅಂಗನವಾಡಿ ಸಹಾಯಕಿಯ ಮೂಗನ್ನೇ ಕತ್ತರಿಸಿದ ಘಟನೆ ತಾಲ್ಲೂಕಿನ ಬಸುರ್ತೆ ಗ್ರಾಮದಲ್ಲಿ ಸೋಮವಾರ ನಡೆದಿದೆ. ಸಹಾಯಕಿಯ ಆರೋಗ್ಯ ಸ್ಥಿತಿ ಗಂಭೀರವಾಗಿದೆ.

ಸುಗಂಧಾ ಮೋರೆ (50) ಹಲ್ಲೆಗೆ ಒಳಗಾದವರು. ಕಲ್ಯಾಣಿ ಮೋರೆ ಆರೋಪಿ ಎಂದು ಪೊಲೀಸರು ತಿಳಿಸಿದ್ದಾರೆ.

'ಅಂಗನವಾಡಿ ಸಹಾಯಕಿ ಮಕ್ಕಳನ್ನು ಮೂತ್ರ ವಿಸರ್ಜನೆ ಮಾಡಿಸಿಕೊಂಡು ಮರಳುತ್ತಿದ್ದರು. ಈ ವೇಳೆ ಮಕ್ಕಳು ಆರೋಪಿ ಮನೆಯ ಮುಂದಿನ ಹೂಗಳನ್ನು ಕಿತ್ತುಕೊಂಡರು. ಸಿಟ್ಟಾದ ಆರೋಪಿ ಮಕ್ಕಳನ್ನು ಗದರಿಸಿದರು. ಅಂಗನವಾಡಿ ಸಹಾಯಕಿ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಆಗ ಆರೋಪಿ ಕುಡಗೋಲು ತಂದು ಏಕಾಏಕಿ ದಾಳಿ ಮಾಡಿದ. ಇದರಿಂದ ಸುಗಂಧಾ ಅವರ ಮೂಗು ತುಂಡಾಯಿತು' ಎಂದು ಮಹಿಳೆ ಸಂಬಂಧಿಕರು ದೂರಿನಲ್ಲಿ ತಿಳಿಸಿದ್ದಾರೆ.



ಆಸ್ಪತ್ರೆಯಲ್ಲಿ ಸುಗಂಧಾ ಮೋರೆ

> **ಹಲ್ಲೆಗೆ ಕೌಟುಂಬಿಕ ಕಲಹ ಕಾರಣ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ**
> **ಲಕ್ಷ್ಮಿ ಹೆಬ್ಬಾಳಕರ,** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

'ಅಂಗನವಾಡಿ ಸಹಾಯಕಿ ಮಕ್ಕಳನ್ನು ಮೂತ್ರ ವಿಸರ್ಜನೆ ಮಾಡಿಸಿಕೊಂಡು ಮರಳುತ್ತಿದ್ದ ವೇಳೆ ಪಾನಮತ್ತನಾದ ಆರೋಪಿ ಏಕಾಏಕಿ ದಾಳಿ ಮಾಡಿದ್ದಾನೆ. ಸದ್ಯ ಆತ ತಲೆ-ಮರೆಸಿಕೊಂಡಿದ್ದಾನೆ' ಎಂದು ಕಾಕತಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ಆರೋಪಿ ಬಂಧನಕ್ಕೆ ಆಗ್ರಹಿಸಿ ನಗರದಲ್ಲಿ ಬುಧವಾರ ರಾಜ್ಯ ಅಂಗನವಾಡಿ ನೌಕರರ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಸಿ.ಎ ಜಾಗ ವಶಕ್ಕೆ ಪಡೆಯದಿದ್ದರೆ ಸರ್ಕಾರದ ಹಕ್ಕು ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಡಾವಣೆ ನಿರ್ಮಾಣದ ವೇಳೆ ಉದ್ಯಾನ, ಸ್ಮಶಾನ ಮತ್ತು ಆಟದ ಮೈದಾನ ಸೇರಿದಂತೆ ಸಾರ್ವಜನಿಕ ಬಳಕೆಗೆ ಮೀಸಲಿರಿಸಿದ ಜಾಗವನ್ನು (ಸಿಎ) ಐದು ವರ್ಷಗಳಲ್ಲಿ ಸರ್ಕಾರ ಅಥವಾ ಸಕ್ಷಮ ಪ್ರಾಧಿಕಾರಗಳು ಸ್ವಾಧೀನ ಪಡಿಸಿಕೊಳ್ಳದೇ ಇದ್ದರೆ, ಕಾಯ್ದಿರಿಸಿದ ಜಾಗದ ಮೇಲಿನ ಹಕ್ಕು ರದ್ದಾಗಲಿದೆ' ಎಂದು ಹೈಕೋರ್ಟ್ ಆದೇಶಿಸಿದೆ.



ಈ ಸಂಬಂಧ ನಗರದ ಜಯಮಹಲ್ ಮುಖ್ಯ ರಸ್ತೆಯಲ್ಲಿರುವ 'ಜಯಮಹಲ್ ಪ್ಯಾಲೇಸ್' ಹೋಟೆಲ್ ಮಾಲೀಕ ದಿವಂಗತ ಜ್ಯೋತೇಂದ್ರ ಸಿಂಹ್‌ಜಿ ವಿಕ್ರಮ್ ಸಿಂಹ್‌ಜಿ ಅವರ ಕಾನೂನುಬದ್ಧ ವಾರಸುದಾರರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

5ನೇ ಪುಟ ನೋಡಿ

ಕೇಪ್‌ಟೌನ್ ಟೆಸ್ಟ್: ಮೊದಲ ದಿನವೇ 23 ವಿಕೆಟ್ ಪತನ



ಮೊಹಮ್ಮದ್ ಸಿರಾಜ್ 9-3-15-6

ಕೇಪ್‌ಟೌನ್: ಬ್ಯಾಟರ್‌ಗಳ ಸ್ವರ್ಗವೆಂದೇ ಬಿಂಬಿಸಲಾಗಿದ್ದ ನ್ಯೂಲ್ಯಾಂಡ್ ಕ್ರೀಡಾಂಗಣದಲ್ಲಿ ಬುಧವಾರ ವೇಗದ ಬೌಲರ್‌ಗಳು ಅಬ್ಬರಿಸಿದರು. ಇದರಿಂದಾಗಿ ಇಲ್ಲಿ ಆರಂಭವಾದ ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವಣ ಎರಡನೇ ಟೆಸ್ಟ್ ಪಂದ್ಯದ ಮೊದಲ ದಿನವೇ 23 ವಿಕೆಟ್‌ಗಳು ಪತನವಾದವು.

ಭಾರತದ ಮೊಹಮ್ಮದ್ ಸಿರಾಜ್ (15ಕ್ಕೆ6) ತಮ್ಮ ಜೀವನಶ್ರೇಷ್ಠ ಬೌಲಿಂಗ್ ಸಾಧನೆ ದಾಖಲಿಸಿದರು. ಅವರ ದಾಳಿಗೆ ಆತಿಥೇಯ ತಂಡವು ಮೊದಲ ಇನಿಂಗ್ಸ್‌ನಲ್ಲಿ ಅಲ್ಪಮೊತ್ತಕ್ಕೆ ಕುಸಿಯಿತು. ಭಾರತ ತಂಡ ಮೊದಲ ಇನಿಂಗ್ಸ್‌ನಲ್ಲಿ 98 ರನ್‌ಗಳ ಮುನ್ನಡೆ ಪಡೆಯಿತು. ಆದರೆ 153 ರನ್‌ಗಳಿಗೆ ಆಲೌಟ್ ಆಯಿತು. ಅತಿಥೇಯ ಬಳಗವು ಎರಡನೇ ಇನಿಂಗ್ಸ್‌ನಲ್ಲಿ ಮೂರು ವಿಕೆಟ್ ಕಳೆದುಕೊಂಡಿದೆ. ಹಲವು ಹಳೆಯ ದಾಖಲೆಗಳೂ ಈ ದಿನ ಪತನವಾದವು.

- ಊಟದ ವಿರಾಮಕ್ಕೂ ಮೊದಲೇ ಆಲೌಟ್ ಆದ ದಕ್ಷಿಣ ಆಫ್ರಿಕಾ (1932ರ ನಂತರ ಅತಿ ಕಡಿಮೆ ಮೊತ್ತ). ಇದು ಭಾರತ ವಿರುದ್ಧ ತಂಡವೊಂದು ಗಳಿಸಿದ ಅತೀ ಕಡಿಮೆ ಮೊತ್ತ
- ಭಾರತಕ್ಕೆ 98 ರನ್ ಮುನ್ನಡೆ
- ಉತ್ತಮ ಸ್ಥಿತಿಯಿಂದ 'ವಿಶ್ವ ದಾಖಲೆ' ಕುಸಿತ. 153ಕ್ಕೆ 4. 153ಕ್ಕೆ ಆಲೌಟ್! ಒಂದೇ ಮೊತ್ತದಲ್ಲಿ 11 ಎಸೆತಗಳ ಅಂತರದಲ್ಲಿ ಆರು ವಿಕೆಟ್‌ಗಳ ಪತನ. ಖಾತೆ ತೆರೆಯದ ಆರು ಆಟಗಾರರು. ಟೆಸ್ಟ್‌ನಲ್ಲಿ ಇದು ಮೊದಲ ನಿದರ್ಶನ

- ದಕ್ಷಿಣ ಆಫ್ರಿಕಾ : ಮೊದಲ ಇನಿಂಗ್ಸ್ **55** (23.2 ಓವರ್)
- ಭಾರತ: ಮೊದಲ ಇನಿಂಗ್ಸ್ **153** (34.5 ಓವರ್)
- ದಕ್ಷಿಣ ಆಫ್ರಿಕಾ : ಎರಡನೇ ಇನಿಂಗ್ಸ್ **3ಕ್ಕೆ 62** (17 ಓವರ್)

ವಿವರ ಪುಟ: 12

ಎಚ್‌ಎಲ್‌ಸಿ ನೇಮಕಕ್ಕೆ ಪಟ್ಟು: ಆಯೋಗದ ಸಭೆಗೆ ಗೈರಾಗುವುದಾಗಿ 6 ಸದಸ್ಯರ ಪತ್ರ

ಕೆಪಿಎಸ್‌ಸಿ ಕಾರ್ಯದರ್ಶಿಗೆ 'ಬ್ಲ್ಯಾಕ್‌ಮೇಲ್'?

• ರಾಜೇಶ್ ರೈ ಚಟ್ಲ

ಬೆಂಗಳೂರು: ಕೆಪಿಎಸ್‌ಸಿ ಕಾನೂನು ಕೋಶದ ಮುಖ್ಯಸ್ಥ (ಎಚ್‌ಎಲ್‌ಸಿ) ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗೆ ಕಾರ್ಯದರ್ಶಿಯು ನೇಮಕಾತಿ ಆದೇಶ ನೀಡುವವರೆಗೆ ಆಯೋಗದ ಯಾವುದೇ ಸಭೆಗಳಿಗೆ ಹಾಜರಾಗುವುದಿಲ್ಲ ಮತ್ತು ಆಯ್ಕೆ ಪಟ್ಟಿಗಳಿಗೆ ಅನುಮೋದನೆ ನೀಡುವುದಿಲ್ಲವೆಂದು ಆರು ಸದಸ್ಯರು ಅಧ್ಯಕ್ಷರಿಗೆ ಪತ್ರ ನೀಡಿದ್ದಾರೆ.

ಸದಸ್ಯರ ಈ ವರ್ತನೆ, ಕಾರ್ಯದರ್ಶಿಯನ್ನು 'ಬ್ಲ್ಯಾಕ್‌ಮೇಲ್' ಮಾಡುವ ತಂತ್ರವೆಂದು ಆರೋಪಿಸಿರುವ ಸರ್ಕಾರಿ ಹುದ್ದೆ ಆಕಾಂಕ್ಷಿಗಳು, 'ಲಕ್ಷಾಂತರ ಅಭ್ಯರ್ಥಿಗಳ ಭವಿಷ್ಯದ ಜೊತೆ ಕೆಪಿಎಸ್‌ಸಿ ಚೆಲ್ಲಾಟವಾಡುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆಯೋಗದ ಮೂವರು ಸದಸ್ಯರನ್ನೊಳಗೊಂಡ ಆಯ್ಕೆ ಸಮಿತಿಯು ಎಚ್‌ಎಲ್‌ಸಿ ಹುದ್ದೆಗೆ ನಿಯಮಾನುಸಾರ ಆಯ್ಕೆ ಪ್ರಕ್ರಿಯೆ ನಡೆಸಿಲ್ಲ. ಸಂದರ್ಶನಕ್ಕೆ ಹಾಜರಾದ ಅಭ್ಯರ್ಥಿಗಳ ಮೌಲ್ಯಮಾಪನ, ಅಂಕಗಳ ಮಾಹಿತಿಯನ್ನು ಸಮಿತಿಯು ನೀಡಿಲ್ಲ ಎಂಬ ಕಾರಣ ನೀಡಿರುವ ಕಾರ್ಯದರ್ಶಿ ಕೆ.ಎಸ್. ಲತಾಕುಮಾರಿ ಅವರು, ಕಾನೂನು ಕೋಶದ ಮುಖ್ಯಸ್ಥರ ನೇಮಕಾತಿ ಆದೇಶವನ್ನುಹೊರಡಿಸದೇ, ಕಡತ ವಾಪಸ್ ಕಳುಹಿಸಿದ್ದರು. ಇದು ಕೆಲವು ಸದಸ್ಯರನ್ನು ಕೆರಳಿಸಿದೆ ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

ಕೆಪಿಎಸ್‌ಸಿಯಲ್ಲಿ ಅಧ್ಯಕ್ಷರು ಹಾಗೂ 10 ಸದಸ್ಯರಿದ್ದಾರೆ. ಈ ಪೈಕಿ, ಆರು ಸದಸ್ಯರು ಸಭೆಗೆ ಹಾಜರಾಗುವುದಿಲ್ಲ-ವೆಂದು ಪತ್ರ ನೀಡಿರುವ ಕಾರಣ ಜ. 2ರಂದು ನಡೆಯಬೇಕಿದ್ದ ಆಯೋಗದ ಸಭೆ ನಡೆದಿಲ್ಲ. ಅಲ್ಲದೆ, ಆಯೋಗದ ಉಪ ಸಮಿತಿಗಳ ಸಭೆಯೂ ನಡೆದಿಲ್ಲ.

ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಒಂದು ಸಾವಿರಕ್ಕೂ ಹೆಚ್ಚು ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲು ಅನುಮೋದನೆಗಾಗಿ ಒಂಬತ್ತಕ್ಕೂ ಹೆಚ್ಚು ಪ್ರಸ್ತಾವನೆಗಳನ್ನು ಆಯೋಗದ ಸಭೆಗೆ ಕಾರ್ಯದರ್ಶಿ ಈಗಾಗಲೇ ಮಂಡಿಸಿದ್ದಾರೆ.

5ನೇ ಪುಟ ನೋಡಿ

20ಕ್ಕೂ ಹೆಚ್ಚು ಅಧಿಸೂಚನೆಗೆ ಕುತ್ತು

'ಬಿ' ಗ್ರೂಪ್ ಹುದ್ದೆಗಳಿಗೆ ಅಭ್ಯರ್ಥಿಗಳ ಸಂದರ್ಶನ ಅಳವಡಿಸಬೇಕೆಂದು ಪಟ್ಟು ಹಿಡಿದಿರುವ ಆಯೋಗ, ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದಿದೆ. ಸಂದರ್ಶನಕ್ಕೆ ಅನುಮತಿ ಸಿಗುವವರೆಗೆ, 'ಬಿ' ಗ್ರೂಪ್ ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆ ಹೊರಡಿಸುವಂತೆ ಕಾರ್ಯದರ್ಶಿ ಮಂಡಿಸಿರುವ ಪ್ರಸ್ತಾವನೆಗಳಿಗೆ ಅನುಮೋದನೆ ನೀಡದಿರಲು ಆಯೋಗದ ಸದಸ್ಯರು ನಿರ್ಧರಿಸಿದ್ದಾರೆ. ಸಂದರ್ಶನ ಅಳವಡಿಸುವ ಕುರಿತಂತೆ ಸರ್ಕಾರ ನೀಡುವ ನಿರ್ದೇಶನಕ್ಕೆ ಬದ್ಧವೆಂದು ಷರತ್ತು ಹಾಕಿ ಅಧಿಸೂಚನೆ ಹೊರಡಿಸಲು ಕೂಡಾ ಆಯೋಗ ಸಿದ್ಧವಿಲ್ಲ. ಇದರಿಂದಾಗಿ 2 ಸಾವಿರಕ್ಕೂ ಹೆಚ್ಚು ಹುದ್ದೆಗಳ 20ಕ್ಕೂ ಹೆಚ್ಚು ನೇಮಕಾತಿ ಅಧಿಸೂಚನೆ ಪ್ರಸ್ತಾವನೆಗಳು ನನೆಗುದಿಯಲ್ಲಿವೆ ಎಂದೂ ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

ಕೋವಿಡ್ 260 ಪ್ರಕರಣ ಪತ್ತೆ

ಬೆಂಗಳೂರು: ರಾಜ್ಯದಲ್ಲಿ ಬುಧವಾರ 260 ಕೋವಿಡ್ ಪ್ರಕರಣಗಳು ಹೊಸದಾಗಿ ದೃಢಪಟ್ಟಿವೆ. ಒಬ್ಬರು ಮೃತಪಟ್ಟಿದ್ದಾರೆ. ಒಟ್ಟು 1,175 ಸಕ್ರಿಯ ಪ್ರಕರಣಗಳಿವೆ.

24 ಗಂಟೆಗಳ ಅವಧಿಯಲ್ಲಿ 7,497 ಪರೀಕ್ಷೆ ನಡೆಸಲಾಗಿತ್ತು. ಶೇ 3.46ರಷ್ಟು ಮಂದಿಯಲ್ಲಿ ಸೋಂಕು ಇರುವುದು ದೃಢಪಟ್ಟಿದೆ. 1,175 ಸಕ್ರಿಯ ಪ್ರಕರಣಗಳಲ್ಲಿ 1,107 ಮಂದಿ ಮನೆ ಆರೈಕೆಗೆ ಒಳಗಾಗಿದ್ದಾರೆ.

ತುರಹಳ್ಳಿ ಮೀಸಲು ಅರಣ್ಯದ ಬಿ.ಎಂ. ಕಾವಲು ಬಫರ್ ವಲಯ

6.5 ಎಕರೆ ಅರಣ್ಯ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಅರಣ್ಯ ಭೂಮಿ ಒತ್ತುವರಿ ತೆರವು ಮಾಡುವಂತೆ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಸೂಚನೆ ನೀಡಿದ 24 ಗಂಟೆಯೊಳಗೆ ಕೆಂಗೇರಿ ಬಳಿಯ ತುರಹಳ್ಳಿ ಮೀಸಲು ಅರಣ್ಯದ ಬಿ.ಎಂ. ಕಾವಲು ಬಫರ್ ವಲಯದಲ್ಲಿ ಒತ್ತುವರಿ ಮಾಡಲಾಗಿದ್ದ ₹60 ಕೋಟಿ ಮಾರುಕಟ್ಟೆ ಮೌಲ್ಯದ 6.5 ಎಕರೆ ಭೂಮಿ ಒತ್ತುವರಿ ತೆರವು ಮಾಡಿ, ವಶಕ್ಕೆ ಪಡೆಯಲಾಗಿದೆ.

ಹೊಸ ವರ್ಷದಲ್ಲಿ ಅರಣ್ಯ ಇಲಾಖೆಯ ಕಾರ್ಯ ಯೋಜನೆಗಳ ಬಗ್ಗೆ ಮಂಗಳವಾರ ಸಭೆ ನಡೆಸಿ ಆದ್ಯತೆ ಮೇರೆಗೆ ಒತ್ತುವರಿ ತೆರವು ಮಾಡಲು ಖಂಡ್ರೆ ಅವರು ಉನ್ನತಾಧಿಕಾರಿಗಳಿಗೆ ಸೂಚನೆ ನೀಡಿದರು. ಆ ಪ್ರಕಾರ, ಬುಧವಾರ ಬೆಳಿಗ್ಗೆ ಬಿ.ಎಂ.ಕಾವಲಿನಲ್ಲಿ ಜೆಸಿಬಿ ವಾಹನಗಳು ತೆರವು ಕಾರ್ಯಕ್ಕೆ ಚಾಲನೆ ನೀಡಿದವು.

ಬೆಂಗಳೂರು ನಗರ ಡಿಸಿಎಫ್ ರವೀಂದ್ರಕುಮಾರ್, ಎಸಿಎಫ್ ಸುರೇಶ್ ಮತ್ತು ಆರ್‌ಎಫ್‌ಒ ಗೋವಿಂದರಾಜ್ ನೇತೃತ್ವದಲ್ಲಿ 20ಕ್ಕೂ

ಮುಖ್ಯಾಂಶಗಳು

- ಅರಣ್ಯ ಭೂಮಿ ಒತ್ತುವರಿ ತೆರವಿಗೆ ಸೂಚಿಸಿದ್ದ ಸಚಿವ ಈಶ್ವರ ಖಂಡ್ರೆ
- ಕಾರ್ಯಾಚರಣೆಯಲ್ಲಿ 20ಕ್ಕೂ ಹೆಚ್ಚು ಸಿಬ್ಬಂದಿ ಭಾಗಿ
- ವಶಕ್ಕೆ ಪಡೆದ ಜಮೀನಿನಲ್ಲಿ ವಿವಿಧ ತಳಿಯ ಸಸಿಗಳನ್ನು ನೆಟ್ಟ ಸಿಬ್ಬಂದಿ

ಹೆಚ್ಚು ಅರಣ್ಯ ಸಿಬ್ಬಂದಿಯ ತಂಡ ತೆರವು ಕಾರ್ಯಾಚರಣೆ ನಡೆಸಿ ಈ ಪ್ರದೇಶದಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಶೆಡ್ ನೆಲಸಮ ಮಾಡಲಾಯಿತು. ವಶಕ್ಕೆ ಪಡೆದ ಭೂಮಿಯಲ್ಲಿ ಬಿದಿರು ಸೇರಿದಂತೆ ನಾನಾ ಜಾತಿಯ ಸಸಿಗಳನ್ನು ನೆಡಲಾಯಿತು ಎಂದು ಅರಣ್ಯ ಇಲಾಖೆ ಪ್ರಕಟಣೆ ತಿಳಿಸಿದೆ.

ಈ ಅರಣ್ಯ ಪ್ರದೇಶದಲ್ಲಿ ಸುಮಾರು 6.5 ಎಕರೆಯಷ್ಟು ಭೂಮಿಯನ್ನು ಮಧುಸೂದಾನಂದ ಸ್ವಾಮಿ ಎಂಬವರು ಒತ್ತುವರಿ ಮಾಡಿ, ಮಂಜೂರಾತಿ ಮಾಡುವಂತೆ ಅರ್ಜಿ ಸಲ್ಲಿಸಿದ್ದರು, ಅರಣ್ಯ ಭೂಮಿಯಾದ ಕಾರಣ



ಅರಣ್ಯ ಭೂಮಿ ಒತ್ತುವರಿಯನ್ನು ಅರಣ್ಯ ಇಲಾಖೆ ಸಿಬ್ಬಂದಿ ತೆರವುಗೊಳಿಸಿದರು

ಯಾರಿಗೂ ಮಂಜೂರು ಮಾಡಲು ಸಾಧ್ಯವಿಲ್ಲ ಎಂದು ಅರಣ್ಯ ಇಲಾಖೆ ಅರ್ಜಿ ತಿರಸ್ಕರಿಸಿತ್ತು.

ಒತ್ತುವರಿದಾರರ ಬಳಿ ಅರಣ್ಯ ಭೂಮಿಗೆ ಸಂಬಂಧಿಸಿದಂತೆ ಯಾವುದೇ ಕಂದಾಯ ದಾಖಲೆ, ಕ್ರಯಪತ್ರ, ಮಂಜೂರಾತಿ ಪತ್ರ, ಸಾಗುವಳಿ ಚೀಟಿ ಯಾವುದೂ ಇಲ್ಲದ ಕಾರಣ 2017 ಆಗಸ್ಟ್‌ನಲ್ಲಿಯೇ ಈ ಒತ್ತುವರಿ ತೆರವಿಗೆ ಎಸಿಎಫ್ ನ್ಯಾಯಾಲಯ ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಸಿಸಿಎಫ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾಗಿತ್ತು.

ಡಿ.23 ರಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಲಿಂಗರಾಜ್ ಅವರು ಈ ಭೂಮಿ ಅರಣ್ಯ ಇಲಾಖೆಗೆ ಸಂಬಂಧಿಸಿದ್ದೆಂದು ಮಹತ್ವದ ಆದೇಶ ನೀಡಿದ್ದರು. ಅರಣ್ಯ ಭೂಮಿ ಒತ್ತುವರಿ ಮಾಡಿರುವ ಮಧುಸೂದನಾನಂದ ಸ್ವಾಮಿ ವಿರುದ್ಧ ಈಗಾಗಲೇ 5 ಪ್ರಕರಣಗಳನ್ನು ದಾಖಲು ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

‘ಕಾಡು, ಪ್ರಕೃತಿ ಸಂಪತ್ತು ರಕ್ಷಣೆಗೆ ಆದ್ಯತೆ’

‘ಬೆಂಗಳೂರು ಸುತ್ತಮುತ್ತ ಭೂಮಿಗೆ ಬಂಗಾರದ ಬೆಲೆ ಇದೆ. ಕೆಲವರು ಸ್ವಾರ್ಥಕ್ಕಾಗಿ ಕೋಟ್ಯಂತರ ರೂಪಾಯಿ ಬೆಲೆಬಾಳುವ ಅರಣ್ಯ ಭೂಮಿ ಒತ್ತುವರಿ ಮಾಡಿದ್ದಾರೆ. ಪ್ರಕೃತಿ, ಪರಿಸರ, ಕಾಡು ಮತ್ತು ವನ್ಯ ಸಂಪತ್ತು ಉಳಿಸುವುದೇ ಇಲಾಖೆಯ ಕರ್ತವ್ಯ. ಬೆಂಗಳೂರಿನಲ್ಲಿ ಆದೇಶ ಆಗಿರುವ ಪ್ರಕರಣಗಳಲ್ಲಿ ಒತ್ತುವರಿ ತೆರವು ಮಾಡಲು ಸ್ಪಷ್ಟ ಸೂಚನೆ ನೀಡಲಾಗಿದೆ’ ಎಂದು ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

‘ಕ್ವಿಜೇಬಲ್ಡ್’ ರಸಪ್ರಶ್ನೆ ಕಾರ್ಯಕ್ರಮ 6ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸೇವಾ ಇನ್ ಆ್ಯಕ್ಷನ್ ಸಂಸ್ಥೆಯ ವತಿಯಿಂದ ಇದೇ 6ರಂದು ಅಂಗವಿಕಲ ವಿದ್ಯಾರ್ಥಿಗಳ ‘ಕ್ವಿಜೇಬಲ್ಡ್’ 9ನೇ ಆವೃತ್ತಿಯ ರಸಪ್ರಶ್ನೆ ಕಾರ್ಯಕ್ರಮವನ್ನು ಬಸವನಗುಡಿಯ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ’ ಎಂದು ಸಂಸ್ಥೆಯ ಉಪಾಧ್ಯಕ್ಷೆ ರುಮಾ ಬ್ಯಾನರ್ಜಿ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಅಂಧರು, ಶ್ರವಣ ದೋಷವುಳ್ಳವರು, ಸೆರೆಬ್ರಲ್ ಪಾಲ್ಸಿ (ಸಿಪಿ), ಬೌದ್ಧಿಕ ನ್ಯೂನತೆ (ಐಡಿ) ಮತ್ತು ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್ ಹೊಂದಿರುವ ಮಕ್ಕಳು ಮತ್ತು ವಯಸ್ಕರು ಈ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು. ತಮಿಳುನಾಡು, ತೆಲಂಗಾಣ, ಕೇರಳ, ಆಂಧ್ರಪ್ರದೇಶ, ದೆಹಲಿ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಒಡಿಶಾ ರಾಜ್ಯಗಳ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ’ ಎಂದರು.

ಕೇಂದ್ರ ಸಚಿವ ಎ. ನಾರಾಯಣಸ್ವಾಮಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಅವರು ತಿಳಿಸಿದರು.

ಮಾಹಿತಿಗೆ: 080-25520347ಗೆ ಸಂಪರ್ಕಿಸಬಹುದು.

ಆಸನ ಕಾಯ್ದಿರಿಸಲು ಅವಕಾಶ

ಬೆಂಗಳೂರು: ವಂಡರ್ ಲಾಗೆ ತೆರಳುವ ಪ್ರಯಾಣಿಕರಿಗೆ ಅವತಾರ್ ತಂತ್ರಾಂಶದಲ್ಲಿ ಮುಂಗಡವಾಗಿ ಆಸನ ಕಾಯ್ದಿರಿಸಲು ಬಿಎಂಟಿಸಿ ಅವಕಾಶ ಕಲ್ಪಿಸಿದೆ.

ನಗರದ ವಿವಿಧ ಭಾಗಗಳಿಂದ ನಾಲ್ಕು ಮಾರ್ಗಗಳಲ್ಲಿ ವಂಡರ್ ಲಾ ಕಡೆಗೆ 10 ಬಸ್‌ಗಳು ದಿನಕ್ಕೆ 20 ಟ್ರಿಪ್‌ಗಳನ್ನು ಏಕಮುಖವಾಗಿ ನಡೆಸಲಿವೆ. ಹವಾನಿಯಂತ್ರಿತ ಹವಾನಿಯಂತ್ರಿತ ವಜ್ರ ಸಾರಿಗೆ ಕಾರ್ಯಾಚರಣೆ ಮಾಡಲಿವೆ. ಹವಾನಿಯಂತ್ರಿತ ವಜ್ರ ಬಸ್‌ಗಳಲ್ಲಿ ಕೆಂಪೇಗೌಡ ಬಸ್ ನಿಲ್ದಾಣದಿಂದ ‘ವಂಡರ್ ಲಾ’ಗೆ ಸಂಚರಿಸುವ ಪ್ರಯಾಣಿಕರು ಜ. 15ರಿಂದ ಕೆಎಸ್‌ಆರ್‌ಟಿಸಿ ಅವತಾರ್ ತಂತ್ರಾಂಶದಲ್ಲಿ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸಬಹುದು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ಕುಡಿಯುವ ನೀರಿಗೆ ಹೆಚ್ಚಿದ ಬೇಡಿಕೆ; ಸಾಮರ್ಥ್ಯ ವೃದ್ಧಿಸಲು ಜಲಮಂಡಳಿಗೆ ಸೂಚನೆ

ಇನ್ನೂ 10 ಟಿಎಂಸಿ ಅಡಿ ಕಾವೇರಿ ನೀರು

● ಆರ್. ಮಂಜುನಾಥ್

ಬೆಂಗಳೂರು: ಕೃಷಿ ಉದ್ದೇಶಕ್ಕೆ ಅಧಿಕವಾಗಿ ಬಳಕೆ ಮಾಡುತ್ತಿರುವ ಕಾವೇರಿ ನೀರನ್ನು ಕಡಿತಗೊಳಿಸಿ, ಬೆಂಗಳೂರು ನಗರಕ್ಕೆ 10 ಟಿಎಂಸಿ ಅಡಿ ಹೆಚ್ಚುವರಿ ನೀರನ್ನು ಪೂರೈಸಲು ಸರ್ಕಾರ ನಿರ್ಧರಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಗೆ ಸೇರಿರುವ 110 ಹಳ್ಳಿಗಳೂ ಸೇರಿದಂತೆ ನಗರದ ಹೊಸ ಬಡಾವಣೆ ಹಾಗೂ ಪ್ರದೇಶಗಳಿಗೆ ಹೆಚ್ಚಿನ ನೀರಿನ ಅಗತ್ಯವಿದೆ. ಹೀಗಾಗಿ, ಹೆಚ್ಚುವರಿ ನೀರನ್ನು ಹಂಚಿಕೆ ಮಾಡಬೇಕು ಎಂದು ಬೆಂಗಳೂರು ಜಲಮಂಡಳಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಇದನ್ನು ಪರಿಶೀಲಿಸಿದ ಸರ್ಕಾರ, ಹೆಚ್ಚುವರಿ ನೀರು ಪೂರೈಸುವ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿ ವರದಿ ನೀಡಲು ಕಾವೇರಿ ನೀರಾವರಿ ನಿಗಮಕ್ಕೆ ಸೂಚಿತ್ತು.


ತಾಂತ್ರಿಕ ತಜ್ಞರ ನೇತೃತ್ವದ ಸಮಿತಿ ಪರಿಶೀಲನೆ ನಡೆಸಿ, 'ಭತ್ತ, ಕಬ್ಬು ಹಾಗೂ ಇತರೆ ಕೃಷಿ ಬೆಳೆಗಳಿಗೆ ಅಗತ್ಯಕ್ಕಿಂತ ಅತಿ ಹೆಚ್ಚು ನೀರು ಬಳಸಲಾಗುತ್ತಿದೆ. ಇದನ್ನು ಕಡಿಮೆ ಮಾಡಿದರೆ ಬೆಂಗಳೂರಿಗೆ ಹೆಚ್ಚಿನ ನೀರು ಒದಗಿಸಬಹುದು' ಎಂದು ವರದಿ ನೀಡಿದೆ. ಈ ವರದಿ ಆಧರಿಸಿ ಜಲಮಂಡಳಿಗೆ ತಾತ್ವಿಕ ಒಪ್ಪಿಗೆ ನೀಡಿರುವ ಸರ್ಕಾರ, ಹೆಚ್ಚುವರಿ ನೀರಿನ ಬಳಕೆಗೆ ಸಾಮರ್ಥ್ಯ ವೃದ್ಧಿಸಿಕೊಳ್ಳಲು ಸೂಚಿಸಿದೆ.

'ಬೆಂಗಳೂರಿಗೆ ನೀರು ಪೂರೈಸುವ ಕಾವೇರಿ 5ನೇ ಹಂತದ ಯೋಜನೆ ಅಂತಿಮ ಹಂತದಲ್ಲಿದ್ದು, 110 ಹಳ್ಳಿಗಳಿಗೆ ಏಪ್ರಿಲ್‌ನಲ್ಲಿ ಪ್ರಾಯೋಗಿಕವಾಗಿ ನೀರು ಪೂರೈಸಲು ಯೋಜಿಸಲಾಗಿದೆ. ಇದೇ ಸಂದರ್ಭದಲ್ಲೇ ಹೆಚ್ಚುವರಿ 10 ಟಿಎಂಸಿ ಅಡಿ ನೀರನ್ನು ಸಂಗ್ರಹಿಸುವ ಹಾಗೂ ಪೂರೈಸುವ ಸಾಮರ್ಥ್ಯ ವೃದ್ಧಿಸುವ ಕಾಮಗಾರಿಗಳನ್ನು ಆರಂಭಿಸಲು ಉದ್ದೇಶಿಸಲಾಗಿದೆ' ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಮಾಹಿತಿ ನೀಡಿದರು.

'ಜಲಮಂಡಳಿಯು ವಾರ್ಷಿಕವಾಗಿ ಕಾವೇರಿ ನದಿಯಿಂದ 24 ಟಿಎಂಸಿ ಅಡಿ ನೀರನ್ನು ಬಳಸಿದರೆ, ಅದರಲ್ಲಿ ಶೇ 20ರಷ್ಟನ್ನು 'ಕನ್ಸಂಟೀವ್ ಯೂಸ್' ಎಂದು ವರ್ಗೀಕರಿಸಲಾಗುತ್ತದೆ. ಅಂದರೆ, ನದಿಯಿಂದ ಪಡೆದುಕೊಂಡ ನೀರನ್ನು ಬಳಸಿ, ಅದರಲ್ಲಿ ಶೇ 20ರಷ್ಟನ್ನು ನದಿಗೇ ವಾಪಸ್ ಹರಿಸಿದರೆ, ಆ ಪ್ರಮಾಣದ ನೀರನ್ನು ಹೆಚ್ಚುವರಿಯಾಗಿ ಪಡೆಯುವ ಅವಕಾಶ ಇರುತ್ತದೆ. ಈ ಆಧಾರದಲ್ಲಿ ಹೆಚ್ಚಿನ ನೀರಿನ ಬೇಡಿಕೆಯನ್ನು ಸರ್ಕಾರ ಒಪ್ಪಿದೆ. ನಗರದಲ್ಲಿ ಬಳಕೆಯಾದ ಬಹುತೇಕ ನೀರು ವೃಷಭಾವತಿ, ಅರ್ಕಾವತಿ ಹಾಗೂ ಕಾಲುವೆ–ಕಣಿವೆಗಳ ಮೂಲಕ ಕಾವೇರಿ ನದಿಯನ್ನೇ ಸೇರಿಕೊಳ್ಳುತ್ತಿದೆ' ಎಂದು ಅಧಿಕಾರಿಗಳು ವಿವರ ನೀಡಿದರು.

ಬೆಂಗಳೂರಿಗೆ ಕಾವೇರಿ ನೀರಿನ ವಾರ್ಷಿಕ ಹಂಚಿಕೆ

- **24** ಟಿಎಂಸಿ ಅಡಿ — ಸುಪ್ರೀಂ ಕೋರ್ಟ್ ತೀರ್ಪಿನಂತೆ ಹಂಚಿಕೆ
- **19** ಟಿಎಂಸಿ ಅಡಿ — ಪ್ರಸ್ತುತ ಬಳಸಲಾಗುತ್ತಿರುವ ನೀರು
- **5** ಟಿಎಂಸಿ ಅಡಿ — 5ನೇ ಹಂತಕ್ಕೆ ಲಭ್ಯವಾಗುವ ನೀರು
- **34** ಟಿಎಂಸಿ ಅಡಿ — ಸರ್ಕಾರ ಇದೀಗ ಸಮ್ಮತಿಸಿರುವ 10 ಟಿಎಂಸಿ ಅಡಿ ಸೇರಿ ಒಟ್ಟಾರೆ ನೀರು ಹಂಚಿಕೆ



ನಗರದಲ್ಲಿ ಕಾವೇರಿ ನೀರಿನ ಬಳಕೆ

- **1,450** ದಶಲಕ್ಷ ಲೀಟರ್ — ನಗರದಲ್ಲಿ ಪ್ರತಿನಿತ್ಯ ಪೂರೈಸಲಾಗುತ್ತಿರುವ ನೀರು
- **1.6** ಟಿಎಂಸಿ ಅಡಿ — ಪ್ರತಿ ತಿಂಗಳು ನಗರಕ್ಕೆ ಸರಬರಾಜಾಗುತ್ತಿರುವ ನೀರು
- **750** ದಶಲಕ್ಷ ಲೀಟರ್ — 5ನೇ ಹಂತ ಪೂರ್ಣಗೊಂಡ ಮೇಲೆ ನಿತ್ಯ ಪೂರೈಕೆಯಾಗುವ ಹೆಚ್ಚುವರಿ ನೀರು
- **2.4** ಟಿಎಂಸಿ ಅಡಿ — ಪ್ರಸ್ತುತ, 5ನೇ ಹಂತ ಸೇರುದಂತೆ ನಗರಕ್ಕೆ ಪ್ರತಿ ತಿಂಗಳು ಸರಬರಾಜಾಗುವ ನೀರು

ತಾತ್ವಿಕ ಒಪ್ಪಿಗೆ: ರಾಮ್‌ಪ್ರಸಾತ್

'ನಗರದ ಜನಸಂಖ್ಯೆ ಹೆಚ್ಚಳ ಹಾಗೂ ಪ್ರದೇಶಗಳ ಅಭಿವೃದ್ಧಿಯಿಂದ ನೀರಿನ ಹಂಚಿಕೆ ಹೆಚ್ಚಿಸಬೇಕು ಎಂದು ಸರ್ಕಾರಕ್ಕೆ ಪ್ರಸ್ತಾಪ ಸಲ್ಲಿಸಲಾಗಿತ್ತು. ಹೆಚ್ಚುವರಿಯಾಗಿ 10 ಟಿಎಂಸಿ ಅಡಿ ನೀರನ್ನು ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ ಉಳಿಸಿ ನೀಡುವುದಾಗಿ ತಾತ್ವಿಕ ಒಪ್ಪಿಗೆಯನ್ನು ನೀಡಲಾಗಿದೆ' ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ತರೀಕೆರೆ: ಗೊಲ್ಲರಹಟ್ಟಿಗೆ ಕಾಲಿಟ್ಟ ಪರಿಶಿಷ್ಟ ಯುವಕನ ಮೇಲೆ ಹಲ್ಲೆ

15 ಜನರ ವಿರುದ್ಧ ಎಫ್‌ಐಆರ್; ಒಬ್ಬ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ತರೀಕೆರೆ ತಾಲ್ಲೂಕಿನ ಗೇರುಮರಡಿ ಗ್ರಾಮದ ಗೊಲ್ಲರಹಟ್ಟಿಗೆ ತೆರಳಿದ್ದ ಪರಿಶಿಷ್ಟ ಜಾತಿಯ ಮಾದಿಗ ಸಮುದಾಯದ ಯುವಕ ಮಾರುತಿ ಮೇಲೆ ಹಲ್ಲೆ ನಡೆಸಿದ ಆರೋಪದಲ್ಲಿ 15 ಜನರ ವಿರುದ್ಧ ತರೀಕೆರೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಪ್ರಮುಖ ಆರೋಪಿ ಶಂಕರಪ್ಪ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಜೆಸಿಬಿ ಆಪರೇಟರ್ ಆಗಿ ಕೆಲಸ ಮಾಡುವ ಎಂ.ಸಿ. ಹಳ್ಳಿಯ ಮಾರುತಿ ಎಂಬ ಯುವಕ ಗೇರುಮರಡಿ ಗ್ರಾಮದ ರವಿ ಎಂಬುವರ ಹಳೇ ಮನೆಯ ಮಣ್ಣು ತುಂಬಿಸುವ ಕೆಲಸಕ್ಕೆ ಹೊಗಿದ್ದರು.

'ಆಗ ಏಕಾಏಕಿ 30ರಿಂದ 40 ಜನ ಬಂದು ಮಾದಿಗ ಸಮುದಾಯದ ನೀನು ನಮ್ಮ ಬೀದಿಗೆ ಏಕೆ ಬಂದಿದ್ದೀಯಾ ಎಂದು ಜೆಸಿಬಿ ಮೇಲೆ ಹತ್ತಿ ಮನ ಬಂದಂತೆ ಹಲ್ಲೆ ಮಾಡಿದರು. ನೀವು ನಮ್ಮ ಬೀದಿಗೆ ಬಂದರೆ ದೇವರಿಗೆ ಮೈಲಿಗೆಯಾಗುತ್ತದೆ ಎಂದು ಚಪ್ಪಲಿ ಹಾಕಿದ್ದ ಕಾಲಿನಿಂದ ಒದ್ದರು. ಅಸ್ವಸ್ಥನಾಗಿ ಬಿದ್ದರೂ ಯಾರೂ ನೀರು ಸಹ ಕೊಡಲಿಲ್ಲ, ಜೇಬಿನಲ್ಲಿದ್ದ ₹20 ಸಾವಿರ ಕಸಿದುಕೊಂಡರು. ದೇವಸ್ಥಾನಕ್ಕೆ ₹1 ಲಕ್ಷ ದಂಡ ಪಾವತಿಸಬೇಕು, ಇಲ್ಲದಿದ್ದರೆ ಬಟ್ಟೆ ಬಿಚ್ಚಿ ಬೀದಿಯಲ್ಲಿ ಮೆರವಣಿಗೆ ಮಾಡುತ್ತೇವೆ ಎಂದು ಎಳೆದಾಡಿದರು. ಬೀದಿಯಿಂದ ಹೊರಗೆ ತಳ್ಳಿದರು' ಎಂದು ಮಾರುತಿ ಪೊಲೀಸರಿಗೆ ದೂರು ನೀಡಿದ್ದಾರೆ.

ದೂರು ಆಧರಿಸಿ ಗೊಲ್ಲರ ಹಟ್ಟಿಯ ಕುಮಾರ, ಓಂಕಾರಪ್ಪ, ಪದ್ಮಾ, ರಾಮಣ್ಣ, ಜಗದೀಶ, ಚಿತ್ರಪ್ಪ, ಶಂಕರಪ್ಪ, ರಾಜಪ್ಪ, ತಮ್ಮಯ್ಯ, ನಾಗರಾಜ, ಶಿವರಾಮ, ಅಭಿ, ಅಪ್ಪು, ಮಂಜುನಾಥ್, ಬಸವರಾಜ್ ವಿರುದ್ಧ ಎಸ್‌ಸಿಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಘಟನಾ ಸ್ಥಳಕ್ಕೆ ಡಿವೈಎಸ್‌ಪಿ ಹಾಲಮೂರ್ತಿ ರಾವ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಒಬ್ಬ ಆರೋಪಿಯ ಬಂಧನವಾಗಿದ್ದು, ಉಳಿದವರ ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದರು.

'ಹಿಂದಿನ ಸಂಪ್ರದಾಯ'

'ಜೆಸಿಬಿ ಬರುವಾಗ ಡಿಷ್ ಕೇಬಲ್ ತುಂಡಾಗಿದ್ದರಿಂದ ಜಗಳ ಆರಂಭವಾಯಿತು. ಆ ಬಳಿಕ ಪರಿಶಿಷ್ಟ ಜಾತಿ ಯುವಕ ಎಂಬುದು ಗೊತ್ತಾಯಿತು. ಈ ಕೇರಿಗೆ ಬರಬಾರದು ಎಂಬುದು ಗೊತ್ತಿಲ್ಲವೇ ಎಂದು ಕೇಳಿದೆವು. ಹಲ್ಲೆ ನಡೆಸಿಲ್ಲ' ಎಂದು ಗ್ರಾಮದ ಜಗದೀಶ್ 'ಪ್ರಜಾವಾಣಿ'ಗೆ ಸ್ಪಷ್ಟಪಡಿಸಿದರು.

'ಗೊಲ್ಲರ ಹಟ್ಟಿಯಲ್ಲಿ ರಂಗನಾಥಸ್ವಾಮಿ ದೇಗುಲ ಇದೆ. ಹಿಂದಿನಿಂದಲೂ ಪರಿಶಿಷ್ಟ ಜಾತಿಯ ಜನ ಈ ಕೇರಿಗೆ ಬರುವುದಿಲ್ಲ. ಆಕಸ್ಮಿಕವಾಗಿ ಬಂದರೆ ನಾವು ಕೇಳುವುದೂ ಇಲ್ಲ. ನಾವೇ ಹಣ ಖರ್ಚು ಮಾಡಿ ಗಂಗೆಪೂಜೆ ಮಾಡಿಸುತ್ತೇವೆ. ಮಾರುತಿ ಕೂಡ ಗೊತ್ತಿಲ್ಲದೆ ಬಂದಿರಬಹುದು. ಆದ್ದರಿಂದ ತಿಳಿವಳಿಕೆ ಹೇಳಿ ಕಳುಹಿಸಲಾಗಿದೆ' ಎಂದರು.

'ರಂಗನಾಥಸ್ವಾಮಿ ದೇಗುಲ ಇರುವುದರಿಂದ ಯಾವುದೇ ಗೊಲ್ಲರ ಹಟ್ಟಿಗೂ ಪರಿಶಿಷ್ಟ ಜಾತಿಯ ಜನರು ಬರುವುದಿಲ್ಲ. ಅದೇ ಸಂಪ್ರದಾಯ ಇಲ್ಲಿಯೂ ಇದೆ ಅಷ್ಟೆ. ಅದರಲ್ಲೇನು ವಿಶೇಷ ಇಲ್ಲ' ಎಂದು ಹೇಳಿದರು.

ಚಿತ್ರಾವಳಿ



ರಾಜಾಜಿನಗರ ಆರ್‌.ಪಿ.ಎ. ಶಾಲೆಯ ಮೈದಾನದಲ್ಲಿ ಸಂಜೀವಿನಿ ವೀರಾಂಜನೇಯ ಸ್ವಾಮಿ ದೇವಸ್ಥಾನ ವತಿಯಿಂದ ನಟಿ ಲೀಲಾವತಿ ಸವಿ ನೆನಪಿನಲ್ಲಿ ಏರ್ಪಡಿಸಲಾಗಿದ್ದ 'ಲೀಲಾವತಿ ಅಮರ ಚಲನಚಿತ್ರ ಸಂಗೀತ ಸಂಜೆ' ಕಾರ್ಯಕ್ರಮದಲ್ಲಿ ಮಾಜಿ ಸಚಿವ ವಿ.ಸೋಮಣ್ಣ, ನಟ ವಿನೋದ್ ರಾಜ್, ನಿರ್ಮಾಪಕರಾದ ಚೆನ್ನೇಗೌಡ, ಭಾಮ ಹರೀಶ್, ಗೋವಿಂದರಾಜನಗರ ಮಂಡಲ ಬಿಜೆಪಿ ಅಧ್ಯಕ್ಷ ವಿಶ್ವನಾಥ ಗೌಡ ಮತ್ತು ಪಾಲಿಕೆ ಮಾಜಿ ಸದಸ್ಯರಾದ ರವೀಂದ್ರ, ಉಮೇಶ್ ಶೆಟ್ಟಿ, ಬಿಜೆಪಿ ಮುಖಂಡ ಸಿ.ಎಂ. ರಾಜಪ್ಪ ಅವರು ಲೀಲಾವತಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.



ಆನೇಕಲ್ ತಾಲ್ಲೂಕಿನ ಹುಲಿಮಂಗಲದಲ್ಲಿ ಬುಧವಾರ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು 'ಪ್ರಜಾವಾಣಿ' ಕ್ಯಾಲೆಂಡರ್ ಬಿಡುಗಡೆ ಮಾಡಿದರು. ವಿಧಾನ ಪರಿಷತ್‌ನ ಬೆಂಗಳೂರು ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಮೋಜಿಗೌಡ ಇತರರು ಭಾಗವಹಿಸಿದ್ದರು.



ನಗರದ ಮೈಸೂರು ರಸ್ತೆಯ ದೊಡ್ಡೇರಿಯಲ್ಲಿರುವ ಜಿ.ಆರ್‌. ಇಂಟರ್‌ನ್ಯಾನಲ್ ಪಬ್ಲಿಕ್ ಶಾಲೆಯಲ್ಲಿ ನಡೆದ ಕ್ರೀಡಾವಾರ್ಷಿಕೋತ್ಸವದಲ್ಲಿ ರಾಷ್ಟ್ರಮಟ್ಟದ ವಾಲಿಬಾಲ್ ಆಟಗಾರ ಶರತ್, ಅಥ್ಲೀಟ್ ನಿವೇತಾ ಟಿ. ಬೆಂಗಳೂರು ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಕೃಷ್ಣಸ್ವಾಮಿ, ಶಾಲೆಯ ಸಂಸ್ಥಾಪಕ ಮತ್ತು ಅಧ್ಯಕ್ಷ ರಾಮೇಗೌಡ, ಕಾರ್ಯದರ್ಶಿ ಗಿರೀಶ್ ಆರ್‌. ಪ್ರಾಚಾರ್ಯೆ ರೇಖಾ ಪಿ.ಸಿ ಭಾಗವಹಿಸಿದ್ದರು.

ಚಿತ್ರಕಲಾ ಪರಿಷತ್: 7ರಂದು ಚಿತ್ರಸಂತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಿತ್ರ ಕಲಾ ಪರಿಷತ್‌ನ 21ನೇ ವರ್ಷದ ಚಿತ್ರಸಂತೆ ಇದೇ 7ರಂದು ಕುಮಾರ ಕೃಪಾ ರಸ್ತೆ ಮತ್ತು ಪರಿಷತ್ ಆವರಣದಲ್ಲಿ ನಡೆಯಲಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್.ಶಂಕರ್, 'ಈ ಬಾರಿ ಉನ್ನತ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಚಿತ್ರಸಂತೆಯನ್ನು ಆಯೋಜಿಸಲಾಗುತ್ತಿದೆ. ಬಾಹ್ಯಾಕಾಶ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಭಾರತೀಯ ವಿಜ್ಞಾನಿಗಳಿಗೆ ಚಿತ್ರಸಂತೆಯನ್ನು ಸಮರ್ಪಿಸಲಾಗುತ್ತಿದೆ' ಎಂದು ಅವರು ತಿಳಿಸಿದರು.

'ಜ.7ರಂದು ಬೆಳಿಗ್ಗೆ 10.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಿತ್ರ ಸಂತೆ ಉದ್ಘಾಟಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಿತ್ರಕಲಾ ಪ್ರದರ್ಶನಕ್ಕೆ ಚಾಲನೆ ನೀಡುವರು' ಎಂದು ವಿವರಿಸಿದರು.

'ಚಿತ್ರಸಂತೆಯಲ್ಲಿ 22 ರಾಜ್ಯಗಳಿಂದ 1500 ಮಂದಿ ಕಲಾವಿದರ ಕಲಾಕೃತಿಗಳು ಪ್ರದರ್ಶನಗೊಳ್ಳಲಿವೆ. ಒಟ್ಟು 2726 ಕಲಾವಿದರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದರು. ಪ್ರತಿ ವರ್ಷ 1200 ಕಲಾವಿದರಿಗೆ ಅವಕಾಶ ಕಲ್ಪಿಸಲಾಗುತ್ತಿತ್ತು. ಈ ಬಾರಿ ಹೆಚ್ಚು ಅರ್ಜಿಗಳು ಸಲ್ಲಿಕೆಯಾದ ಕಾರಣ, ಶಿವಾನಂದ ವೃತ್ತದ ಮೇಲ್ಸೇತುವೆ ಕೆಳ ಭಾಗದಲ್ಲಿ ಹೆಚ್ಚುವರಿಯಾಗಿ 300 ಮಳಿಗೆಗಳನ್ನು ತೆರೆಯಲಾಗುತ್ತಿದೆ' ಎಂದರು.

ಫೀಡರ್ ಬಸ್ ಸೇವೆ: ಚಿತ್ರಸಂತೆಗೆ ಬರುವವರಿಗೆ ಮೆಜೆಸ್ಟಿಕ್ ಮತ್ತು ಮಂತ್ರಿ ಮಾಲ್ ಮೆಟ್ರೊ ನಿಲ್ದಾಣಗಳಿಂದ ಶಿವಾನಂದ ವೃತ್ತದ ಮಾರ್ಗವಾಗಿ ವಿಧಾನಸೌಧದವರೆಗೆ ಜ.7 ರಂದು ಬೆಳಿಗ್ಗೆ 8ರಿಂದ ರಾತ್ರಿ 9 ರವರೆಗೆ ಫೀಡರ್ ಬಸ್ ಸೇವೆ ಕಲ್ಪಿಸುವಂತೆ ಸಂಬಂಧಪಟ್ಟವರಿಗೆ ಮನವಿ ಸಲ್ಲಿಸಲಾಗಿದೆ ಎಂದರು.

6ರಂದು 'ಚಿತ್ರಕಲಾ ಸಮ್ಮಾನ್': 'ಜ.6ರಂದು ಬೆಳಿಗ್ಗೆ 11.30ಕ್ಕೆ ಚಿತ್ರಕಲಾ ಪರಿಷತ್ತಿನಿಂದ ನಾಲ್ವರು ಕಲಾವಿದರಿಗೆ ಗೃಹ ಸಚಿವ ಡಾ. ಜಿ. ಪರಮೇಶ್ವರ್ 'ಚಿತ್ರಕಲಾ ಸಮ್ಮಾನ್' ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ' ಎಂದರು.



ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್‌. ಶಂಕರ್ (ಎಡದಿಂದ ಮೂರನೆಯವರು) ಮತ್ತು ಪರಿಷತ್ತಿನ ಪದಾಧಿಕಾರಿಗಳು ಕಲಾಕೃತಿಗಳನ್ನು ಪ್ರದರ್ಶಿಸಿದರು — ಪ್ರಜಾವಾಣಿ ಚಿತ್ರ

'ಸಂತೆ'ಯಲ್ಲಿ ಸೌಲಭ್ಯಗಳು

- ಶಿವಾನಂದ ಸರ್ಕಲ್‌ನಿಂದ ವಿಂಡ್ಸನ್ಮ್ಯಾನರ್‌ವರೆಗಿನ ಕುಮಾರ ಕೃಪಾ ರಸ್ತೆಯಲ್ಲಿ ಹಾಗೂ ಕ್ರೆಸೆಂಟ್ ರಸ್ತೆಯ ಸ್ವಲ್ಪ ಭಾಗದಲ್ಲಿ ಕಲಾಕೃತಿಗಳ ಪ್ರದರ್ಶನವಿರುತ್ತದೆ.
- ಕ್ರೆಸೆಂಟ್ ರಸ್ತೆಯಲ್ಲಿ ಗಾಲ್ಫ್ ಕ್ಲಬ್‌ವರೆಗೆ, ರೇಸ್‌ಕೋರ್ಸ್ ರಸ್ತೆ ಹಾಗೂ ಬಿಡಿಎ ಆವರಣ, ರೈಲ್ವೆ ಪ್ಯಾರಲಲ್ ರಸ್ತೆಗಳಲ್ಲಿ ವಾಹನ ನಿಲುಗಡೆ ವ್ಯವಸ್ಥೆ.
- ಅಂಗವಿಕಲರು ಮತ್ತು ಹಿರಿಯ ನಾಗರಿಕರ ಕಲಾಕೃತಿಗಳಿಗಾಗಿ ಶಿವಾನಂದ ವೃತ್ತದಿಂದ ಗುರುರಾಜ ಕಲ್ಯಾಣ ಮಂಟಪದವರೆಗಿನ ಸ್ಟೀಲ್ ಬ್ರಿಡ್ಜ್ ತಳಭಾಗದಲ್ಲಿ ಮಾರಾಟದ ಮಳಿಗೆ ವ್ಯವಸ್ಥೆ.
- 20 ಆಯ್ದ ಸ್ಥಳಗಳಲ್ಲಿ ಮೊಬೈಲ್ ಶೌಚಾಲಯ
- ಹಲವೆಡೆ ಸಿ.ಸಿ ಟಿ.ವಿ ಕ್ಯಾಮೆರಾ ಅಳವಡಿಕೆ

ಐಡಿಯಾಥಾನ್ 2023: ಅಂತಿಮ ಸುತ್ತು 13ರಂದು

ಬೆಂಗಳೂರು: 'ಬ್ರ್ಯಾಂಡ್ ಬೆಂಗಳೂರು ಐಡಿಯಾಥಾನ್ 2023' ಸ್ಪರ್ಧೆಯ ಅಂತಿಮ ಸುತ್ತು ಇದೇ 13ರಂದು ನಡೆಯುವ 'ಯೂತ್ ಲೀಡರ್‌ಶಿಪ್ ಸಮ್ಮೇಳನದಲ್ಲಿ ನಡೆಯಲಿದೆ.

ಈ ಸಮ್ಮೇಳನದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶಾಲಾ ಮಕ್ಕಳ ಜತೆ ಸಂವಾದ ನಡೆಸಲಿದ್ದಾರೆ. ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾ ಮೂರ್ತಿ, ನಟ ರಮೇಶ್ ಅರವಿಂದ್, ಅಭಿವೃದ್ಧಿ ಆಯುಕ್ತೆ ಶಾಲಿನಿ ರಜನೀಶ್ ಭಾಗವಹಿಸಲಿದ್ದಾರೆ.

ಈ ಕಾರ್ಯಕ್ರಮವನ್ನು ಗ್ರೇಕ್ಯಾಪ್ಸ್ ನಾಲೆಡ್ಜ್ ಟ್ರೈಬ್ ಹಾಗೂ ಶಿಕ್ಷಣ ತಜ್ಞ ಗಿರಿ ಪಿಕ್ ಬ್ರೈನ್ ಬಾಲಸುಬ್ರಮಣಿಯಂ ನಡೆಸಿಕೊಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

50 ಶಾಲೆಗಳು ಐಡಿ ಯಾಥಾನ್ ಸ್ಪರ್ಧೆಗೆ ಆಯ್ಕೆಯಾಗಿದ್ದವು. ನಂತರದ ಹಂತದ ಸ್ಪರ್ಧೆಯಿಂದ ಅಗ್ರ 25 ಶಾಲೆಗಳು ಸ್ಪರ್ಧೆಯಲ್ಲಿ ಮುಂದು ವರಿದವು. ಈ ಶಾಲೆಗಳ ಪೈಕಿ ಬನಶಂಕರಿಯ ಪ್ರೆಸಿಡೆನ್ಸಿ ಶಾಲೆ, ಎಸ್‌ಜೆಆರ್ ಕೆಂಗೇರಿ ಪಬ್ಲಿಕ್ ಶಾಲೆ, ಆರ್ಕಿಡ್ ಇಂಟರ್‌ನ್ಯಾಷನಲ್ ಶಾಲೆ, ಸೇಂಟ್ ಮಾರ್ಕ್ಸ್ ಕಾನ್ವೆಂಟ್, ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಶಾಲೆ ಬನಶಂಕರಿ, ಮಿತ್ರಾ ಅಕಾಡೆಮಿ, ಕಸ್ತೂರಿ ನಗರ ಪ್ರೆಸಿಡೆನ್ಸಿ ಶಾಲೆ ಅಂತಿಮ ಸುತ್ತಿಗೆ ಪ್ರವೇಶ ಪಡೆದಿವೆ.

ಬ್ರ್ಯಾಂಡ್ ಬೆಂಗಳೂರು ಯೋಜನೆಯ ಮೂಲಕ ಬೆಂಗಳೂರು ನಗರವನ್ನು ಸ್ವಚ್ಛ, ಹಸಿರು ಹಾಗೂ ಸುಸ್ಥಿರ ನಗರವಾಗಿ ಮಾರ್ಪಾಡು ಮಾಡುವ ಉದ್ದೇಶದಿಂದ ಇದೇ ಮೊದಲ ಬಾರಿಗೆ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಡಿ.ಕೆ. ಶಿವಕುಮಾರ್ ಅವರ ಪುತ್ರಿ ಐಶ್ವರ್ಯ ಡಿಕೆಎಸ್ ಹೆಗಡೆ ಈ ಕಾರ್ಯಕ್ರಮದ ರೂವಾರಿ.

ಇಪಿಎಫ್‌ಒ: ದಾಖಲೆ ಸಲ್ಲಿಕೆಗೆ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಗರಿಷ್ಠ ಪಿಂಚಣಿ ಕೋರಿ ಉದ್ಯೋಗಿಗಳು ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಉದ್ಯೋಗದಾತ ಸಂಸ್ಥೆಗಳು, ವೇತನದ ವಿವರ ಹಾಗೂ ಇತರೆ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವ ಅವಧಿಯನ್ನು ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಮೇ 31ರವರೆಗೆ ವಿಸ್ತರಿಸಿದೆ.

ಹೆಚ್ಚಿನ ವೇತನ ಆಧಾರದ ಮೇಲೆ ಗರಿಷ್ಠ ಪಿಂಚಣಿ ಪಡೆಯುವ ಸಂಬಂಧ ಉದ್ಯೋಗಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ (ಉದ್ಯೋಗಿ ಮತ್ತು ಉದ್ಯೋಗದಾತ ಸಂಸ್ಥೆಯ ಜಂಟಿ ಘೋಷಣೆ ಸಹಿತ). ಈ ಅರ್ಜಿಗಳಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವ ಗಡುವನ್ನು ಈ ಮೊದಲು 2023ರ ಡಿಸೆಂಬರ್ 31ರವರೆಗೆ ನಿಗದಿಪಡಿಸಲಾಗಿತ್ತು ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ತಿಳಿಸಿದೆ.

ಜಂಟಿ ಘೋಷಣೆಗೆ ಸಂಬಂಧಿಸಿದಂತೆ 3.6 ಲಕ್ಷಕ್ಕೂ ಹೆಚ್ಚು ಅರ್ಜಿಗಳ ಮೌಲ್ಯಮಾಪನ ಬಾಕಿ ಇದೆ. ಉದ್ಯೋಗದಾತ ಸಂಸ್ಥೆಗಳು ಇನ್ನೂ ಈ ಅರ್ಜಿಗಳಿಗೆ ಸಂಬಂಧಿಸಿದಂತೆ ಸೂಕ್ತ ದಾಖಲೆಗಳನ್ನು ಅಪ್‌ಲೋಡ್ ಮಾಡಿಲ್ಲ ಎಂದು ತಿಳಿಸಿದೆ.

ಉದ್ಯೋಗಿಗಳ ಪಿಂಚಣಿ (ತಿದ್ದುಪಡಿ) 2014ರ ಯೋಜನೆಯ (ಇಪಿಎಸ್) ಸಿಂಧುತ್ವವನ್ನು 2022ರಲ್ಲಿ ಸುಪ್ರೀಂ ಕೋರ್ಟ್ ಎತ್ತಿಹಿಡಿದಿತ್ತು.

ನಮ್ಮ ಮೆಟ್ರೊಗೆ ಪೂರ್ಣಕಾಲಿಕ ಎಂಡಿ ನೇಮಕಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ 'ನಮ್ಮ ಮೆಟ್ರೊ'ಗೆ ಪೂರ್ಣಕಾಲಿಕ ವ್ಯವಸ್ಥಾಪಕ ನಿರ್ದೇಶಕರನ್ನು ನೇಮಕ ಮಾಡಬೇಕು. ಈ ವಿಷಯದಲ್ಲಿ ಕೇಂದ್ರ ನಗರ ವ್ಯವಹಾರಗಳ ಸಚಿವ ಹರದೀಪ್ ಸಿಂಗ್ ಪುರಿ ಮಧ್ಯಪ್ರವೇಶಿಸಬೇಕು ಎಂದು ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಒತ್ತಾಯಿಸಿದ್ದಾರೆ.

ಕೇಂದ್ರ ಸಚಿವರನ್ನು ಬುಧವಾರ ಇಲ್ಲಿ ಭೇಟಿ ಮಾಡಿದ ತೇಜಸ್ವಿ ಸೂರ್ಯ, ಈ ಸಂಬಂಧ ಮನವಿ ಸಲ್ಲಿಸಿದರು. ನಮ್ಮ ಮೆಟ್ರೊ ಕಾಮಗಾರಿಗಳ ಪರಿಶೀಲನೆಗಾಗಿ ಬೆಂಗಳೂರಿಗೆ ಬರುವಂತೆ ಸಚಿವರಿಗೆ ಮನವಿ ಮಾಡಿದರು.

ನಮ್ಮ ಮೆಟ್ರೊಗೆ ಅಂಜುಂ ಪರ್ವೇಜ್ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆ. ಅವರು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹೊಣೆಯನ್ನೂ ನಿಭಾಯಿಸುತ್ತಿದ್ದಾರೆ.

'ಪೂರ್ಣಕಾಲಿಕ ವ್ಯವಸ್ಥಾಪಕ ನಿರ್ದೇಶಕರು ಇಲ್ಲದ ಕಾರಣಕ್ಕೆ ಮೆಟ್ರೊ ಕಾಮಗಾರಿಗಳು ವಿಳಂಬವಾಗುತ್ತಿವೆ' ಎಂದು ದೂರಿದ್ದಾರೆ.

ಯುವಿಸಿಇ: 25 ಕೋಟಿ ಅನುದಾನ ಬಳಕೆಗೆ ಸಮ್ಮತಿ

ಬೆಂಗಳೂರು: ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜನ್ನು (ಯುವಿಸಿಇ) ಮೇಲ್ದರ್ಜೆಗೇರಿಸಲು ಮಂಜೂರಾದ ₹25 ಕೋಟಿ ಬಳಕೆಗೆ ಸರ್ಕಾರ ಅನುಮೋದನೆ ನೀಡಿದೆ.

ಯುವಿಸಿಇಗೆ 2023ರಲ್ಲಿ ವಿಶ್ವವಿದ್ಯಾಲಯದ ಸ್ಥಾನ ನೀಡಲಾಗಿತ್ತು. ಐಐಟಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು 2023-24ರ ಬಜೆಟ್‌ನಲ್ಲಿ ₹25 ಕೋಟಿ ಮೀಸಲಿಡಲಾಗಿತ್ತು. ಆದರೆ, ಹಣ ಬಳಕೆಗೆ ಸಲ್ಲಿಸಿದ್ದ ಪ್ರಸ್ತಾವ ಎರಡು ಬಾರಿ ತಿರಸ್ಕೃತಗೊಂಡಿತ್ತು. ಮತ್ತೆ ಮೂರನೇ ಬಾರಿ ಪ್ರಸ್ತಾವ ಸಲ್ಲಿಸಲಾಗಿತ್ತು. 'ಮಾರ್ಚ್ 2024ರ ಮೊದಲು ಯುವಿಸಿಇ ಹಣ ಬಳಸಿಕೊಳ್ಳಬೇಕಿದೆ.

ಮುಂಬೈನ ಐಐಟಿಯಲ್ಲಿ ಪ್ರಾಧ್ಯಾಪಕರಾಗಿರುವ ಡಿ ಮಂಜುನಾಥ್ ಅವರನ್ನು ನಿರ್ದೇಶಕರನ್ನಾಗಿ ನೇಮಿಸಲಾಗಿದೆ. ನಿಯೋಜಿತ ನಿರ್ದೇಶಕರು ಕರ್ತವ್ಯಕ್ಕೆ ವರದಿ ಮಾಡಲು ಸಮಯವನ್ನು ಕೋರಿದ್ದಾರೆ. ಯುವಿಸಿಇ ಆಡಳಿತ ಮಂಡಳಿ ಅವರಿಗೆ 40 ದಿನಗಳ ಹೆಚ್ಚುವರಿ ಸಮಯ ನೀಡಲು ಒಪ್ಪಿಕೊಂಡಿದೆ. ಅವರ ವಿಳಂಬದಿಂದಾಗಿ ಅಭಿವೃದ್ಧಿ ಚಟುವಟಿಕೆಗಳಿಗೆ ಅಡ್ಡಿಯಾಗುತ್ತಿದೆ' ಎಂದು ಯುವಿಸಿಇ ಅಧ್ಯಾಪಕರು ದೂರಿದ್ದಾರೆ.

ನಗರದಲ್ಲಿ ಇಂದು



ಪ್ರಜ್ವಲ್ ದೇವರಾಜ್

ಕಾಲೇಜು ದಿನಾಚರಣೆ: ಅತಿಥಿಗಳು: ಪ್ರಜ್ವಲ್ ದೇವರಾಜ್, ಆನಂದ್ ರಾಜ್, ಎನ್‌.ವಿ. ಭಟ್, ಅಧ್ಯಕ್ಷತೆ: ಅನಂತ ಕೆ. ಅತ್ರೆ, ಉಪಸ್ಥಿತಿ: ಪಿ.ಸಿ. ನಾಗರಾಜ್, ಆಯೋಜನೆ ಮತ್ತು ಸ್ಥಳ: ವಿಜಯ ಪದವಿ ಪೂರ್ವ ಕಾಲೇಜು, ಜಯನಗರ, ಬೆಳಿಗ್ಗೆ 9.30

ಭಾರತೀಯ ಸಂಸ್ಕೃತಿ ಸಮ್ಮೇಳನ, ಅಮೃತಮಹೋತ್ಸವ: ಉದ್ಘಾಟನೆ: ಬಿ.ವಿ. ಮುರಳಿ ಕೃಷ್ಣ, ಕೆ.ಎಸ್. ಬಸವರಾಜ್, ರಮೇಶ್ ಕುಮಾರ್, ಅಧ್ಯಕ್ಷತೆ: ಡಾ.ಎಲ್‌.ಕೆ. ರಾಜೀವ್, ಎನ್‌.ಎಸ್. ಪ್ರಸನ್ನ, ಆಯೋಜನೆ: ಯೂತ್ ಹಾಸ್ಟೆಲ್ ಅಸೋಸಿಯೇಷನ್ ಆಫ್ ಇಂಡಿಯಾ, ಸ್ಥಳ: ತೆರಿಗೆ ಭವನ, ನಾಗರಬಾವಿ, ಬೆಳಿಗ್ಗೆ 10

ವಿದ್ಯಾರ್ಥಿ ಸಂಘದ ಉದ್ಘಾಟನೆ: ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, ಪಿ. ದಯಾನಂದ್ ಪೈ, ಅವಿರಾಮ್ ಶರ್ಮ, ರವಿ ವೆಂಕಟೇಶಂ, ಅಧ್ಯಕ್ಷತೆ: ಬಿ.ಎಸ್. ರಾಗಿಣಿ ನಾರಾಯಣ್, ಆಯೋಜನೆ: ಬಿಎಂಎಸ್ ಎಜುಕೇಷನಲ್ ಟ್ರಸ್ಟ್, ಸ್ಥಳ: ಬಿಎಂಎಸ್ ಕಾಲೇಜ್ ಫಾರ್ ವುಮೆನ್, ಬಸವನಗುಡಿ, ಬೆಳಿಗ್ಗೆ 11.30

ವಿಶ್ವ ಬ್ರೈಲ್ ದಿನಾಚರಣೆ: ಅತಿಥಿಗಳು: ಬಿ. ನಾಗೇಂದ್ರ, ಅಜಯ್ ಅರೋರ, ಉಮಾ ಮಹದೇವನ್, ದಾಸ್ ಸೂರ್ಯವಂಶಿ, ಸಿದ್ಧೇಶ್ವರ್, ಕೃಷ್ಣ ಗುರೂಜಿ, ಹರಿಪ್ರಸಾದ್, ನಿತಿನ್ ಮೆಹ್ತಾ, ಆಯೋಜನೆ: ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಮತ್ತು ಗೈಡ್ಸ್, ಅರಮನೆ ರಸ್ತೆ, ಮಧ್ಯಾಹ್ನ 3ರಿಂದ

ಪಿಇಎಸ್ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ: ಅತಿಥಿಗಳು: ಜವಹರ್ ದೊರೆಸ್ವಾಮಿ, ಸ್ವಾಮಿನಾಥನ್ ಗುರುಮೂರ್ತಿ, ಸುಧಾಂಶು ಮಣಿ, ಶೃತಿ ಕಣ್ಣನ್, ಗಗನ್ ರೆಡ್ಡಿ, ಸನ್ಮಾನ: ಸುರೇಶ್ ಕೃಷ್ಣಮೂರ್ತಿ, ಗೌರಿ ಶ್ರೀನಿವಾಸ, ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಆಯೋಜನೆ ಮತ್ತು ಸ್ಥಳ: ಪಿಇಎಸ್ ವಿಶ್ವವಿದ್ಯಾಲಯ, ಆರ್‌.ಆರ್. ಆವರಣ, ಬಿಎಸ್‌ಕೆ 3ನೇ ಹಂತ, ಸಂಜೆ 4.50

ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಆಶೀರ್ವಚನ, ಧನುರ್ಮಾಸದ ಇಷ್ಟಲಿಂಗ ಮಹಾಶಿವಪೂಜೆ: ಸಾನ್ನಿಧ್ಯ: ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದ ಸ್ವಾಮೀಜಿ, ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಅತಿಥಿಗಳು: ಬಿ.ವೈ. ವಿಜಯೇಂದ್ರ, ಎಂ. ಶಿವ ಕುಮಾರಸ್ವಾಮಿ, ಆಯೋಜನೆ: ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ, ಸ್ಥಳ: ಜಗಜ್ಯೋತಿ ಬಸವೇಶ್ವರ ಸುಜ್ಞಾನ ಮಂಟಪ, ಕಾರ್ಡ್ ರಸ್ತೆ, ವಿಜಯನಗರ, ಸಂಜೆ 6

'ನಿರಂತರಂ' ರಾಷ್ಟ್ರೀಯ ಸಂಗೀತ, ನೃತ್ಯೋತ್ಸವ: ಅತಿಥಿ: ಡಿ.ಬಿ. ನಟೇಶ್, ಕರ್ನಾಟಕ ಶಾಸ್ತ್ರೀಯ ಕೊಳಲು ವಾದನ: ಆರ್. ರಘುನಂದನ್ ರಾಮಕೃಷ್ಣ, ಪಿಟೀಲು: ಅಚ್ಯುತ್ ರಾವ್, ಮೃದಂಗ: ವಿನೋದ್ ಶ್ಯಾಂ ಆನೂರ, ಘಟ: ಶಮಿತ್ ಗೌಡ, ಭರತನಾಟ್ಯ ಪ್ರದರ್ಶನ: ದಿವ್ಯಶ್ರೀ, ಪ್ರತಿಭಾ ಪ್ರಹ್ಲಾದ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5

ಯು.ಆರ್. ಅನಂತಮೂರ್ತಿ ಸ್ಮಾರಕ ಉಪನ್ಯಾಸ: ಅರುಣಾ ರಾಯ್, ಆಯೋಜನೆ: ಬಹುವಚನ, ರುಜುವಾತು, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30ರಿಂದ

'ಗೋಕಾಕರ ಬದುಕು-ಬರಹ' ಕುರಿತು ಉಪನ್ಯಾಸ: ವಿಭಾ ಪುರೋಹಿತ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಪ್ರವಚನ ವಾಹಿನಿ: 'ಕುಮಾರವ್ಯಾಸ ಭಾರತ' ಕುರಿತು ಉಪನ್ಯಾಸ: ಕೆ. ಲಕ್ಷ್ಮೀನಾರಾಯಣ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಕಾಯುವ ಕಾಯಕ' ನಾಟಕ ಪ್ರದರ್ಶನ: ನಿರ್ದೇಶನ: ಅರ್ಚನಾ ಶ್ಯಾಮ್, ಆಯೋಜನೆ: ನಾಟಕ ಬೆಂಗ್ಳೂರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಸ್ಪರ್ಧಾವಾಣಿ ಓದಿ

ರಾಮಭಕ್ತರನ್ನು ಬಂಧಿಸಿದರೆ ಸರ್ಕಾರ ಉಳಿಯದು– ಅಶೋಕ ● ಹಿಂದೂ ವಿರೋಧಿ ನೀತಿಗೆ ತಕ್ಕ ಪಾಠ– ವಿಜಯೇಂದ್ರ

ರಾಜ್ಯವ್ಯಾಪಿ ಬಿಜೆಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಹುಬ್ಬಳ್ಳಿ: 'ಹುಬ್ಬಳ್ಳಿಯಲ್ಲಿ 31 ವರ್ಷ ಹಳೆಯ ಪ್ರಕರಣದಲ್ಲಿ ರಾಮಭಕ್ತರನ್ನು ಬಂಧಿಸಿ ಕಿರುಕುಳ ನೀಡಲಾಗುತ್ತಿದೆ' ಎಂದು ಆರೋಪಿಸಿ ಬಿಜೆಪಿ ರಾಜ್ಯ ಘಟಕವು ಬೆಂಗಳೂರು, ಹುಬ್ಬಳ್ಳಿ ಸೇರಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬುಧವಾರ ಪ್ರತಿಭಟನೆ ನಡೆಸಿತು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆದರೆ, ಹುಬ್ಬಳ್ಳಿಯಲ್ಲಿ ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆ ವೇಳೆ ಮಾತನಾಡಿದ ವಿಜಯೇಂದ್ರ, 'ರಾಮಭಕ್ತರನ್ನು ಬಂಧಿಸುವ ಮೂಲಕ ಹಿಂದೂಗಳ ಹಕ್ಕುಗಳನ್ನು ದಮನ ಮಾಡುವ ಮತ್ತು ಹಿಂದೂ ವಿರೋಧಿ ನೀತಿ ಅನುಸರಿಸುತ್ತಿರುವ ಸರ್ಕಾರಕ್ಕೆ ತಕ್ಕ ಪಾಠ ಕಲಿಸುತ್ತೇವೆ' ಎಂದು ಎಚ್ಚರಿಕೆ ನೀಡಿದರು. ಆ ಬಳಿಕ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರನ್ನು ಭೇಟಿ ಮಾಡಿ ಮನವಿ ಪತ್ರವೊಂದನ್ನು ಸಲ್ಲಿಸಿದರು.

ಸಂಸದ ಡಿ.ವಿ.ಸದಾನಂದಗೌಡ ಮಾತನಾಡಿ, 'ಶ್ರೀರಾಮನ ವಿರುದ್ಧ ಕಾಂಗ್ರೆಸ್ ನೀತಿಯಿಂದ ರಾಜ್ಯ ಸರ್ಕಾರ ವಿರುದ್ಧ ಜನರು ಒಗ್ಗಟ್ಟಾಗಿದ್ದಾರೆ. ಹಿಂದೂಗಳು ತೂಕಡಿಕೆ ಬಿಡಬೇಕು. ಸಿದ್ದರಾಮಯ್ಯ ಸರ್ಕಾರ ಕೀಳುಮಟ್ಟದ ರಾಜಕಾರಣ ಬಿಡಬೇಕು' ಎಂದು ತಿಳಿಸಿದರು.

ಸರ್ಕಾರ ಹೆಚ್ಚು ಸಮಯ ಇರಲ್ಲ: ಹುಬ್ಬಳ್ಳಿ ಪ್ರತಿಭಟನೆಯಲ್ಲಿ ಮಾತನಾಡಿದ ಆರ್.ಅಶೋಕ, 'ರಾಮಭಕ್ತರ ಬಂಧನ ಇದೇ ರೀತಿ ಮುಂದುವರಿಸಿದರೆ, ರಾಜ್ಯ ಸರ್ಕಾರ ಹೆಚ್ಚು ಸಮಯ ಅಧಿಕಾರದಲ್ಲಿ ಇರಲ್ಲ' ಎಂದು ಎಚ್ಚರಿಕೆ ನೀಡಿದರು.

'ವೀರಶೈವ, ಲಿಂಗಾಯತ ಸಮುದಾಯವನ್ನು ಒಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗ ಹಿಂದೂ-ಮುಸ್ಲಿಮರ ನಡುವೆ ಬೆಂಕಿ ಹಚ್ಚುವ ರಾಯಭಾರಿ ಆಗಿದ್ದಾರೆ. ಮತಾಂಧ ಟಿಪ್ಪು ಸಂಸ್ಕೃತಿ ಹೇರಲು ಹೊರಟಿದ್ದಾರೆ. ಇದು ಕಾಂಗ್ರೆಸ್ ಮನೆಯನ್ನು ಸುಡುತ್ತದೆ' ಎಂದರು.

'ಶ್ರೀರಾಮನ ಕೆಣಕಿದರೆ ಹನುಮಂತ ಸುಮ್ಮನೆ ಬಿಡಲ್ಲ. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸದಂತೆ ನ್ಯಾಯಾಲಯದಲ್ಲಿ ಅರ್ಜಿ ಹಾಕಿದವರ ಹಿಂದೆ ಕಾಂಗ್ರೆಸ್ ಇತ್ತು. ರಾಮಾಯಣ ಕಾಲ್ಪನಿಕ ಕಥೆ ಎಂದಿದ್ದ ಅವರು ರಾಮನ ಜನನ ಪ್ರಮಾಣಪತ್ರ ಕೇಳಿದ್ದರು. ನಾವೇನು ಇತರ ಧರ್ಮೀಯ ದೇವರ ಜನನ ಪ್ರಮಾಣಪತ್ರ ಕೇಳಿದ್ದೇವೆಯೆ' ಎಂದು ಅವರು ಪ್ರಶ್ನಿಸಿದರು.

ವಾರಂಟ್ ನೀಡಿಲ್ಲ: 'ಶ್ರೀಕಾಂತ ಪೂಜಾರಿ ಅವರನ್ನು ಬಂಧಿಸುವ ಮುನ್ನ ವಾರಂಟ್ ನೀಡಿಲ್ಲ. ವಕೀಲರನ್ನು ಸಂಪರ್ಕಿಸಲು ಅವಕಾಶ ನೀಡಿಲ್ಲ. 1992ರಲ್ಲಿ ನಡೆದ ಗಲಭೆ ಸಂಬಂಧ ದೂರೂ ಇಲ್ಲ, ಎಫ್‌ಐಆರ್ ಪ್ರತಿಯೂ ಠಾಣೆಯಲ್ಲಿ ಇಲ್ಲ. ನಿಮಗೆ ಕಾನೂನು ಜ್ಞಾನ ಇದೆಯೇ? ಜಾಮೀನು ಸಿಗದಂತೆ ಕುತಂತ್ರ ಮಾಡಿ, ಬಂಧಿಸಿದ್ದಾರೆ. ರಾಜ್ಯದ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ದೀರ್ಘ ಕಾಲದಿಂದ ಬಾಕಿಯುಳಿದಿರುವ 69 ಸಾವಿರ ಪ್ರಕರಣಗಳಿವೆ. ಎಲ್ಲರನ್ನೂ ಬಂಧಿಸುತ್ತೀರಾ?' ಎಂದರು.

ಬೆಳಗಾವಿ, ವಿಜಯಪುರ, ಬಾಗಲಕೋಟೆ, ಹಾವೇರಿ, ಗದಗ, ಉತ್ತರ ಕನ್ನಡ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲೂ ಪ್ರತಿಭಟನೆ ನಡೆಯಿತು.



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ವಿ.ಸುನೀಲ್‌ಕುಮಾರ್, ಡಾ.ಸಿ.ಎನ್.ಅಶ್ವತ್ಥನಾರಾಯಣ, ಪಿ.ಸಿ. ಮೋಹನ್, ಬಿ.ವೈ.ವಿಜಯೇಂದ್ರ, ಡಿ.ವಿ.ಸದಾನಂದಗೌಡ, ಛಲವಾದಿ ನಾರಾಯಣಸ್ವಾಮಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

'ಶ್ರೀಕಾಂತನನ್ನು ಬಂಧಿಸದಿದ್ದರೆ ಶ್ರೀರಾಮನೂ ಕ್ಷಮಿಸಲಾರ'

ಬೆಂಗಳೂರು: 'ರಾಮಭಕ್ತ ಎಂದು ಸಮಾಜದೆದುರು ನಕಲಿ ವೇಷ ತೊಟ್ಟು ಮೆರೆಯುವ ಹುಬ್ಬಳ್ಳಿಯ ಶ್ರೀಕಾಂತ ಪೂಜಾರಿ ಕಾನೂನಿನ ದೃಷ್ಟಿಯಲ್ಲಿ ಸಮಾಜಘಾತುಕ ವ್ಯಕ್ತಿ. ತನ್ನ ಅಪರಾಧ ಕೃತ್ಯಗಳಿಂದ ರಕ್ಷಣೆ ಸಿಗಲಿ ಎಂಬ ಕಾರಣಕ್ಕೆ ಧರ್ಮ ರಕ್ಷಣೆ ನಾಟಕವಾಡುವ ಇಂಥವರನ್ನು ಬಂಧಿಸದೆ, ರಾಜಮರ್ಯಾದೆಯಿಂದ ಶಿರಬಾಗಬೇಕಿತ್ತೇ? ಶ್ರೀರಾಮಚಂದ್ರನೂ ಕ್ಷಮಿಸಲಾರ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ತಮ್ಮ 'ಎಕ್ಸ್'ನಲ್ಲಿ ಶ್ರೀಕಾಂತ ಪೂಜಾರಿ ವಿರುದ್ಧದ ಪ್ರಕರಣಗಳ ಪಟ್ಟಿಯನ್ನು ಟ್ಯಾಗ್ ಮಾಡಿರುವ ಮುಖ್ಯಮಂತ್ರಿ, 'ಅಕ್ರಮ ಸಾರಾಯಿ ಮಾರಾಟ, ದೊಂಬಿ, ಮಟ್ಕಾ, ಜೂಜಾಟ ಮುಂತಾದ 16 ಸಮಾಜ ಘಾತುಕ ಕೃತ್ಯಗಳಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ವ್ಯಕ್ತಿಯ ಪರವಾಗಿ ಪ್ರತಿಭಟನೆ ನಡೆಸುತ್ತಿರುವ ಬಿಜೆಪಿ ನಾಯಕರು, ಆತನ ಎಲ್ಲ ಅಪರಾಧ ಕೃತ್ಯಗಳಿಗೆ ತಮ್ಮ ಪಕ್ಷದ ಬೆಂಬಲವಿದೆ ಎಂಬುದನ್ನು ಬಹಿರಂಗವಾಗಿ ಹೇಳಲಿ ಅಥವಾ ಪ್ರತಿಭಟನೆ ಕೈಬಿಟ್ಟು ಸಾರ್ವಜನಿಕವಾಗಿ ಕ್ಷಮೆ ಕೋರಲಿ' ಎಂದು ಅವರು ಆಗ್ರಹಿಸಿದ್ದಾರೆ.

'2023ನೇ ಸಾಲಿನಲ್ಲಿ ಹುಬ್ಬಳ್ಳಿ–ಧಾರವಾಡ ಕಮಿಷನರೇಟ್ ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ, ಕಳ್ಳತನ, ಸುಲಿಗೆ, ವಂಚನೆ, ದೊಂಬಿ ಮುಂತಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದಂತೆ ಎಲ್‌ಪಿಸಿ (ಕಾನೂನು ವಿಚಾರಣಾ ಪ್ರಮಾಣಪತ್ರ) ಪ್ರಕರಣಗಳಲ್ಲಿ ಒಟ್ಟು 36 ಜನರನ್ನು ದಸ್ತಗಿರಿ ಮಾಡಲಾಗಿದೆ. ಅದರಲ್ಲಿ ಶ್ರೀಕಾಂತ ಪೂಜಾರಿ 32ನೇ ವ್ಯಕ್ತಿ. ಈತನನ್ನು ಹಿಂದೂ ಕಾರ್ಯಕರ್ತ ಎಂಬ ಕಾರಣಕ್ಕೆ ಹೊರಗಿಟ್ಟು ಬಿಡಬೇಕೇ ಅಥವಾ ಆರೋಪಿ ಎಂಬ ಕಾರಣಕ್ಕೆ ಬಂಧಿಸಬೇಕೇ? ಬಿಜೆಪಿ ಪ್ರತಿಭಟನೆ ನಡೆಸುತ್ತಿರುವುದು ನಮ್ಮ ಸರ್ಕಾರದ ವಿರುದ್ಧವಲ್ಲ, ದೇಶದ ಕಾನೂನು ಮತ್ತು ಸಂವಿಧಾನದ ವಿರುದ್ಧ. ಅಪರಾಧ ಕೃತ್ಯಗಳಲ್ಲಿ ತೊಡಗುವವರು ಧರ್ಮರಕ್ಷಕರು ಎಂದು ಹೇಳಿಕೊಂಡು ಕೊಲೆ, ಸುಲಿಗೆಗಳಿಗೆ ಇಳಿದರೆ ಅದನ್ನೂ ಬಿಜೆಪಿ ನಾಯಕರು ಬೆಂಬಲಿಸುತ್ತಾರೆಯೇ' ಎಂದೂ ಅವರು ಪ್ರಶ್ನಿಸಿದ್ದಾರೆ.

ಹಿಂದೂ ಕಾರ್ಯಕರ್ತರ ಜೊತೆ ಬಿಜೆಪಿ ಇದೆ. ನೂರು ಸಿದ್ದರಾಮಯ್ಯ, ಸಾವಿರ ಪೊಲೀಸರು ಬಂದರೂ ಹೆದರಲ್ಲ
ಆರ್.ಅಶೋಕ, ವಿರೋಧ ಪಕ್ಷದ ನಾಯಕ, ವಿಧಾನಸಭೆ

'ನಮ್ಮನ್ನೂ ಬಂಧಿಸಿ'

ಹುಬ್ಬಳ್ಳಿ: '1992ರಲ್ಲಿ ನಡೆದ ಗಲಭೆ ಪ್ರಕರಣ ಮುಗಿದ ಅಧ್ಯಾಯ. ಆದರೆ, ಸಿದ್ದರಾಮಯ್ಯ ಚಿತಾವಣೆಯಿಂದ ಕರಸೇವಕನನ್ನು ಬಂಧಿಸಲಾಗಿದೆ. ಇದು ಕಾಂಗ್ರೆಸ್ ಹೇಡಿತನ. ನಾನು ಮತ್ತು ಯಡಿಯೂರಪ್ಪ ಆ ಹೋರಾಟದಲ್ಲಿ ಇದ್ದೆವು. ನಮ್ಮನ್ನೂ ಬಂಧಿಸಿ' ಎಂದು ಆರ್. ಅಶೋಕ ಅವರು ಸವಾಲು ಹಾಕಿದರು.

'ರಾಮಭಕ್ತರು ನಿಮಗೆ ಅಪರಾಧಿಗಳಂತೆ ಕಾಣುತ್ತಾರೆ. ರಾಹುಲ್ ಗಾಂಧಿ ವಿರುದ್ಧ ಎಷ್ಟು ಪ್ರಕರಣಗಳಿವೆ? ಅಮ್ಮ (ಸೋನಿಯಾ ಗಾಂಧಿ), ಮಗ (ರಾಹುಲ್ ಗಾಂಧಿ) ಇಬ್ಬರೂ ಜಾಮೀನಿನಲ್ಲಿ ಇದ್ದಾರೆ. ರಾಹುಲ್‌ಗೆ ಜೈಲು ಶಿಕ್ಷೆಯಾದರೆ ಬೀದಿಗಿಳಿದು ಪ್ರತಿಭಟಿಸುತ್ತೀರಿ. ಕುಕ್ಕರ್ ಬಾಂಬ್ ಹಾಕಿದವನನ್ನು 'ಬ್ರದರ್' ಅನ್ನುತ್ತೀರಿ' ಎಂದು ವ್ಯಂಗ್ಯವಾಡಿದರು.

'ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ 175 ಪ್ರಕರಣಗಳನ್ನು ವಾಪಸ್ ಪಡೆದಿರಿ. ಪೊಲೀಸ್ ಠಾಣೆಗೆ ನುಗ್ಗಿದವರು, ಕಮಿಷನರ್ ಕಾರು ಜಖಂಗೊಳಿಸಿದವರು, ಡಿಜೆ ಹಳ್ಳಿ, ಕೆಜೆ ಹಳ್ಳಿಯಲ್ಲಿ ದಾಂದಲೆ ಮಾಡಿದವರನ್ನು ಅಮಾಯಕರು ಎಂದು ಕರೆದು, ಅವರ ಬಿಡುಗಡೆಗೆ 'ಪ್ರೇಮಪತ್ರ' ಬರೆದ ನಿಮಗೆ ನಾಚಿಕೆ ಆಗಬೇಕು' ಎಂದು ಅವರು ಕುಟುಕಿದರು.

'ಇದೇ 9 ರಂದು ಠಾಣೆಗೆ ಮುತ್ತಿಗೆ'

ಬೆಂಗಳೂರು: 'ಶ್ರೀಕಾಂತ ಪೂಜಾರಿ ಅವರನ್ನು ಬಿಡುಗಡೆ ಮಾಡದಿದ್ದರೆ ಇದೇ 9 ರಂದು ಹುಬ್ಬಳ್ಳಿ ಶಹರ ಪೊಲೀಸ್ ಠಾಣೆಗೆ ಬಿಜೆಪಿ ರಾಜ್ಯ ಘಟಕ ಅಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಮುತ್ತಿಗೆ ಹಾಕಲಾಗುವುದು' ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ತಿಳಿಸಿದರು.

ಕಾನೂನು ಕಾಪಾಡುತ್ತಿದ್ದೇವೆ:ಡಿಕೆಶಿ



ಡಿ.ಕೆ. ಶಿವಕುಮಾರ್

'ನಾವು ದ್ವೇಷ ರಾಜಕಾರಣ ಮಾಡುತ್ತಿಲ್ಲ. ಕಾನೂನು ಸುವ್ಯವಸ್ಥೆ ಕಾಪಾಡುವ ಕೆಲಸ ಮಾಡುತ್ತಿದ್ದೇವೆ. ನಮ್ಮದು ಶಾಂತಿಪ್ರಿಯ ರಾಜ್ಯ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಹುಬ್ಬಳ್ಳಿಯಲ್ಲಿ ಕರಸೇವಕರ ಬಂಧನ ವಿಚಾರವಾಗಿ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಬಿಜೆಪಿ ಈ ವಿಚಾರದಲ್ಲಿ ರಾಜಕೀಯ ನಾಟಕ ಆಡುತ್ತಿದೆ. ಬಾಕಿ ಪ್ರಕರಣಗಳ ವಿಲೇವಾರಿಗೆ ಸರ್ಕಾರ ಮುಂದಾಗಿರುವುದಾಗಿ ಗೃಹ ಸಚಿವರು ಈಗಾಗಲೇ ಸ್ಪಷ್ಟನೆ ನೀಡಿದ್ದಾರೆ. ಇಲ್ಲಿ ದುಷ್ಕೃತ್ಯಕ್ಕೆ ಅವಕಾಶವಿಲ್ಲ. ಕಾನೂನು ಉಲ್ಲಂಘಿಸಿದವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

'ಬಿಜೆಪಿಯವರಿಗೆ ಏಳು ತಿಂಗಳು ವಿರೋಧ ಪಕ್ಷದ ನಾಯಕನ ಆಯ್ಕೆ ಮಾಡಲು ಸಾಧ್ಯವಾಗಿರಲಿಲ್ಲ. ಈಗ ಚುನಾವಣೆ ಸಮೀಪಿಸುತ್ತಿದೆ. ಹೀಗಾಗಿ ನಾವು ರಾಜಕೀಯವಾಗಿ ಬದುಕಿದ್ದೇವೆ ಎಂದು ತೋರಿಸಿಕೊಳ್ಳಲು ಹೀಗೆ ಮಾತನಾಡುತ್ತಿದ್ದಾರೆ' ಎಂದು ಟೀಕಿಸಿದರು.

ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಲು ವಿರೋಧ ಪಕ್ಷದ ನಾಯಕರು ಹುಬ್ಬಳ್ಳಿಗೆ ತೆರಳಿದ್ದ ಬಗ್ಗೆ ಕೇಳಿದಾಗ, 'ಅವರ ಸರ್ಕಾರದಲ್ಲಿ ಏನೆಲ್ಲಾ ಮಾಡಿದ್ದರು ಎಂದು ಮೊದಲು ನೋಡಿಕೊಳ್ಳಲಿ. ಪೊಲೀಸ್ ಠಾಣೆಯಲ್ಲಿ ಪೊಲೀಸ್ ಸಮವಸ್ತ್ರ ಬದಲು ಕೇಸರಿ ಬಟ್ಟೆ ಹಾಕಿಸಿದರು. ಅಂತಹ ಕೆಲಸ ನಾವು ಮಾಡಿಲ್ಲ' ಎಂದು ತಿರುಗೇಟು ನೀಡಿದರು.

ಸುದ್ದಿ 2 ನಿಮಿಷ

ಬಾಲರಾಮನ ವಿಗ್ರಹ: ಜ.17ರಂದು ಅಧಿಕೃತ ಘೋಷಣೆ– ಪೇಜಾವರಶ್ರೀ

ಉಡುಪಿ: ಅಯೋಧ್ಯೆಯ ರಾಮಮಂದಿರದಲ್ಲಿ ಪ್ರತಿಷ್ಠಾಪನೆಯಾಗಲಿರುವ ಬಾಲರಾಮನ ವಿಗ್ರಹ ಯಾವುದು ಎಂಬುದು ಜ.17ರಂದು ಅಧಿಕೃತವಾಗಿ ಘೋಷಣೆಯಾಗಲಿದೆ ಎಂದು ಅಯೋಧ್ಯೆ ರಾಮಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ವಿಶ್ವಸ್ಥರೂ ಆಗಿರುವ, ಪೇಜಾವರ ಮಠಾಧೀಶ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

'ಎರಡು ಕಪ್ಪುಶಿಲೆ ಹಾಗೂ ಒಂದು ಅಮೃತ ಶಿಲೆಯ ಬಾಲರಾಮನ ಮೂರ್ತಿಗಳು ಸುಂದರವಾಗಿ ಮೂಡಿಬಂದಿವೆ. ವಿಗ್ರಹ ಆಯ್ಕೆ ಸಂಬಂಧ ಟ್ರಸ್ಟ್‌ನ ಸದಸ್ಯರೆಲ್ಲರೂ ಮತ ಹಾಕಿದ್ದೇವೆ. ದೇವರಿಗೆ ಸರಯೂ ನದಿಯ ಅಭಿಷೇಕದ ದಿನ ಬಾಲರಾಮನ ಮೂರ್ತಿ ಅಂತಿಮವಾಗಲಿದೆ' ಎಂದರು.

'ರಾಮಮಂದಿರವನ್ನು ಬಿಜೆಪಿ ಸರ್ಕಾರದ ದೇಣಿಗೆಯಿಂದ ನಿರ್ಮಾಣ ಮಾಡಿದಲ್ಲ; ಭಕ್ತರ ದೇಣಿಗೆಯಿಂದ ಕಟ್ಟಲಾಗಿದೆ. ಇದು ಬಿಜೆಪಿ ರಾಮಮಂದಿರವಲ್ಲ, ಪ್ರತಿಯೊಬ್ಬರ ರಾಮಮಂದಿರ. ದೇವರು ಮಂದಿರದಲ್ಲಿ ಮಾತ್ರವಲ್ಲ; ಸಿದ್ದರಾಮಯ್ಯ ಅವರೊಳಗೂ ಇದ್ದಾನೆ' ಎಂದು ಪರೋಕ್ಷವಾಗಿ ಕುಟುಕಿದರು.

ಹಳೆಯ ಪ್ರಕರಣ ಸಂಬಂಧ ಹುಬ್ಬಳ್ಳಿಯಲ್ಲಿ ಕರಸೇವಕನನ್ನು ಬಂಧನ ಮಾಡಿರುವುದು ಸರಿಯಲ್ಲ. ರಾಜ್ಯ ಸರ್ಕಾರ ಹಿಂದೂಗಳನ್ನು ಮಟ್ಟಹಾಕುವ ಪ್ರಯತ್ನಕ್ಕೆ ಕೈಹಾಕಿದಂತೆ ಕಾಣುತ್ತಿದೆ ಎಂದು ಹೇಳಿದರು.

ದೇಶದ ಬಹುಸಂಖ್ಯಾತ ಹಿಂದೂಗಳ ಭಾವನೆಗಳಿಗೆ ಬೆಲೆ ನೀಡಿ ರಾಮ ಮಂದಿರ ಉದ್ಘಾಟನೆಯ ದಿನ ಸರ್ಕಾರ ಸಾರ್ವತ್ರಿಕ ರಜೆ ಘೋಷಿಸಬೇಕು ಎಂದು ಪೇಜಾವರ ಸ್ವಾಮೀಜಿ ಆಗ್ರಹಿಸಿದರು.



ಕೆಆರ್‌ಐಡಿಎಲ್ ಇಇ ವಜಾ

ಕೊಪ್ಪಳ: ಜಿಲ್ಲೆಯ ಯಲಬುರ್ಗಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಯೋಜನೆಗಳ ಕಾರ್ಯನಿರ್ವಹಣೆಯಲ್ಲಿ ಅವ್ಯವಹಾರ ಮಾಡಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ (ಕೆಆರ್‌ಐಡಿಎಲ್)ದ ಕಾರ್ಯನಿರ್ವಾಹಕ ಎಂಜಿನಿಯರ್ ಝರಣಪ್ಪ ಎಂ. ಚಿಂಚೋಳಿಕರ್ ಅವರನ್ನು ಸೇವೆಯಿಂದ ವಜಾ ಮಾಡಲಾಗಿದೆ.

ಬುಧವಾರ ಆದೇಶ ಹೊರಡಿಸಿರುವ ಕೆಆರ್‌ಐಡಿಎಲ್, ಝರಣಪ್ಪ ಅವರನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ವಜಾ ಮಾಡಿದೆ. ಜೊತೆಗೆ ದುರ್ಬಳಕೆ ಮಾಡಿಕೊಂಡ ₹1,54,44,897 ಅನ್ನು ಒಂದೇ ಕಂತಿನಲ್ಲಿ ಸಂಸ್ಥೆಯ ಬ್ಯಾಂಕ್ ಖಾತೆಗೆ ಜಮೆ ಮಾಡುವಂತೆ ಆದೇಶಿಸಿದೆ. ಈ ಆದೇಶವನ್ನು ಪಾಲಿಸದಿದ್ದರೆ ನ್ಯಾಯಾಲಯದಲ್ಲಿ 'ಸಿವಿಲ್ ಸೂಟ್' ಮಾಡಿ ಹಣ ವಸೂಲಿ ಮಾಡಲಾಗುವುದು ಎಂದು ಕೆಆರ್‌ಐಡಿಎಲ್ ಶಿಸ್ತು ಕ್ರಮಾಧಿಕಾರಿ ತಿಳಿಸಿದ್ದಾರೆ.

ಝರಣಪ್ಪ ಅವರು ಯಲಬುರ್ಗಾ ಕ್ಷೇತ್ರದಲ್ಲಿ 2016–18ರ ಅವಧಿಯಲ್ಲಿ ಸುವರ್ಣ ಗ್ರಾಮ ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸದೇ ಅನುದಾನ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಮಾಜಿ ಸಚಿವ ಹಾಲಪ್ಪ ಆಚಾರ್ 2020ರಲ್ಲಿ ದೂರು ನೀಡಿದ್ದರು. ಈ ದೂರಿನ ಅನ್ವಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ ಸಂಸ್ಥೆಯಲ್ಲಿನ ಎಂಜಿನಿಯರ್‌ಗಳ ಅಧ್ಯಕ್ಷತೆಯಲ್ಲಿ ಪಂಚನಾಮೆ ಸಮಿತಿ ರಚಿಸಿತ್ತು. ಚಿಂಚೋಳಿಕರ್ ಇಲ್ಲಿನ ನಿವಾಸದಲ್ಲಿ ಕಳೆದ ಜೂನ್‌ನಲ್ಲಿ ಲೋಕಾಯುಕ್ತ ದಾಳಿಯೂ ಆಗಿತ್ತು.

92ರ ಗಲಭೆ: ನ್ಯಾಯಾಂಗ ಬಂಧನಕ್ಕೆ ಶ್ರೀಕಾಂತ ಪೂಜಾರಿ

ಪ್ರಕರಣ ದಾಖಲಾಗಿರುವುದು ಆರೋಪಿಗೇ ಗೊತ್ತಿರಲಿಲ್ಲ...

ಪ್ರಜಾವಾಣಿ ವಾರ್ತೆ



ಶ್ರೀಕಾಂತ

ಹುಬ್ಬಳ್ಳಿ: 1992ರ ಗಲಭೆಗೆ ಸಂಬಂಧಿಸಿದಂತೆ ಬಂಧನಕ್ಕೆ ಒಳಗಾಗಿರುವ ಚನ್ನಪೇಟೆಯ ಆಟೊರಿಕ್ಷಾ ಚಾಲಕ ಶ್ರೀಕಾಂತ ಪೂಜಾರಿಗೆ ಈಗ ವಯಸ್ಸು 54. ಆದರೆ, 31 ವರ್ಷ ಹಿಂದಿನ ಗಲಭೆ ಪ್ರಕರಣದ ದೋಷಾರೋಪ ಪಟ್ಟಿಯಲ್ಲಿ ತಮ್ಮ ಹೆಸರಿದೆ ಎಂಬುದು ಗೊತ್ತಿರಲಿಲ್ಲ. ಪೊಲೀಸರ ಕಾರ್ಯಾಚರಣೆ ಬಗ್ಗೆಯೂ ಮಾಹಿತಿ ಇರಲಿಲ್ಲ!

ವಿವಿಧ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಶ್ರೀಕಾಂತ ಪೂಜಾರಿ ಆಗಾಗ್ಗೆ ಬೇರೆ ಬೇರೆ ಪೊಲೀಸ್ ಠಾಣೆಯಲ್ಲಿ ವಿಚಾರಣೆಗೆ ಹಾಜರಾಗಿ, ಸಹಿ ಮಾಡುತ್ತಿದ್ದರೂ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನವಾಗುವ ಬಗ್ಗೆ ಕಿಂಚಿತ್ತೂ ಸುಳಿವು ಇರಲಿಲ್ಲ. ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರು ನಾಪತ್ತೆಯೂ ಆಗಿರಲಿಲ್ಲ.

ಶ್ರೀಕಾಂತ ಪೂಜಾರಿ ವಿರುದ್ಧ 1992ರಿಂದ 2014ರ ಅವಧಿಯಲ್ಲಿ ಹುಬ್ಬಳ್ಳಿಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಮೂರು ದೊಂಬಿ, ಗಲಭೆ ಪ್ರಕರಣಗಳು ಸೇರಿ ಒಟ್ಟು 16 ಪ್ರಕರಣಗಳು ದಾಖಲಾಗಿವೆ.

ಹಳೇಹುಬ್ಬಳ್ಳಿ ಪೊಲೀಸ್ ಠಾಣೆಯಲ್ಲಿ ಮದ್ಯ ಅಕ್ರಮ ಮಾರಾಟದ ಕುರಿತು 9 ಪ್ರಕರಣಗಳು ದಾಖಲಾದರೆ, ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಜೂಜು ಪ್ರಕರಣ ಇದೆ. ಕಸಬಾ ಪೊಲೀಸ್ ಠಾಣೆಯಲ್ಲಿ ಅವರ ವಿರುದ್ಧ ಮೂರು ಪ್ರಕರಣಗಳು ಇವೆ.

ಪದೇಪದೇ ಅಪರಾಧ ಪ್ರಕರಣದಲ್ಲಿ ಭಾಗಿಯಾದ ಕಾರಣ ಅವರ ಹೆಸರು ಹಳೇಹುಬ್ಬಳ್ಳಿ ಪೊಲೀಸ್ ಠಾಣೆಯ ರೌಡಿ ಪಟ್ಟಿಯಲ್ಲಿ ಸೇರಿತ್ತು. ವಯಸ್ಸು ಮತ್ತು ಉತ್ತಮ ನಡವಳಿಕೆ ಕಾರಣ 2023ರ ಜೂನ್ ತಿಂಗಳಲ್ಲಿ ರೌಡಿ ಪಟ್ಟಿಯಿಂದ ಹೆಸರು ತೆಗೆಯಲಾಯಿತು.

'ದೀರ್ಘಾವಧಿಯಿಂದ ಬಾಕಿ ಉಳಿದ ಪ್ರಕರಣಗಳ (ಕಾನೂನು ವಿಚಾರಣಾ ಪ್ರಮಾಣಪತ್ರ- ಎಲ್‌ಪಿಸಿ) ಬಗ್ಗೆ ಕೋರ್ಟ್ ಮಾಹಿತಿ ಕೇಳಿದಾಗ, ಆಯಾ ಪ್ರಕರಣಗಳ ತನಿಖೆಗೆ ಪೊಲೀಸರ ವಿಶೇಷ ತಂಡ ರಚಿಸಲಾಯಿತು. ಆದರೆ, ಅಲ್ಲಿಯವರೆಗೆ ಪೊಲೀಸರಿಗೆ ಶ್ರೀಕಾಂತ ಹೆಸರು ಗಲಭೆ ಪ್ರಕರಣದಲ್ಲಿ ಇದೆ ಎಂಬುದರ ಬಗ್ಗೆ ಮಾಹಿತಿ ಇರಲಿಲ್ಲ. ಹಳೆಯ ಕಡತಗಳ ಪರಿಶೀಲನೆ ಬಹುದಿನಗಳಿಂದ ಆಗಿರಲಿಲ್ಲ' ಎಂದು ಮೂಲಗಳು ತಿಳಿಸಿವೆ.

ಕೋರ್ಟ್ ಆದೇಶದ ಮೇರೆಗೆ ಪೊಲೀಸರು ಕಾರ್ಯಾಚರಣೆ ನಡೆಸಿದರು. ಅದರಂತೆ 2023ರ ಡಿಸೆಂಬರ್ ಅಂತ್ಯದವರೆಗೆ 28 ಪ್ರಕರಣಗಳಿಗೆ ಸಂಬಂಧಿಸಿದಂತೆ 36 ಆರೋಪಿಗಳನ್ನು ಬಂಧಿಸಲಾಯಿತು.

1992ರಲ್ಲಿ ನಗರದ ದುರ್ಗದ-ಬೈಲ್‌ನಲ್ಲಿ ನಡೆದ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಡಿಸೆಂಬರ್ 18ರಂದು ರಾಜು ಧರ್ಮದಾಸ್ ಎಂಬುವರ ಬಂಧನವಾಗಿ, ನಂತರ ಜಾಮೀನಿನ ಮೇಲೆ ಬಿಡುಗಡೆಯಾಯಿತು. ಆದರೆ, ಡಿಸೆಂಬರ್ 29ರಂದು ಬಂಧನವಾದ ಶ್ರೀಕಾಂತ ಪೂಜಾರಿಗೆ ಜಾಮೀನು ಸಿಗಲಿಲ್ಲ. ಜನವರಿ 12ರವರೆಗೆ ನ್ಯಾಯಾಂಗ ಬಂಧನಕ್ಕೆ ಒಳಗಾದರು.

'1992ರ ಡಿಸೆಂಬರ್ 5ರಂದು ದುರ್ಗದಬೈಲ್‌ನಲ್ಲಿ ಮುಸ್ಲಿಂ ವ್ಯಕ್ತಿಗೆ ಸೇರಿದ ಮಳಿಗೆಯೊಂದಕ್ಕೆ ಕೆಲವರು ಬೆಂಕಿ ಹಚ್ಚಿದ್ದರು. ಮಳಿಗೆ ಮಾಲೀಕ ಶಹರ ಠಾಣೆಯಲ್ಲಿ ನೀಡಿದ ದೂರಿನನ್ವಯ ಕಾರ್ಯಾಚರಣೆ ನಡೆಸಿದ ಪೊಲೀಸರು 13 ಮಂದಿ ವಿರುದ್ಧ ದೋಷಾರೋಪ ಪಟ್ಟಿ ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಅವರಲ್ಲಿ ಐವರು ಕೋರ್ಟ್‌ಗೆ ಹಾಜರಾಗಿ ಬಿಡುಗಡೆಯಾಗಿದ್ದರು. ಉಳಿದ ಎಂಟು ಮಂದಿಗೆ ಪ್ರಕರಣದಲ್ಲಿ ತಮ್ಮ ಹೆಸರು ಇರುವುದೇ ಗೊತ್ತಿರಲಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'2006ರಲ್ಲಿ ಎಲ್‌ಪಿಸಿ ಸಿದ್ಧಪಡಿಸಿದಾಗ, 1992ರ ಪ್ರಕರಣವೂ ಮತ್ತೆ ಮುನ್ನಲೆಗೆ ಬಂದಿದೆ. ಬಾಕಿ ಉಳಿದ ಎಂಟು ಜನರಲ್ಲಿ ಐವರು ಮೃತಪಟ್ಟಿದ್ದಾರೆ. ಉಳಿದ ಮೂವರು ಆರೋಪಿಗಳಾದ ರಾಜು ಧರ್ಮದಾಸ್, ರಾಮಚಂದ್ರ ಮತ್ತು ಶ್ರೀಕಾಂತ ಪೂಜಾರಿ ಪತ್ತೆಯಾದರು. ಧರ್ಮದಾಸ್ ಜಾಮೀನಿನ ಮೇಲೆ ಬಿಡುಗಡೆಯಾದರೆ, ರಾಮಚಂದ್ರಗೆ ಅನಾರೋಗ್ಯ ಸಮಸ್ಯೆಯಿದೆ. ಶ್ರೀಕಾಂತ್‌ಗೆ ಜಾಮೀನು ಸಿಗಲಿಲ್ಲ' ಎಂದು ಗೊತ್ತಾಗಿದೆ.

'ಕೋರ್ಟ್ ಸೂಚನೆ ಪಾಲನೆ'


'ಪ್ರತಿ ಪೊಲೀಸ್ ಠಾಣೆಯಲ್ಲೂ ಪ್ರತಿವರ್ಷ ಹಲವು ಪ್ರಕರಣಗಳು ಬಾಕಿ ಇರುತ್ತವೆ. ಅವುಗಳನ್ನು ಪೂರ್ಣಗೊಳಿಸಲು ಆದ್ಯತೆ ನೀಡುತ್ತೇವೆ. ಎಲ್ಲವನ್ನೂ ತನಿಖೆ ನಡೆಸಿ ಪರಿಶೀಲಿಸಿದಾಗ, 1992ರ ಗಲಭೆ ಪ್ರಕರಣದ ಆರೋಪಿಯೂ ಪತ್ತೆಯಾಗಿದ್ದಾರೆ. ಕಾನೂನು ಪ್ರಕಾರ, ಶ್ರೀಕಾಂತ ಪೂಜಾರಿಯನ್ನು ಕೋರ್ಟ್‌ಗೆ ಹಾಜರುಪಡಿಸಲಾಗಿದೆ' ಎಂದು ಹುಬ್ಬಳ್ಳಿ–ಧಾರವಾಡ ಕಮಿಷನರ್ ರೇಣುಕಾ ಸುಕುಮಾರ್ ತಿಳಿಸಿದರು.

'ಪ್ರಕರಣ ಬಗ್ಗೆ ಒಮ್ಮೆಯೂ ಚರ್ಚಿಸಿಲ್ಲ'

'ಗಲಭೆ ಪ್ರಕರಣದಲ್ಲಿ ತಂದೆಯವರ ಹೆಸರು ಇರುವುದು ಬಹುಶಃ ಅವರಿಗೆ ತಿಳಿದಿತ್ತೋ ಇಲ್ಲವೋ ಗೊತ್ತಿಲ್ಲ. ಒಮ್ಮೆಯೂ ನಮ್ಮ ಜೊತೆ ಇದರ ಬಗ್ಗೆ ಚರ್ಚಿಸಿಲ್ಲ. ಅನಾರೋಗ್ಯ ಸಮಸ್ಯೆಯಿಂದ ಬಳಸುತ್ತಿದ್ದ ಅವರನ್ನು ನೋಟಿಸ್, ವಾರಂಟ್ ನೀಡದೇ ಪೊಲೀಸರು ಬಂಧಿಸಿದ್ದಾರೆ' ಎಂದು ಶ್ರೀಕಾಂತ ಪೂಜಾರಿ ಅವರ ಪುತ್ರ ಮಂಜುನಾಥ ತಿಳಿಸಿದರು.

'ಅಯೋಧ್ಯೆ: ಗೋಧ್ರಾ ರೀತಿ ದುರಂತ ಸಂಭವ'

ಪ್ರಜಾವಾಣಿ ವಾರ್ತೆ



ಬಿ.ಕೆ. ಹರಿಪ್ರಸಾದ್

ಬೆಂಗಳೂರು: 'ಅಯೋಧ್ಯೆಗೆ ರಾಮ ಮಂದಿರ ಉದ್ಘಾಟನೆಗೆ ಹೋಗುವ ವರಿಗೆ ಸರ್ಕಾರವೇ ರಕ್ಷಣೆ ಕೊಡಬೇಕು. ಗೋಧ್ರಾ ದುರಂತದ ರೀತಿ ಮತ್ತೊಮ್ಮೆ ಏನಾದರೂ ಆಗಬಹುದು' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಈ ಬಗ್ಗೆ ನಮಗೆ ಮಾಹಿತಿ ಬರುತ್ತಿದೆ. ಮಾಹಿತಿ ಇದ್ದೇ ಹೇಳುತ್ತಿದ್ದೇನೆ' ಎಂದರು.

'ರಾಮಮಂದಿರ ಉದ್ಘಾಟನೆ ಧಾರ್ಮಿಕ ಕಾರ್ಯಕ್ರಮ ಅಲ್ಲ. ಇದೊಂದು ರಾಜಕೀಯ ಕಾರ್ಯಕ್ರಮ ಆಗುತ್ತಿದೆ. ಧಾರ್ಮಿಕ ಕಾರ್ಯಕ್ರಮ-ವಾಗಿದ್ದರೆ ಧಾರ್ಮಿಕ ಮುಖಂಡರು ಭಾಗಿ ಆಗಬೇಕಿತ್ತು. ನಾವೆಲ್ಲರೂ ಹೋಗುತ್ತಿದ್ದೆವು' ಎಂದರು.

ಹುಬ್ಬಳ್ಳಿಯಲ್ಲಿ ಕರಸೇವಕರ ಬಂಧನ ವಿಚಾರದಲ್ಲಿ ಪ್ರತಿಕ್ರಿಯಿಸಿದ ಅವರು, 'ಕರಸೇವಕ ಎಂದ ಮಾತ್ರಕ್ಕೆ ಅಪರಾಧ ಪ್ರಕರಣಗಳಲ್ಲಿ ಇರುವವರನ್ನು ಹಾಗೆಯೇ ಬಿಡಲು ಆಗುವುದಿಲ್ಲ. ಬಂಧಿತನ ಮೇಲೆ 13 ಕೇಸ್ ಇವೆ. 30 ವರ್ಷ ಬಿಟ್ಟಿದ್ದೇ ತಪ್ಪು' ಎಂದರು.

'ಬಾಬರಿ ಮಸೀದಿ ಧ್ವಂಸ ಮಾಡಿದ್ದು ಅಪರಾಧವೇ. ಎಲ್.ಕೆ. ಅಡ್ವಾಣಿಯವರ ಮೇಲಿರುವ ಕೇಸ್ ಇನ್ನೂ ವಿಲೇವಾರಿ ಆಗಿಲ್ಲ. ಇದನ್ನು ನಮ್ಮ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಇಷ್ಟು ದಿನ ಹಳೆ ಕೇಸ್ ಮೇಲೆ ಕ್ರಮಕೈಗೊಳ್ಳದ ಅಧಿಕಾರಿಗಳನ್ನು ಹಾಗೇ ಬಿಟ್ಟಿದ್ದೂ ತಪ್ಪು' ಎಂದೂ ಅಭಿಪ್ರಾಯಪಟ್ಟರು.

'ನಿತ್ಯಾನಂದನಂತೆ ಸಿದ್ದರಾಮಯ್ಯಗೂ ಭಕ್ತರಿದ್ದಾರೆ': 'ಕೈಲಾಸದಲ್ಲಿರುವ ನಿತ್ಯಾನಂದ ಸ್ವಾಮೀಜಿಗೆ ಹೇಗೆ ಭಕ್ತರಿದ್ದಾರೆಯೋ ಅದೇ ರೀತಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಭಕ್ತರಿದ್ದಾರೆ' ಎಂದು ವ್ಯಂಗ್ಯವಾಡಿದ್ದರು.

'ಸಿದ್ದರಾಮಯ್ಯನವರೇ ನಮ್ಮ ರಾಮ. ಇನ್ನು ಅಯೋಧ್ಯೆಯ ರಾಮನನ್ನೇಕೆ ಹೋಗಿ ಪೂಜಿಸಬೇಕು' ಎಂದು ಮಾಜಿ ಸಚಿವ ಎಚ್. ಆಂಜನೇಯ ನೀಡಿದ್ದ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಎಲ್ಲರಿಗೂ ಭಕ್ತರು ಇರುತ್ತಾರೆ. ಕೈಲಾಸ ಆಶ್ರಮದ ನಿತ್ಯಾನಂದ ಸ್ವಾಮೀಜಿಗೂ ಭಕ್ತರಿದ್ದಾರೆ. ಹಾಗೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯಗೂ ಭಕ್ತರಿದ್ದಾರೆ. ಅದನ್ನು ಅಷ್ಟೊಂದು ಗಂಭೀರವಾಗಿ ತೆಗೆದುಕೊಳ್ಳಬಾರದು' ಎಂದು ಕುಹಕವಾಡಿದ್ದಾರೆ.

ಹರಿಪ್ರಸಾದ್ ವಿರುದ್ಧ ಕಾನೂನು ಹೋರಾಟ: ಬೊಮ್ಮಾಯಿ

ಬೆಂಗಳೂರು: 'ಅಯೋಧ್ಯೆಗೆ ತೆರಳುವ ಜನರಲ್ಲಿ ಭಯ ಹುಟ್ಟಿಸಲು ಬಿ.ಕೆ. ಹರಿಪ್ರಸಾದ್ ಈ ರೀತಿ ಮಾತನಾಡಿದ್ದಾರೆ. ಅವರ ವಿರುದ್ಧ ಕಾನೂನಾತ್ಮಕ ಹೋರಾಟ ಮಾಡುತ್ತೇವೆ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಮಮಂದಿರ ನಿರ್ಮಾಣವಾಗುತ್ತಿರುವ ಈ ಸಂದರ್ಭದಲ್ಲಿ ಇಡೀ ದೇಶದಲ್ಲಿ ಸಂಭ್ರಮಾಚರಣೆ ನಡೆಯುತ್ತಿದೆ. ರಾಮಜನ್ಮಭೂಮಿಯಲ್ಲಿ ರಾಮಮಂದಿರ ನಿರ್ಮಾಣ ಆಗುತ್ತಿರುವುದನ್ನು ಕಾಂಗ್ರೆಸ್‌ಗೆ ಸಹಿಸಿಕೊಳ್ಳಲು ಆಗುತ್ತಿಲ್ಲ. ಹೀಗಾಗಿ ಕಾಂಗ್ರೆಸ್ ನಾಯಕರು ಹತಾಶೆಯಿಂದ ಹೇಳಿಕೆ ನೀಡುತ್ತಿದ್ದಾರೆ ಎಂದರು.

ಅಪರಾಧಿಗಳನ್ನು ಹಿಡಿಯಬಾರದಾ ಎಂದು ಮುಖ್ಯಮಂತ್ರಿ ಪ್ರಶ್ನಿಸಿದ್ದಾರೆ. ಅಪರಾಧಿಗಳನ್ನು ಹಿಡಿಯಬೇಕೆಂದರೆ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡಗಳಲ್ಲಿ ಅಕ್ರಮ ದಂಧೆಯಲ್ಲಿ ತೊಡಗಿರುವ, ಸಾರಾಯಿ ಮಾರಾಟ ಮಾಡುತ್ತಿರುವ ಪ್ರಕರಣಗಳು ಇವರ ಕಣ್ಣಿಗೆ ಕಾಣಿಸುತ್ತಿಲ್ಲವೆ ಎಂದು ಪ್ರಶ್ನಿಸಿದರು.

ಗೃಹ ಇಲಾಖೆಗೆ ಮಾಹಿತಿ ಇಲ್ಲ: ಪರಮೇಶ್ವರ

ಕೋಲಾರ: 'ಗೋಧ್ರಾ ರೀತಿಯ ಮತ್ತೊಂದು ದುರಂತ ಸಂಭವಿಸಲಿದೆ ಎಂಬ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹಂಚಿಕೊಂಡಿರುವ ವಿಷಯದ ಬಗ್ಗೆ ನನಗೆ ಮಾಹಿತಿಯಿಲ್ಲ. ಇಲಾಖೆಯ ಗಮನಕ್ಕೂ ಆ ವಿಚಾರ ಬಂದಿಲ್ಲ. ಹರಿಪ್ರಸಾದ್ ಅವರಿಗೆ ಗೊತ್ತಿರಬಹುದೇನೋ' ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು ಹೇಳಿದ್ದಾರೆ.

ಅಯೋಧ್ಯೆ ವಿಚಾರವಾಗಿ ಹರಿಪ್ರಸಾದ್ ಹೇಳಿಕೆ ಕುರಿತು ನಗರದಲ್ಲಿ ಬುಧವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಹರಿಪ್ರಸಾದ್ ಯಾವ ಮಾಹಿತಿ ಆಧರಿಸಿ ಹೇಳಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಇದು ವೈಯಕ್ತಿಕ ಹೇಳಿಕೆ ಎಂದು ಅವರೇ ಹೇಳಿಕೊಂಡಿರುವಾಗ ಮತ್ತೆ ಇನ್ನೇನಿದೆ? ಸರ್ಕಾರಕ್ಕೆ ಯಾರೇ ಆಗಲಿ ಒಳ್ಳೆಯ ಸಲಹೆ ನೀಡಿದರೆ ಪಡೆದು ಸ್ವೀಕಾರ ಮಾಡಿ ಅಗತ್ಯ ಕ್ರಮಕೈಗೊಳ್ಳಲಾಗುವುದು' ಎಂದರು.

ಗೋಧ್ರಾ ಪ್ರಕರಣಕ್ಕೂ ಕಾಂಗ್ರೆಸ್ಸಿಗೂ ಏನೋ ಸಂಬಂಧವಿರಬಹುದು. ಕಾಂಗ್ರೆಸ್ ಪಕ್ಷಕ್ಕೆ ಅಂತಹ ಘಟನೆಗೆ ಪೂರಕವಾಗಿ ಷಡ್ಯಂತ್ರದ ಸುಳಿವು ದೊರೆತಿರಬಹುದು
ನಾರಾಯಣಸ್ವಾಮಿ, ಕೇಂದ್ರ ಸಚಿವ

'ಹರಿಪ್ರಸಾದ್ ಹೇಳಿಕೆ ತನಿಖೆಯಾಗಲಿ'

ಉಡುಪಿ: ರಾಮಮಂದಿರ ಉದ್ಘಾಟನೆಯ ಸಂದರ್ಭದಲ್ಲಿ ಮತ್ತೊಂದು ಗೋಧ್ರಾ ದುರಂತ ನಡೆಯಬಹುದು ಎಂಬ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿಕೆಯ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ ಪೂಜಾರಿ ಒತ್ತಾಯಿಸಿದರು.

ಅನುಭವಿ ರಾಜಕಾರಣಿ ಹರಿಪ್ರಸಾದ್ ಮಾತಿನಂತೆ ಗೋಧ್ರಾ ದುರಂತ ಮರುಕಳಿಸಿದರೆ ಶ್ರೀರಾಮ ಮಂದಿರ ನಿರ್ಮಾಣವನ್ನು ಹಿಂದಿನಿಂದಲೂ ವಿರೋಧಿಸುತ್ತಾ ಬಂದಿರುವ ಕಾಂಗ್ರೆಸ್ ನೇರ ಕಾರಣವಾಗಲಿದೆ ಎಂದರು.



ದ್ಯಾಬೇರಿ ಗ್ರಾಮದ ವಾಗ್ದೇವಿ ದೇವಸ್ಥಾನದ ಪ್ರವೇಶದ್ವಾರದಲ್ಲೇ ನಿಂತು ದೇವಿಯ ದರ್ಶನ ಪಡೆದರು

ದೇವಸ್ಥಾನ ಗರ್ಭಗುಡಿ ಪ್ರವೇಶಿಸದ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ವಿಜಯಪುರ: ತಾಲ್ಲೂಕಿನ ದ್ಯಾಬೇರಿ ಗ್ರಾಮದಲ್ಲಿ ಮಂಗಳವಾರ ವಾಗ್ದೇವಿ ದೇವಸ್ಥಾನದ ನೂತನ ಕಟ್ಟಡ ಉದ್ಘಾಟನೆ, ಮೂರ್ತಿಗಳ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಭಾಗಿಯಾದರು. ಆದರೆ, ಗರ್ಭಗುಡಿ ಪ್ರವೇಶಿಸಲು ನಿರಾಕರಿಸಿದರು.

ಮುಖ್ಯಮಂತ್ರಿಯವರು ಸಹಜವಾಗಿ ಗರ್ಭಗುಡಿ ಪ್ರವೇಶಿಸಲಿಲ್ಲ. ಅವರ ಪರವಾಗಿ ನನ್ನನ್ನೇ ಕಳುಹಿಸಿದರು. ಇದಕ್ಕೆ ಅಪಾರ್ಥ ಕಲ್ಪಿಸುವುದು ಬೇಡ
ಎಂ.ಬಿ.ಪಾಟೀಲ, ಸಚಿವ

ದೇವಸ್ಥಾನದ ಪ್ರಾಂಗಣದಲ್ಲೇ ನಿಂತು ವಾಗ್ದೇವಿಯ ದರ್ಶನ ಪಡೆದ ಮುಖ್ಯಮಂತ್ರಿ ಅವರನ್ನು ಗರ್ಭಗುಡಿ ಒಳಗೆ ಬರುವಂತೆ ಅರ್ಚಕರು ಕೋರಿದರು. ಆದರೆ, ಅವರು ಗರ್ಭಗುಡಿ ಎದುರಿನ ಚಿಕ್ಕ ಪ್ರವೇಶ ದ್ವಾರದಲ್ಲೇ ನಿಂತು ಕೈಮುಗಿದರು. ಸಚಿವ ಎಂ.ಬಿ.ಪಾಟೀಲ ಅವರನ್ನು ಗರ್ಭಗುಡಿ ಒಳಗೆ ಕಳುಹಿಸಿದರು.

ಎಂ.ಬಿ.ಪಾಟೀಲ ಅವರು ಮನವಿ ಮಾಡಿದರೂ, 'ನೀವೇ ಪೂಜೆ ಮಾಡಿ' ಎಂದು ಕೈ ಸನ್ನೆ ಮಾಡಿದರು. ನಂತರ ಕಾರ್ಯಕ್ರಮದಲ್ಲಿ ಸಿದ್ಧರಾಮಯ್ಯ ಮಾತನಾಡಿ, 'ಸಂತೋಷದಿಂದ ದೇವಸ್ಥಾನ ಉದ್ಘಾಟಿಸಿದ್ದೇನೆ. ವಾಗ್ದೇವಿ ನಾಡಿಗೆ ಒಳ್ಳೆಯದನ್ನು ಮಾಡಲಿ' ಎಂದರು.

'ಕಲ್ಲಡ್ಕ ಬಗ್ಗೆ ಮೃದು ಧೋರಣೆ ಏಕೆ?'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಸಮುದಾಯದ ಮಹಿಳೆಯರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ಅವರನ್ನು ಇನ್ನೂ ಬಂಧಿಸಿಲ್ಲವೇಕೆ, ಅವರ ಬಗ್ಗೆ ಸರ್ಕಾರ ಮೃದು ಧೋರಣೆ ತಳೆದಿರುವುದೇಕೆ' ಎಂದು ಭದ್ರಾವತಿಯ ಮುಸ್ಲಿಂ ಮುಖಂಡ ಸಿ.ಎಂ. ಖಾದರ್ ಕಾಂಗ್ರೆಸ್ ನಾಯಕರನ್ನು ಪ್ರಶ್ನಿಸಿದರು.

ಬುಧವಾರ ಇಲ್ಲಿ ಪಕ್ಷ ಏರ್ಪಡಿಸಿದ್ದ ಯುವ ನಿಧಿ ಯೋಜನೆ ಜಾರಿಯ ಸಿದ್ಧತಾ ಸಭೆಯಲ್ಲಿ ಭಾಗವಹಿಸಿದ್ದ ಸಚಿವರಾದ ಮಧು ಬಂಗಾರಪ್ಪ, ಡಾ.ಶರಣ ಪ್ರಕಾಶ ಪಾಟೀಲ ಹಾಗೂ ಡಾ.ಎಂ.ಸಿ. ಸುಧಾಕರ ಅವರೆದುರೇ ಅವರು ಪ್ರಶ್ನಿಸಿದರು.

ಈ ವೇಳೆ ಪ್ರತಿಕ್ರಿಯಿಸಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಎಸ್. ಸುಂದರೇಶ, 'ಜಿಲ್ಲೆಯ ಅಲ್ಪಸಂಖ್ಯಾತ ಸಮುದಾಯದವರಿಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ. ಇನ್ನೈದು ತಿಂಗಳು ಯಾವುದೇ ಕಾರಣಕ್ಕೂ ವಿವಾದಿತ ಹೇಳಿಕೆ ಕೊಡಬೇಡಿ. ಲೋಕಸಭೆ ಚುನಾವಣೆಯಲ್ಲಿ ಲಾಭ ಪಡೆಯಲು ಬಿಜೆಪಿಯವರು ಕಲ್ಲಡ್ಕ ಪ್ರಭಾಕರ ಭಟ್ಟ, ಸಿ.ಟಿ. ರವಿ, ಶೋಭಾ ಕರಂದ್ಲಾಜೆ, ಕೆ.ಎಸ್. ಈಶ್ವರಪ್ಪ, ರೇಣುಕಾಚಾರ್ಯ ಅಂತಹವರಿಂದ ಮುಸ್ಲಿಂ ಸಮುದಾಯವನ್ನು ಪ್ರಚೋದಿಸುವ ಹೇಳಿಕೆ ಕೊಡಿಸುತ್ತಾರೆ' ಎಂದರು.

ಸಿ.ಎಂ.ಖಾದರ್ ಅವರು ಕೇಂದ್ರದ ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ಸಹೋದರ.

ವೈ.ಎಸ್.ಸಿದ್ದೇಗೌಡ ಅಧ್ಯಕ್ಷತೆಯ ಸಮಿತಿಯ ಎಲ್ಲ ಶಿಫಾರಸಿಗೆ ಅಂಗೀಕಾರ

ಪದವಿಗೆ ಏಕರೂಪದ ಶುಲ್ಕಕ್ಕೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿಶ್ವವಿದ್ಯಾಲಯಗಳು ಹಾಗೂ ಪದವಿ ಕಾಲೇಜುಗಳ ಸ್ನಾತಕ ಹಾಗೂ ಸ್ನಾತಕೋತ್ತರ ಕೇಂದ್ರಗಳಲ್ಲಿ ಏಕ ರೂಪದ ಶುಲ್ಕ ನಿಗದಿ ಮಾಡಬೇಕು ಎಂಬ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಶಿಫಾರಸನ್ನು ಉನ್ನತ ಶಿಕ್ಷಣ ಇಲಾಖೆ ಅಂಗೀಕರಿಸಿದೆ.

ಎಲ್ಲ ವಿಶ್ವವಿದ್ಯಾಲಯಗಳಲ್ಲೂ ಏಕರೂಪದ ಪರೀಕ್ಷೆ, ಪರೀಕ್ಷಾ ಕಾರ್ಯ ನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಸಮಾನ ಸಂಭಾವನೆ, ಕಾಲೇಜು ಪ್ರವೇಶ, ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಪಠ್ಯೇತರ ಚಟುವಟಿಕೆಗಳ ಶುಲ್ಕ ಸೇರಿದಂತೆ ಎಲ್ಲ ರೀತಿಯ ಶುಲ್ಕಗಳೂ ಎಲ್ಲ ವಿಶ್ವವಿದ್ಯಾಲಯಗಳಲ್ಲೂ ಏಕ ರೂಪದಲ್ಲಿ ಇರಬೇಕು ಎಂದು ಪರಿಷತ್ತಿಗೆ ಹಿಂದಿನ ಸರ್ಕಾರದ ಅವಧಿಯಲ್ಲಿ ಉಪಾಧ್ಯಕ್ಷರಾಗಿದ್ದ ವೈ.ಎಸ್.ಸಿದ್ದೇಗೌಡ ಅಧ್ಯಕ್ಷತೆಯ ಸಮಿತಿ ಶಿಫಾರಸು ಮಾಡಿತ್ತು.

ಸಮಿತಿ ನೀಡಿದ ಎಲ್ಲ ಶಿಫಾರಸುಗಳನ್ನೂ ಉನ್ನತ ಶಿಕ್ಷಣ ಇಲಾಖೆ ಅಂಗೀಕರಿಸಿದೆ. ಎಲ್ಲಾ ವಿಶ್ವವಿದ್ಯಾಲಯಗಳ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಏಕರೂಪದ ಶುಲ್ಕ ನಿಗದಿ ಮಾಡಲಾಗಿದೆ. ಅದೇ ಪ್ರಕಾರ ಶುಲ್ಕವನ್ನು ಅಳವಡಿಸಿ-ಕೊಳ್ಳಬೇಕು ಎಂದು ವಿಶ್ವವಿದ್ಯಾಲಯ-ಗಳಿಗೆ ನಿರ್ದೇಶನ ನೀಡಿದೆ. ಹಾಗೆಯೇ, ಪದವಿಯ ವಿವಿಧ ಕೋರ್ಸ್‌ಗಳಿಗೆ ಏಕರೂಪದ ಶುಲ್ಕ ನಿಗದಿ ಮಾಡಿದೆ

ಉನ್ನತ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ವಿಶ್ವವಿದ್ಯಾಲಯಗಳು ಪ್ರತ್ಯೇಕ ಶುಲ್ಕ ವಿಧಿಸುತ್ತಿವೆ. ಕೆಲ ವಿಶ್ವವಿದ್ಯಾಲಯಗಳಲ್ಲಿ ದುಬಾರಿ ಶುಲ್ಕವಿದ್ದರೆ, ಕಡಿಮೆ ವಿದ್ಯಾರ್ಥಿಗಳು ಹಾಗೂ ಕಡಿಮೆ ಘಟಕ ಕಾಲೇಜುಗಳನ್ನು ಹೊಂದಿರುವ ವಿಶ್ವವಿದ್ಯಾಲಯಗಳು ನಿರ್ವಹಣಾ ವೆಚ್ಚ ಭರಿಸಲು ಅನಿವಾರ್ಯವಾಗಿ ಹೆಚ್ಚುವರಿ ಶುಲ್ಕ ನಿಗದಿ ಮಾಡಿವೆ.

'ಏಕ ರೀತಿಯ ಶುಲ್ಕ ನಿಗದಿ ಮಾಡಲು ಸರ್ಕಾರ ಸೂಚಿಸಿದರೂ, ಶುಲ್ಕ ಪರಿಷ್ಕರಣೆಗೆ ಸಿಂಡಿಕೇಟ್ ಅನುಮೋದನೆ ಪಡೆಯಬೇಕು. ವರ್ಷಕ್ಕೆ ಶೇ 10ರಿಂದ ಶೇ 25ರಷ್ಟು ಹೆಚ್ಚಳ ಮಾಡಲು ಅವಕಾಶವಿದೆ. ಹಾಗಾಗಿ, ಏಕ ರೀತಿಯ ಶುಲ್ಕ ನಿಗದಿಗೆ ಇನ್ನಷ್ಟು ಸಮಯ ಬೇಕಾಗುತ್ತದೆ' ಎನ್ನುತ್ತಾರೆ ವಿಶ್ವವಿದ್ಯಾಲಯವೊಂದರ ಕುಲಪತಿ.

ಶಿಫಾರಸು ಮಾಡಿದ ಶುಲ್ಕ

ಪದವಿ	ಶುಲ್ಕ (₹ಗಳಲ್ಲಿ)
ಬಿ.ಎ	11,700
ಬಿ.ಎಸ್‌ಡಬ್ಲ್ಯು	16,400
ಬಿ.ಕಾಂ	19,700
ಬಿ.ಬಿ.ಎ	28,700
ಬಿ.ಎಸ್‌ಸಿ	21,700
ಬಿ.ಸಿ.ಎ	30,700

'ತೆರಿಗೆ ಪಾಲಿನಲ್ಲಿ ರಾಜ್ಯಕ್ಕೆ ಅನ್ಯಾಯ'

ಬೆಂಗಳೂರು: 'ಕೇಂದ್ರದಿಂದ ರಾಜ್ಯಕ್ಕೆ ನೀಡುತ್ತಿರುವ ತೆರಿಗೆ ಪಾಲು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ' ಎಂದು ಕಿಡಿಕಾರಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಅಂಕಿ ಅಂಶಗಳನ್ನು ಮುಂದಿಟ್ಟು ಪ್ರಧಾನಿ ಮೋದಿ ಅವರನ್ನು ಪ್ರಶ್ನಿಸಿದ್ದಾರೆ.

'ಉತ್ತರ ಕೊಡಿ ಮೋದಿ' ಎಂಬ ಟ್ಯಾಗ್ ಲೈನ್ ಅಡಿ 'ಎಕ್ಸ್' ಮಾಡಿರುವ ಅವರು, ರಾಜ್ಯಗಳಿಗೆ ಸಿಗುವ ತೆರಿಗೆ ಪಾಲಿನ ಪಟ್ಟಿಯನ್ನೂ ನೀಡಿದ್ದಾರೆ.

ಉತ್ತರ ಪ್ರದೇಶಕ್ಕೆ ಶೇ 17.94 (₹1,83,237 ಕೋಟಿ), ಬಿಹಾರಕ್ಕೆ ಶೇ 10.06 (₹1,02,737 ಕೋಟಿ), ಕರ್ನಾಟಕಕಕ್ಕೆ ಕೇವಲ ಶೇ 3.64 (₹37,252 ಕೋಟಿ) ತೆರಿಗೆ ಪಾಲು ಸಿಗುತ್ತಿದೆ ಎಂದೂ ಅವರು ತಿಳಿಸಿದ್ದಾರೆ.

ಸೈಬರ್ ಅಪರಾಧಗಳೂ ಹೆಚ್ಚಳ • ಪೊಲೀಸ್ ಇಲಾಖೆ ಮಾಹಿತಿ

ಹೆಚ್ಚಿದ ಕೊಲೆ, ದರೋಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿಲಿಕಾನ್ ಸಿಟಿ'ಯಲ್ಲಿ ವರ್ಷದಿಂದ ವರ್ಷಕ್ಕೆ ಅಪರಾಧ ಪ್ರಕರಣಗಳು ಹೆಚ್ಚುತ್ತಿವೆ.

ನಗರ ಪೊಲೀಸ್ ಇಲಾಖೆ, 2023ರಲ್ಲಿ ನಡೆದ ಅಪರಾಧ ಪ್ರಕರಣಗಳ ಅಂಕಿಅಂಶಗಳನ್ನು ಬಿಡುಗಡೆ ಮಾಡಿದ್ದು ಕೊಲೆ, ದರೋಡೆ, ಚಿನ್ನಾಭರಣ ಕಳವು, ಸೈಬರ್ ಅಪರಾಧಗಳು ಗಣನೀಯ ಪ್ರಮಾಣದಲ್ಲಿ ಏರಿಕೆ ಆಗಿರುವುದು ಕಂಡುಬಂದಿದೆ. ಅಪರಾಧ ಪ್ರಕರಣಗಳ ಹೆಚ್ಚಳ ನಗರದ ಜನರಲ್ಲಿ ಆತಂಕ ಹುಟ್ಟಿಸಿದೆ.

2022ಕ್ಕೆ ಹೋಲಿಸಿದರೆ ಕೊಲೆ ಪ್ರಕರಣಗಳಲ್ಲಿ ಶೇ 31ರಷ್ಟು ಹೆಚ್ಚಳವಾಗಿದೆ. ಪ್ರಚೋದನೆ, ಅನೈತಿಕ ಸಂಬಂಧ, ಕೌಟುಂಬಿಕ ಕಲಹ, ವೈರತ್ವ ಹಾಗೂ ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಕೊಲೆಗಳು ನಡೆದಿವೆ. ಆದರೆ, ಲಾಭಕ್ಕಾಗಿ ನಡೆದಿರುವ ಕೊಲೆ ಪ್ರಕರಣಗಳು ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿವೆ ಎಂದು ವರದಿ ಹೇಳಿದೆ.

2022ಕ್ಕೆ ಹೋಲಿಸಿದರೆ ದರೋಡೆ ಪ್ರಕರಣಗಳಲ್ಲಿ ಶೇ 41ರಷ್ಟು ಹೆಚ್ಚಳವಾಗಿದೆ. 673 ದರೋಡೆ ಪ್ರಕರಣಗಳಲ್ಲಿ 385 (ಶೇ 57) ಮೊಬೈಲ್ ಕಸಿದು ಪರಾರಿಯಾದ ಪ್ರಕರಣಗಳೇ ಆಗಿವೆ. ಅಲ್ಲದೇ ಆತ್ಮಹತ್ಯೆ ಪ್ರಕರಣಗಳೂ ಹೆಚ್ಚು ವರದಿಯಾಗಿವೆ.



ಆರೋಪಿಗಳಿಂದ ಜಪ್ತಿ ಮಾಡಿಕೊಳ್ಳಲಾಗಿದ್ದ ಬೈಕ್‌ಗಳನ್ನು ವೀಕ್ಷಿಸಿದ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ (ಸಂಗ್ರಹ ಚಿತ್ರ).



ಮಾದಕ ವಸ್ತುಗಳ ಮಾರಾಟ ಜಾಲವು ವರ್ಷದಿಂದ ವರ್ಷಕ್ಕೆ ವಿಸ್ತಾರವಾಗಿ ಬೆಳೆಯುತ್ತಿದೆ. 2021ರಲ್ಲಿ ₹60 ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ಎಂಟು ವಿಭಾಗದ ಪೊಲೀಸರು ಹಾಗೂ ಸಿಸಿಬಿ ಪೊಲೀಸರು ಕಾರ್ಯಾಚರಣೆ ನಡೆಸಿ ಜಪ್ತಿ ಮಾಡಿದ್ದರು. ಅದೇ 2023ರಲ್ಲಿ ₹103 ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ಜಪ್ತಿ ಮಾಡಲಾಗಿದೆ. ಬಂಧಿತ ಆರೋಪಿಗಳ ಸಂಖ್ಯೆಯೂ ಏರಿಕೆಯಾಗಿದೆ.

ಅಪಹರಣ ಪ್ರಕರಣಗಳೂ ಏರುಗತಿಯಲ್ಲಿ ಸಾಗಿರುವುದು ಕಂಡುಬಂದಿದೆ. 2021ರಲ್ಲಿ ಬೇರೆ ಬೇರೆ ಕಾರಣಕ್ಕೆ 803 ಮಂದಿಯ ಅಪಹರಣವಾಗಿತ್ತು. ಆ ಪೈಕಿ 783 ಮಂದಿಯನ್ನು ಪತ್ತೆ ಮಾಡಲಾಗಿತ್ತು. 2022ರಲ್ಲಿ 931 ಮಂದಿ ಅಪಹರಣವಾಗಿದ್ದರು. ಅದರಲ್ಲಿ 908 ಮಂದಿಯನ್ನು ಪತ್ತೆ ಮಾಡಲಾಗಿತ್ತು. 23 ಮಂದಿ ಇನ್ನೂ ಸಿಕ್ಕಿಲ್ಲ. ಅದೇ 2023ರಲ್ಲಿ 1,189 ಮಂದಿ ಅಪಹರಣಕ್ಕೆ ಒಳಗಾಗಿದ್ದರು. 981 ಮಂದಿಯನ್ನು ಪತ್ತೆ ಮಾಡಲಾಗಿದೆ. 208 ಮಂದಿ ಇನ್ನೂ ಪತ್ತೆಯಾಗಿಲ್ಲ. ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳು ಏರಿಕೆ ಹಾದಿಯಲ್ಲಿವೆ.

ಸಾವು–ನೋವು: ಕಳೆದ ವರ್ಷ 2,358 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದರು. ವಿದ್ಯುತ್ ಆಘಾತ, ಕಾಲು ಜಾರಿ ಬಿದ್ದು ಹಾಗೂ ಕಟ್ಟಡದಿಂದ ಆಕಸ್ಮಿಕವಾಗಿ ಬಿದ್ದಿದ್ದ ಪ್ರಕರಣಗಳಲ್ಲಿ 3,490 ಮಂದಿ ಮೃತಪಟ್ಟಿದ್ದರು.

ವಿದೇಶಿ ಪ್ರಜೆಗಳ ವಿರುದ್ಧ ಕ್ರಮ: ಅಪರಾಧ ಕೃತ್ಯಗಳಲ್ಲಿ ಭಾಗಿಯಾದ ಹಾಗೂ ಅಕ್ರಮವಾಗಿ ನೆಲೆಸಿರುವ ವಿದೇಶಿಯರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಕಳೆದ ವರ್ಷ 92 ಪ್ರಕರಣಗಳು ವರದಿಯಾಗಿದ್ದವು. ಅದರಲ್ಲಿ 126 ವಿದೇಶಿಯರನ್ನು ಬಂಧಿಸಲಾಗಿತ್ತು. ಅಕ್ರಮವಾಗಿ ನೆಲೆಸಿದ್ದ 247 ವಿದೇಶಿಯರನ್ನು ಅವರ ದೇಶಕ್ಕೆ ವಾಪಸ್ ಕಳುಹಿಸಲಾಗಿದೆ.

ನ್ಯಾಯಾಲಯದಲ್ಲಿ ಎಲ್.ಪಿ.ಆರ್(ಗೈರು ಪ್ರಕರಣ) ಪ್ರಕರಣಗಳಿದ್ದು ತಲೆಮರೆಸಿಕೊಂಡಿದ್ದ ಆರೋಪಿಗಳ ಪೈಕಿ 99 ಮಂದಿಯನ್ನು ಪತ್ತೆಹಚ್ಚಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ.

ಅಪರಾಧ ಪ್ರಕರಣಗಳು ಹಾಗೂ ಪತ್ತೆಯಾದ ಆರೋಪಿಗಳು

ಅಪರಾಧ ಪ್ರಕಾರ	2021		2022		2023	
	ವರದಿ	ಪತ್ತೆ	ವರದಿ	ಪತ್ತೆ	ವರದಿ	ಪತ್ತೆ
ಕೊಲೆ	145	143	156	156	205	200
ಲಾಭಕ್ಕಾಗಿ ಕೊಲೆ	8	8	17	17	2	2
ಡಕಾಯಿತಿ	35	35	23	23	36	34
ರಾಬರಿ	364	317	478	414	673	437
ರಸ್ತೆಯಲ್ಲಿ ಸರ ಕಳವು	166	166	151	139	153	114
ಹಗಲು ವೇಳೆ ಮನೆ ಬಾಗಿಲು ಒಡೆದು ಚಿನ್ನ ಕಳವು	135	82	179	99	265	118
ರಾತ್ರಿ ವೇಳೆ ಮನೆ ಬಾಗಿಲು ಒಡೆದು ಚಿನ್ನ ಕಳವು	654	361	702	333	879	264
ಮನೆಯಲ್ಲಿ ಕಳವು	591	290	912	339	1,692	376
ಕೆಲಸಗಾರರಿಂದ ಕಳವು	177	132	205	146	320	141
ವಾಹನ ಕಳವು	4,124	1,563	5,062	1,965	5,909	1,437
ಸಾಮಾನ್ಯ ಕಳವು	1,167	482	1,369	531	2,493	480
ಒಟ್ಟು	7,566	3,579	9,254	4,162	12,627	3,603

ಕೊಲೆ ಪ್ರಕರಣಗಳು

2021	2022	2023
153	173	207

ನಾಪತ್ತೆಯಾದವರ ವಿವರ

ವರ್ಷ	ನಾಪತ್ತೆ	ಪತ್ತೆ	ಪತ್ತೆಯಾಗದವರು
2021	4,205	3,979	226
2022	4,854	4,511	343
2023	6,006	5,026	980

2023ರಲ್ಲಿ ಮಹಿಳೆಯರ ಮೇಲೆ ನಡೆದ ದೌರ್ಜನ್ಯ ಪ್ರಕರಣಗಳ ವಿವರ


ಅಪರಾಧ ಪ್ರಕಾರ	ವರದಿಯಾದ ಪ್ರಕರಣಗಳು	ಆರೋಪಿಗಳ ಪತ್ತೆ
ಅತ್ಯಾಚಾರ	176	176
ಲೈಂಗಿಕ ಕಿರುಕುಳ	1,135	1,004
ನಿಂದನೆ	60	52
ವರದಕ್ಷಿಣೆ ಸಾವು	25	25
ಪತಿಯಿಂದ ಕ್ರೌರ್ಯ	696	696
ವೇಶ್ಯಾವಾಟಿಕೆಗೆ ದೂಡಲು ಮಾನವ ಕಳ್ಳ ಸಾಗಣೆ ಪ್ರಕರಣಗಳು	161	161
ವರದಕ್ಷಿಣೆ ಕಿರುಕುಳ ಪ್ರಕರಣಗಳು	1,007	1,007
ಒಟ್ಟು	3,260	3,121

ಸೈಬರ್ ಅಪರಾಧ 14,285 ತನಿಖಾ ಹಂತದ ಪ್ರಕರಣ



2022ಕ್ಕೆ ಹೋಲಿಸಿದರೆ ಸೈಬರ್ ಅಪರಾಧ ಪ್ರಕರಣಗಳು ಗಣನೀಯವಾಗಿ ಹೆಚ್ಚಳವಾಗಿವೆ. ಸೈಬರ್ ಟಿಪ್‌ಲೈನ್, ಎನ್‌ಸಿಆರ್‌ಪಿ ಪೋರ್ಟಲ್, ಸಹಾಯವಾಣಿ 112ರ ಮೂಲಕ ದಾಖಲಾದ ದೂರುಗಳನ್ನು ಎಫ್‌ಐಆರ್‌ಗಳಾಗಿ ಪರಿವರ್ತಿಸಲಾಗಿದೆ.

2021ರಲ್ಲಿ 6,422 ಸೈಬರ್ ಅಪರಾಧ ಪ್ರಕರಣಗಳು ವರದಿಯಾಗಿದ್ದವು. ಆ ಪೈಕಿ, 2,257 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. 192 ಪ್ರಕರಣಗಳಲ್ಲಿ ಆರೋಪಿಗಳ ಪತ್ತೆ ಸಾಧ್ಯವಾಗಿಲ್ಲ. ಅದೇ 2022ರಲ್ಲಿ 9,940 ಪ್ರಕರಣ ದಾಖಲಾಗಿದ್ದವು. 2,431 ಪ್ರಕರಣಗಳಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಲಾಗಿತ್ತು. ಕಳೆದ ವರ್ಷ 17,623 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿದ್ದವು. 1,271 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿತ್ತು. 14,285 ಪ್ರಕರಣಗಳು ತನಿಖಾ ಹಂತದಲ್ಲಿವೆ.



ಮಾದಕ ವಸ್ತುಗಳ ಜಪ್ತಿ, ಆರೋಪಿಗಳ ಬಂಧನದ ವಿವರ

	2021	2022	2023
ಪ್ರಕರಣಗಳ ಸಂಖ್ಯೆ	4,555	4,027	3,443
ಮಾದಕ ವಸ್ತು ಜಪ್ತಿ ಪ್ರಮಾಣ (ಕೆ.ಜಿಯಲ್ಲಿ)	3,705	4,228	5,387
ಬಂಧಿತರ ಸಂಖ್ಯೆ	5,753	5,215	4,399
ಜಪ್ತಿ ಮಾಡಿಕೊಂಡ ಮಾದಕ ವಸ್ತು ಮೌಲ್ಯ (ಕೋಟಿಯಲ್ಲಿ)	₹60.3	₹92.71	₹103.22

ರಾಮ ಮಂದಿರಕ್ಕೆ ಬಾಂಬ್ ಬೆದರಿಕೆ: ಇಬ್ಬರ ಬಂಧನ

ಲಖನೌ(ಪಿಟಿಐ): ಅಯೋಧ್ಯೆಯ ರಾಮ ಮಂದಿರ ಸ್ಫೋಟಿಸುವುದಾಗಿ ಹಾಗೂ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಗುರಿಯಾಗಿಸಿ ಬಾಂಬ್ ದಾಳಿ ಮಾಡುವುದಾಗಿ ಬೆದರಿಕೆ ಹಾಕಿದ್ದ ಆರೋಪದಡಿ ಇಬ್ಬರನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

ತಾಹರ್ ಸಿಂಗ್ ಹಾಗೂ ಓಂಪ್ರಕಾಶ್ ಮಿಶ್ರಾ ಬಂಧಿತರು.

ಉತ್ತರಪ್ರದೇಶದ ಎಸ್‌ಟಿಎಫ್, ಗೋಮತಿ ನಗರದ ವಿಭೂತಿಖಂಡ ಪ್ರದೇಶದಲ್ಲಿ ಈ ಇಬ್ಬರನ್ನು ಬಂಧಿಸಿದೆ. ಬಂಧಿತರನ್ನು ವಿಚಾರಣೆಗೆ ಒಳಪಡಿಸಿ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕರ್ನಾಪೆಕ್ಸ್: ಅಂಚೆ ಚೀಟಿ ಹಬ್ಬ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಚೆ ಇಲಾಖೆ ವತಿಯಿಂದ ಇದೇ 5ರಿಂದ 8ರವರೆಗೆ 'ಕರ್ನಾಪೆಕ್ಸ್–2024' ಅಂಚೆ ಚೀಟಿಗಳ ಹಬ್ಬ, 13ನೇ ರಾಜ್ಯಮಟ್ಟದ ಅಂಚೆ ಚೀಟಿ ಪ್ರದರ್ಶನವನ್ನು ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಕುಮಾರ್ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇತಿಹಾಸ, ಸಂಸ್ಕೃತಿ, ಕಲೆ ಪರಂಪರೆ, ವಿಜ್ಞಾನ, ತಂತ್ರಜ್ಞಾನ, ವನ್ಯಜೀವಿಗಳು, ಸಸ್ಯಸಂಪತ್ತು ಸೇರಿದಂತೆ ವಿವಿಧ ವಿಷಯಗಳ ಕುರಿತ ಅಂಚೆ ಚೀಟಿಗಳು, ವಿಶೇಷ ಲಕೋಟೆಗಳ ವಿಭಿನ್ನ ಸಂಗ್ರಹಗಳು ಪ್ರದರ್ಶನದಲ್ಲಿರಲಿವೆ' ಎಂದು ತಿಳಿಸಿದರು.

ಕರ್ನಾಪೆಕ್ಸ್–2024ರ ಅಂಗವಾಗಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಗಾಗಿ ಡಾಕ್ ರೂಮ್ ಸಹಯೋಗದಲ್ಲಿ ಪೋಸ್ಟ್‌ಕಾರ್ಡ್ ಬರಹ, ಓರಿಗಾಮಿ, ಮಂಡಲ ಕಲೆ, ಮ್ಯೂರಲ್ ಗೋಡೆ ಚಿತ್ರಕಲೆ ಕುರಿತು ಕಾರ್ಯಾಗಾರಗಳು ಸೇರಿದಂತೆ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ' ಎಂದರು.

'ಸಂದರ್ಶಕರು ನೇರವಾಗಿ ರಸಪ್ರಶ್ನೆಗಳಲ್ಲಿ ಭಾಗವಹಿಸಿ ಬಹುಮಾನ ಗೆಲ್ಲುವ ಅವಕಾಶಗಳಿವೆ. ಪಾಪ್ ಅಪ್ ಅಂಚೆ ಕಚೇರಿಯ ಮೂಲಕ ತಮ್ಮ ಪ್ರೀತಿಪಾತ್ರರಿಗೆ ಪೋಸ್ಟ್ ಕಾಡ್‌ಗಳನ್ನು ಕಳುಹಿಸುವ ವ್ಯವಸ್ಥೆ ಇದೆ. ಕವಯಿತ್ರಿ ರೂಬಿನಾಜ್ ಅವರು ಸಂದರ್ಶಕರಿಗೆ ಸ್ಥಳದಲ್ಲಿಯೇ ಕವನಗಳನ್ನು ರಚಿಸಿ ಕೊಡಲಿದ್ದಾರೆ' ಎಂದು ತಿಳಿಸಿದರು.

'ಪ್ರದರ್ಶನದ ಆವರಣದಲ್ಲಿ ಪ್ರವಾಸೋದ್ಯಮ ಇಲಾಖೆ, ಅರಣ್ಯ ಇಲಾಖೆ, ಕೆಎಂಎಫ್ ಮತ್ತು ಕೆಎಸ್‌ಡಿಎಲ್‌ನ ಮಳಿಗೆಗಳಿರಲಿವೆ. ಅಂಚೆ ಇಲಾಖೆಯು ಆಧಾರ ತಿದ್ದುಪಡಿ ಮತ್ತು ಮೈ ಸ್ಟ್ಯಾಂಪ್ ಕೌಂಟರ್‌ಗಳನ್ನು ತೆರೆಯಲಿದೆ' ಎಂದು ವಿವರಿಸಿದರು.

ಸಂಸದ ಪಿ.ಸಿ. ಮೋಹನ್, ಶಾಸಕರಾದ ರಿಜ್ವಾನ್ ಅರ್ಷದ್, ಎನ್.ಎ. ಹ್ಯಾರಿಸ್, ಅಶ್ವಿನಿ ಪುನೀತ್ ರಾಜ್‌ಕುಮಾರ್, ಎಫ್‌ಕೆಸಿಸಿಐ ಅಧ್ಯಕ್ಷ ರಮೇಶಚಂದ್ರ ಲಹೋಟಿ ಭಾಗವಹಿಸಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು 'ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿ'ಯ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಹೇಳಿದರು.

ರೋಲ್ಡ್‌ಗೋಲ್ಡ್ ಸರ, ನಗದು ಕಸಿದು ಪರಾರಿ

ಆರೋಪಿಗಳ ಬೆನ್ನಟ್ಟಿ ಹಿಡಿದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಾಪಾರಿಯೊಬ್ಬರ ಮೇಲೆ ಹಲ್ಲೆ ನಡೆಸಿ ರೋಲ್ಡ್‌ಗೋಲ್ಡ್ ಸರ ಹಾಗೂ ನಗದು ಕಸಿದು ಪರಾರಿಯಾಗುತ್ತಿದ್ದ ಇಬ್ಬರು ಆರೋಪಿಗಳನ್ನು ಮಾಗಡಿ ರಸ್ತೆ ಸಂಚಾರ ಠಾಣೆ ಪೊಲೀಸರು ಬೆನ್ನಟ್ಟಿ ಹಿಡಿದು ಬಂಧಿಸಿದ್ದಾರೆ.

ಚಾಮುಂಡಿ ನಗರ ನಿವಾಸಿಗಳಾದ ವಿಜಯ್ (26) ಮತ್ತು ಸೇಂಥಿಲ್ (42) ಬಂಧಿತ ಆರೋಪಿಗಳು.

ಉತ್ತರ ಭಾರತ ಮೂಲದ ನೂರುಲ್ಲಾ ಅವರು ರಾಜಾಜಿನಗರದ 6ನೇ ಬ್ಲಾಕ್‌ನಲ್ಲಿ ಬ್ಯಾಗ್ ಮಾರಾಟ ಮಾಡುತ್ತಿದ್ದರು. ಮಂಗಳವಾರ ಬೆಳಿಗ್ಗೆ 11ಕ್ಕೆ ಬ್ಯಾಗ್ ಖರೀದಿಸುವ ನೆಪದಲ್ಲಿ ಇಬ್ಬರು ಆರೋಪಿಗಳು ಬಂದರು. ವ್ಯಾಪಾರಿಯಿಂದ ರೋಲ್ಡ್‌ಗೋಲ್ಡ್ ಸರ ಹಾಗೂ ಜೇಬಿನಲ್ಲಿದ್ದ ₹500 ನಗದು ಕಸಿದು ಪರಾರಿಯಾಗಲು ಮುಂದಾದರು.

ಇದನ್ನು ಗಮನಿಸಿದ ಸ್ಥಳೀಯರು, ಸ್ಥಳದಿಂದ ಸ್ವಲ್ಪ ದೂರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಮಾಗಡಿ ರಸ್ತೆ ಸಂಚಾರ ಠಾಣೆ ಎಎಸ್‌ಐ ರಾಮಚಂದ್ರ ಮತ್ತು ಮಹಿಳಾ ಪೊಲೀಸ್ ಕಾನ್‌ಸ್ಟೆಬಲ್ ಸಂಧ್ಯಾ ಅವರಿಗೆ ಮಾಹಿತಿ ನೀಡಿದ್ದರು. ಬಳಿಕ, ರಾಮಚಂದ್ರ ಆರೋಪಿಗಳ ಆಟೊ ಹಿಂಬಾಲಿಸಿ ಅಡ್ಡಗಟ್ಟಿ ಹಿಡಿದುಕೊಂಡಿದ್ದಾರೆ. ಆಗ ವಿಜಯ್, ತನ್ನ ಬಳಿಯಿದ್ದ ಸರಗಳನ್ನು ಸೇಂಥಿಲ್‌ಗೆ ಕೈಗೆ ಎಸೆದು ಪರಾರಿಯಾಗುವಂತೆ ಸೂಚಿಸಿದ್ದ. ಆಗ ಕೂಡಲೇ ಕಾರ್ಯ ಪ್ರವೃತ್ತರಾದ ಸಂಧ್ಯಾ ಅವರು ಸೇಂಥಿಲ್‌ನನ್ನು ಹಿಡಿದುಕೊಂಡಿದ್ದಾರೆ. ಬಳಿಕ ಸ್ಥಳೀಯರ ನೆರವಿನೊಂದಿಗೆ ಇಬ್ಬರು ಆರೋಪಿಗಳನ್ನು ಮಾಗಡಿ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ.

ಆರೋಪಿಗಳ ಪೈಕಿ ವಿಜಯ್ ವಿರುದ್ಧ ನಗರದ ವಿವಿಧ ಠಾಣೆಗಳಲ್ಲಿ ಕಳವು, ಹಲ್ಲೆ, ದರೋಡೆ ಪ್ರಕರಣಗಳು ದಾಖಲಾಗಿದ್ದು, ರೌಡಿಪಟ್ಟಿ ಸಹ ತೆರೆಯಲಾಗಿದೆ.

ಎಎಸ್‌ಐ ರಾಮಚಂದ್ರ ಮತ್ತು ಕಾನ್‌ಸ್ಟೆಬಲ್ ಸಂಧ್ಯಾ ಅವರ ಕರ್ತವ್ಯಪ್ರಜ್ಞೆಯನ್ನು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಶ್ಲಾಘಿಸಿದ್ದಾರೆ. ಪೊಲೀಸರಿಬ್ಬರು ಕಳ್ಳರನ್ನು ಬೆನ್ನಟ್ಟಿ ಹಿಡಿದ ದೃಶ್ಯವನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಕೌಟುಂಬಿಕ ಕಲಹ: ತಾಯಿ, ಮಗು ಆತ್ಮಹತ್ಯೆಗೆ ಯತ್ನ

ಬೆಂಗಳೂರು: ಕೌಟುಂಬಿಕ ಕಲಹದಿಂದ ಬೇಸತ್ತು ತಾಯಿ ತನ್ನ ಮಗುವಿನೊಂದಿಗೆ ಅಡುಗೆ ಅನಿಲ ಸೋರಿಕೆ ಮಾಡಿಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆ ವೈಟ್‌ಫೀಲ್ಡ್ ಬಳಿಯ ನಾಗೊಂಡನಹಳ್ಳಿ ಬಳಿ ಬುಧವಾರ ನಡೆದಿದೆ.

ಮಾಹಿತಿ ತಿಳಿದು ಸ್ಥಳಕ್ಕೆ ತೆರಳಿ ಅಗ್ನಿಶಾಮಕ ದಳ ಮತ್ತು ಪೊಲೀಸರ ಜಂಟಿ ಕಾರ್ಯಾಚರಣೆ ನಡೆಸಿ ಬಾಗಿಲು ಒಡೆದು ತಾಯಿ ಮತ್ತು ಮಗುವನ್ನು ರಕ್ಷಣೆ ಮಾಡಿದ್ದಾರೆ.

ನಾಗೊಂಡನಹಳ್ಳಿಯ ಅಪಾರ್ಟ್‌ಮೆಂಟ್‌ವೊಂದರ ನಿವಾಸಿ ಪ್ರಭು ಅವರ ಪತ್ನಿ ತಮಿಳು ಸೆಲ್ವಿ (37) ಮತ್ತು 5 ವರ್ಷದ ಮಗುವನ್ನು ರಕ್ಷಿಸಲಾಗಿದೆ.

'ತಮಿಳುನಾಡಿನ ಪ್ರಭು ಮತ್ತು ತಮಿಳು ಸೆಲ್ವಿ ದಂಪತಿ ಮಗನ ಜತೆಗೆ ಅಪಾರ್ಟ್‌ಮೆಂಟ್‌ನಲ್ಲಿ ನೆಲೆಸಿದ್ದರು. ದಂಪತಿ ನಡುವೆ ಕೌಟುಂಬಿಕ ವಿಚಾರಕ್ಕೆ ಜಗಳ ನಡೆಯುತ್ತಿತ್ತು. ಬುಧವಾರ ಜಗಳ ನಡೆದು ಘಟನೆಯಿಂದ ಬೇಸರಗೊಂಡ ತಮಿಳು ಸೆಲ್ವಿ, ಪತಿ ಕೆಲಸಕ್ಕೆ ತೆರಳಿದಾಗ ಫ್ಲ್ಯಾಟ್ ಬಾಗಿಲು ಹಾಗೂ ಕಿಟಕಿ ಲಾಕ್ ಮಾಡಿಕೊಂಡು ಮನೆಯಲ್ಲಿದ್ದ ಅಡುಗೆ ಸಿಲಿಂಡರ್‌ನಿಂದ ಅನಿಲವನ್ನು ಸೋರಿಕೆ ಮಾಡಿಕೊಂಡಿದ್ದಾರೆ. ಅನುಮಾನಗೊಂಡು ಪತಿ ಮನೆಗೆ ವಾಪಸ್ ಬಂದು ಬಾಗಿಲು ತಟ್ಟಿದ್ದಾರೆ. ಬಾಗಿಲು ತೆರೆಯದೇ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಸೆಲ್ವಿ ಹೇಳಿದ್ದಾರೆ. ಗಾಬರಿಗೊಂಡ ಪ್ರಭು, ಮನೆಯ ಕಿಟಕಿ ಬಳಿ ಬಂದು ನೋಡಿದಾಗ ಗ್ಯಾಸ್ ವಾಸನೆ ಬರುತ್ತಿತ್ತು. ತಕ್ಷಣ ಅಗ್ನಿಶಾಮಕ ದಳದ ಸಿಬ್ಬಂದಿಗೆ ಮಾಹಿತಿ ನೀಡಿದ್ದರು' ಎಂದು ಮೂಲಗಳು ತಿಳಿಸಿದೆ.

ಅಗ್ನಿಶಾಮಕ ಮತ್ತು ಪೊಲೀಸ್ ಸಿಬ್ಬಂದಿ ಒಳ ಹೋಗುತ್ತಿದ್ದಂತೆ ತಮಿಳು ಸೆಲ್ವಿ ಬೆಂಕಿ ಪೊಟ್ಟಣ ತೋರಿಸಿ ಬೆಂಕಿ ಹಚ್ಚಿಕೊಳ್ಳುವುದಾಗಿ ಬೆದರಿಕೆ ಹಾಕಿದ್ದರು. ಉಪಾಯದಿಂದ ಮುಂದಕ್ಕೆ ಸಾಗಿದ ಸಿಬ್ಬಂದಿ ಇಬ್ಬರನ್ನೂ ರಕ್ಷಣೆ ಮಾಡಿದ್ದಾರೆ.

‘ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ’ ಕಾರ್ಯಕ್ರಮ

ದೂರುಗಳಿಗೆ ಸ್ಥಳದಲ್ಲೇ ಪರಿಹಾರ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾತೆ ಮಾಡಿಕೊಡಲು ₹1 ಲಕ್ಷ ಲಂಚ ಪಡೆದ ಅಧಿಕಾರಿ ಅಮಾನತು, ಪಡಿತರ ಚೀಟಿಗೆ ಲಂಚ ಪಡೆದ, ಅಕ್ಕಿಗೆ ಹೆಚ್ಚುವರಿ ಹಣ ಪಡೆದ ನ್ಯಾಯಬೆಲೆ ಅಂಗಡಿ ಪರವಾನಗಿ ರದ್ದು, ಬಾಲಕನ ಚಿಕಿತ್ಸೆಗಾಗಿ ₹1 ಲಕ್ಷ ಮಂಜೂರು...

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ‘ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ’ ಕಾರ್ಯಕ್ರಮದಲ್ಲಿ ಕೆಲವು ನಾಗರಿಕರ ದೂರುಗಳಿಗೆ ಸ್ಥಳದಲ್ಲಿಯೇ ನೀಡಿದ ಪರಿಹಾರಗಳಿವು. ಕೆ.ಆರ್. ಪುರದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಸುಮಾರು ನಾಲ್ಕು ಸಾವಿರ ದೂರುಗಳು ದಾಖಲಾದವು.

‘ಬಿಬಿಎಂಪಿಯಲ್ಲಿ ಕೆಲಸ ಮಾಡುವ ವಿನಯ್, ವೆಂಕಟೇಶ್ ‘ಎ’ ಖಾತೆ ಮಾಡಿಸಿಕೊಡುತ್ತೇವೆ ಎಂದು ₹1 ಲಕ್ಷ ಲಂಚ ಪಡೆದು ಮೋಸ ಮಾಡಿದ್ದಾರೆ. ನ್ಯಾಯ ಕೊಡಿಸಿ’ ಎಂದು ಟಿ.ಸಿ. ಪಾಳ್ಯ ಆನಂದನಗರದ ರೀತಮ್ಮ ಮನವಿ ಮಾಡಿದರು.

‘ಲಂಚ ಪಡೆದ ನೌಕರರನ್ನು ಅಮಾನತು ಮಾಡಬೇಕು, ಪೊಲೀಸ್ ಪ್ರಕರಣ ದಾಖಲಿಸಬೇಕು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಡಿಸಿಎಂ ಸೂಚಿಸಿದರು.

ವಿಜಿನಾಪುರದ ವಾಜಿದ್- ಮಸ್ಕಾನ್ ದಂಪತಿಯ ಮಗನ ಬೆನ್ನುಮೂಳೆ ಚಿಕಿತ್ಸೆ ಹಾಗೂ ನಾರಾಯಣಪುರ ನಿವಾಸಿ ಸೆಲ್ವಮಣಿ ಪತಿ ರಾಜ ಅವರ ಡಯಾಲಿಸಿಸ್‌ಗೆ ತಲಾ ₹1 ಲಕ್ಷ ಪರಿಹಾರ ನೀಡಲು ಮುಖ್ಯ ಆಯುಕ್ತರಿಗೆ ಸೂಚಿಸಿದರು.

‘ಕೆ.ಆರ್. ಪುರ ನ್ಯಾಯಬೆಲೆ ಅಂಗಡಿಯಲ್ಲಿ ಒಂದು ಪಡಿತರ ಚೀಟಿ ಮಾಡಿಸಲು ₹7 ಸಾವಿರ ಬೇಡಿಕೆ ಮತ್ತು ಬಿಪಿಎಲ್ ಕಾರ್ಡುದಾರಿಗೆ 3 ಕೆ.ಜಿ ಅಕ್ಕಿ ನೀಡಿ, ಬೇರೆಯವರಿಗೆ ₹20ಕ್ಕೆ ಮಾರಾಟ ಮಾಡಲಾಗುತ್ತಿದೆ’ ಎಂದು ರಮ್ಯಾ ದೂರಿದರು.

‘ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ನ್ಯಾಯಬೆಲೆ ಅಂಗಡಿ ಪರವಾನಗಿ ರದ್ದು ಮಾಡಬೇಕು. ನಂತರ ಮಾಧ್ಯಮಗಳಿಗೆ ಮಾಹಿತಿ ನೀಡಬೇಕು’ ಎಂದು ಜಿಲ್ಲಾಧಿಕಾರಿ ದಯಾನಂದ್ ಅವರಿಗೆ ಶಿವಕುಮಾರ್ ಸೂಚನೆ ನೀಡಿದರು.

‘ಕೆ.ಆರ್. ಪುರದ ಗಂಗಾಶೆಟ್ಟಿ ಕೆರೆಗೆ ಮಣ್ಣು ಮುಚ್ಚಿ ಅಪಾರ್ಟ್‌ಮೆಂಟ್‌ಗಳನ್ನು ಕಟ್ಟುತ್ತಿದ್ದಾರೆ. ಟಿ.ಸಿ ಪಾಳ್ಯ ಸಿಗ್ನಲ್ ಬಳಿ ವೆಂಗಯ್ಯನಕೆರೆಗೆ ಮಣ್ಣು ತುಂಬಿ ಲೇಔಟ್ ನಿರ್ಮಾಣ ಮಾಡಲಾಗಿದೆ. ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ’ ಎಂದು ಭಾರತ ರೈತ ಸಮಾಜದ ರಾಜ್ಯ ಘಟಕದ ಅಧ್ಯಕ್ಷ ಲಕ್ಷ್ಮಣ್ ದೂರಿದರು. ಜಿಲ್ಲಾಧಿಕಾರಿ ದಯಾನಂದ್ ಅವರಿಗೆ ಕ್ರಮ ಕೈಗೊಳ್ಳಲು ಶಿವಕುಮಾರ್ ಹೇಳಿದರು.

‘ಜನರ ಅಹವಾಲುಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗುವುದು’ ಎಂದು ತಿಳಿಸಿದರು.

ನೀರಿನ ಸಮಸ್ಯೆ, ಹದಗೆಟ್ಟ ರಸ್ತೆ, ಬೀದಿದೀಪದ ಸಮಸ್ಯೆ, ಖಾತೆ ಸೇರಿದಂತೆ ಯಾವುದೇ ದಾಖಲೆ ಪಡೆಯಲು ತೊಂದರೆ, ಫಲಾನುಭವಿಗಳಿಗೆ ಲಭ್ಯವಾಗದ ಸಮಾಜ ಕಲ್ಯಾಣ ಯೋಜನೆ, ರಾಜಕಾಲುವೆ ಒತ್ತುವರಿಯಿಂದ ಮಳೆ ನೀರು ಮನೆಗೆ ನುಗ್ಗುವುದು ಸೇರಿದಂತೆ ಹಲವು ಸಮಸ್ಯೆಗಳನ್ನು ಬಗೆಹರಿಸಬೇಕೆಂದು ನಾಗರಿಕರು ಅರ್ಜಿ ಸಲ್ಲಿಸಿದರು.

ಶಾಸಕರಾದ ಬೈರತಿ ಬಸವರಾಜು, ಮಂಜುಳಾ ಅರವಿಂದ ಲಿಂಬಾವಳಿ, ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆಯ (ಯೋಜನಾ ಮಂಡಳಿ) ಉಪಾಧ್ಯಕ್ಷ ಪ್ರೊ. ರಾಜೀವ್ ಗೌಡ, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, ಬಿಬಿಎಂಪಿ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್, ಬಿಡಿಎ ಆಯುಕ್ತ ಜಯರಾಮ್, ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ ದಯಾನಂದ್, ಜಲಮಂಡಳಿ ಅಧ್ಯಕ್ಷ ರಾಮಪ್ರಶಾಂತ್ ಮನೋಹರ್, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸತ್ಯವತಿ ಭಾಗವಹಿಸಿದ್ದರು.



‘ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ’ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಾಗರಿಕರಿಂದ ದೂರು ಸ್ವೀಕರಿಸಿದರು

‘ಬಸವರಾಜನೂ ಹುಟ್ಟು ಕಾಂಗ್ರೆಸ್ಸಿಗ’

‘ಮನೆ ಖಾತೆ ಮಾಡಿಸಿಕೊಳ್ಳಲು 30 ವರ್ಷಗಳಿಂದ ಕಷ್ಟಪಡುತ್ತಿದ್ದೇನೆ. ಹುಟ್ಟು ಕಾಂಗ್ರೆಸ್ಸಿಗನಾದ ನನ್ನ ಈ ಸಮಸ್ಯೆ ಬಗೆಹರಿಸಿ’ ಎಂದ ವರ್ತೂರ್ ಆನಂದ್ ಅವರಿಗೆ, ‘ಬಸವರಾಜನೂ ಹುಟ್ಟು ಕಾಂಗ್ರೆಸ್ಸಿಗ’ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಪಕ್ಕದಲ್ಲೇ ಕುಳಿತಿದ್ದ ಬೈರತಿ ಬಸವರಾಜು ಅವರ ಕಾಲೆಳೆದರು.

ಕೆ.ಆರ್.ಪುರದಲ್ಲಿ 80 ಅಡಿ ರಸ್ತೆ ವಿಸ್ತರಣೆಗೆ ಜಾಗ ಕಳೆದುಕೊಂಡ ಭಾಗ್ಯಮ್ಮ ಅವರಿಗೆ ಪರಿಹಾರ ಒದಗಿಸಲು ಶಾಸಕ ಬೈರತಿ ಬಸವರಾಜು ಅವರಿಗೆ ಸೂಚಿಸಿದರು.

‘ಶಾಸಕ ಬೈರತಿ ಬಸವರಾಜು ಅವರ ಸಂಬಂಧಿ ವೇಣು ರಸ್ತೆಯನ್ನು ಬಂದ್ ಮಾಡಿ ತೊಂದರೆ ಕೊಡುತ್ತಿದ್ದಾರೆ. ಹೆಣ್ಣೂರು ಪೊಲೀಸ್ ಠಾಣೆಗೆ 3 ಬಾರಿ ದೂರು ನೀಡಿದರೂ ಕ್ರಮ ತೆಗೆದುಕೊಂಡಿಲ್ಲ’ ಎಂದು ಖಾದರ್ ಮೊಹಿದ್ದೀನ್ ಎಂಬವರು ಆರೋಪ ಮಾಡಿದರು.

‘ಶಾಸಕರೇ ಇದು ನಿಮ್ಮ ಸಮಸ್ಯೆ. ಬೇಗ ಬಗೆಹರಿಸಿಕೊಳ್ಳಿ’ ಎಂದು ಶಿವಕುಮಾರ್ ಹೇಳಿದರು.

ರಾಜಕಾಲುವೆ ಅಕ್ಕಪಕ್ಕ ರಸ್ತೆ

‘ರಾಜಕಾಲುವೆ ಅಕ್ಕಪಕ್ಕದ 50 ಮೀಟರ್ ಜಾಗವನ್ನು ಸ್ವಾಧೀನ ಪಡಿಸಿಕೊಂಡು, ರಸ್ತೆ ನಿರ್ಮಿಸಲಾಗುತ್ತದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ರಾಜಕಾಲುವೆಯ ಹೂಳೆತ್ತುವ ವಿಚಾರದಲ್ಲಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಆದೇಶ ಪಾಲನೆ ಮಾಡಬೇಕಿದೆ. ಆ ಆದೇಶದ ಪ್ರಕಾರ, ರಾಜಕಾಲುವೆ ಅಕ್ಕಪಕ್ಕ 50 ಮೀಟರ್ ಜಾಗದಲ್ಲಿ ಯಾವುದೇ ಕಟ್ಟಡ ನಿರ್ಮಾಣ ಮಾಡುವಂತಿಲ್ಲ. ಹೀಗಾಗಿ, ಆ ಜಾಗವನ್ನು ಸರ್ಕಾರ ವಶಪಡಿಸಿಕೊಂಡು ರಸ್ತೆ ನಿರ್ಮಿಸಲಿದೆ. ಇದರಿಂದ ರಾಜಕಾಲುವೆಯಲ್ಲಿ ಹೂಳೆತ್ತಲು ಸಹಕಾರಿಯಾಗುತ್ತದೆ. ಜತೆಗೆ ಸ್ಥಳೀಯ ನಾಗರಿಕರ ಸಂಚಾರಕ್ಕೆ ಹೊಸ ರಸ್ತೆ ಸಿಕ್ಕಂತಾಗುತ್ತದೆ’ ಎಂದರು.

‘ಪಿ.ಎಂ ಕುಸುಮ್: ಜಮೀನು ತ್ವರಿತವಾಗಿ ಹಸ್ತಾಂತರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ನೀರಾವರಿ ಪಂಪ್‌ಸೆಟ್‌ಗಳಿಗೆ ನಿರಂತರ ವಿದ್ಯುತ್ ಒದಗಿಸಲು ಪ್ರಧಾನಮಂತ್ರಿ ಕುಸುಮ್ (ಪಿ.ಎಂ ಕುಸುಮ್) ಯೋಜನೆಯಡಿ 400 ಸೌರ ವಿದ್ಯುತ್ ಘಟಕಗಳ ನಿರ್ಮಾಣಕ್ಕೆ ಅಗತ್ಯವಿರುವ ಜಮೀನುಗಳನ್ನು ತ್ವರಿತವಾಗಿ ಹಸ್ತಾಂತರಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಂದಾಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಪಿ.ಎಂ ಕುಸುಮ್ ಯೋಜನೆಯಡಿ 400 ವಿದ್ಯುತ್ ಉಪ ಕೇಂದ್ರಗಳ ಬಳಿ ಸೌರ ವಿದ್ಯುತ್ ಘಟಕಗಳನ್ನು ನಿರ್ಮಿಸಿ, ಸಂಪರ್ಕ ಕಲ್ಪಿಸುವ ಪ್ರಸ್ತಾವವಿದೆ. ಈ ಯೋಜನೆಗೆ ಜಮೀನು ಒದಗಿಸುವ ಸಂಬಂಧ ಮುಖ್ಯಮಂತ್ರಿಯವರು ಕಂದಾಯ ಮತ್ತು ಇಂಧನ ಇಲಾಖೆ ಅಧಿಕಾರಿಗಳ ಜತೆ ಬುಧವಾರ ಸಭೆ ನಡೆಸಿದರು.

‘400 ಸೌರ ವಿದ್ಯುತ್ ಘಟಕಗಳ ನಿರ್ಮಾಣಕ್ಕೆ 3,000 ಎಕರೆ ಜಮೀನಿನ ಅಗತ್ಯವಿದೆ. ತ್ವರಿತವಾಗಿ ಜಮೀನು ಹಸ್ತಾಂತರಿಸಿದರೆ ಶೀಘ್ರದಲ್ಲಿ ಕಾಮಗಾರಿ ಪೂರ್ಣಗೊಳಿಸಬಹುದು. ಕೃಷಿ ನೀರಾವರಿ ಪಂಪ್‌ಸೆಟ್‌ಗಳಿಗೆ ರಾತ್ರಿಯ ಬದಲಿಗೆ ಹಗಲಿನಲ್ಲೇ ವಿದ್ಯುತ್ ಪೂರೈಸಬಹುದು’ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು.

ಈ ಕುರಿತು ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ಇಂಧನ ಇಲಾಖೆಯ ಅಧಿಕಾರಿಗಳು ಸ್ಥಳೀಯ ತಹಶೀಲ್ದಾರರೊಂದಿಗೆ ಸಮನ್ವಯದಲ್ಲಿದ್ದು ಅಗತ್ಯ ಜಮೀನು ಗುರುತಿಸಬೇಕು. ಪ್ರಸ್ತಾವ ಸಲ್ಲಿಸಿ ತ್ವರಿತವಾಗಿ ಜಮೀನು ಹಸ್ತಾಂತರಿಸಲು ಕ್ರಮ ಕೈಗೊಳ್ಳಬೇಕು. ಕಂದಾಯ ಇಲಾಖೆಯು ಇಂಧನ ಇಲಾಖೆಗೆ ಗುತ್ತಿಗೆ ಆಧಾರದಲ್ಲಿ ಜಮೀನು ಹಸ್ತಾಂತರಿಸಬೇಕು. ಖಾಸಗಿಯವರಿಗೆ ಜಮೀನು ನೀಡುವಂತಿಲ್ಲ ಎಂಬ ಷರತ್ತು ವಿಧಿಸಬೇಕು’ ಎಂದು ಸೂಚಿಸಿದರು.

‘ರಾಜ್ಯಕ್ಕೆ ಬರ ಪರಿಹಾರ ಬಿಡುಗಡೆ ಮಾಡದ ಕೇಂದ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯಕ್ಕೆ ನ್ಯಾಯಯುತವಾಗಿ ನೀಡಬೇಕಿರುವ ಬರ ಪರಿಹಾರ ಮತ್ತು ಇತರೆ ಅನುದಾನಗಳನ್ನು ತಕ್ಷಣ ಬಿಡುಗಡೆ ಮಾಡಬೇಕು’ ಎಂದು ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

‘ರಾಜ್ಯ ಸರ್ಕಾರ ₹18,177.44 ಕೋಟಿ ಬರ ಪರಿಹಾರಕ್ಕಾಗಿ ಕೇಂದ್ರಕ್ಕೆ ಮನವಿ ಸಲ್ಲಿಸಿದೆ. ₹42 ಸಾವಿರ ಕೋಟಿ ಜಿಎಸ್‌ಟಿ ಪಾಲು ಸೇರಿ ಇತರ ಕೇಂದ್ರ ಪುರಸ್ಕೃತ ಯೋಜನೆಗಳ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

‘ರಾಜ್ಯದ 236 ತಾಲ್ಲೂಕುಗಳ ಪೈಕಿ 223 ಅನ್ನು ಬರ ಪೀಡಿತ ಎಂದು ಗುರುತಿಸಲಾಗಿದೆ. ಬರದಿಂದ ಸಣ್ಣ ಹಾಗೂ ಅತಿ ಸಣ್ಣ ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿದ್ದರೂ ಸ್ಪಂದಿಸಿಲ್ಲ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಮತ್ತು ಕೃಷಿ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭೇಟಿ ಮಾಡಿ ಪರಿಹಾರ ಬಿಡುಗಡೆಗೆ ಮನವಿ ಮಾಡಿದ್ದಾರೆ. ಇಷ್ಟಾದರೂ ಕೇಂದ್ರ ಸರ್ಕಾರ ಬರ ಪರಿಹಾರ ಬಿಡುಗಡೆ ಮಾಡಿಲ್ಲ. ಇದು ಕೇಂದ್ರ ಸರ್ಕಾರ ನಡೆದುಕೊಳ್ಳುವ ರೀತಿಯೇ’ ಎಂದೂ ಪ್ರಶ್ನಿಸಿದ್ದಾರೆ.

‘ರಾಜ್ಯದಿಂದ ಬಿಜೆಪಿಯಿಂದ ಆಯ್ಕೆಯಾದ 25 ಮತ್ತು ಬಿಜೆಪಿ ಬೆಂಬಲಿತ ಒಬ್ಬ ಸಂಸದರಿದ್ದಾರೆ. ಈ ಎಲ್ಲರೂ ಪ್ರಧಾನಿಯನ್ನು ಭೇಟಿಯಾಗಿ ಅನುದಾನ ಬಿಡುಗಡೆಗೆ ಒತ್ತಡ ಹೇರಬೇಕು’ ಎಂದೂ ಆಗ್ರಹಿಸಿದ್ದಾರೆ.

‘ನಿರ್ಧಾರವೇ ಭವಿಷ್ಯದ ಮೊದಲ ಯಶಸ್ಸು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ವಿದ್ಯಾರ್ಥಿಯೂ ಶ್ರೇಷ್ಠ ಸಾಧಕರಾಗಬೇಕು ಎಂದು ನಿರ್ಧರಿಸಿದ ದಿನವೇ ಭವಿಷ್ಯದ ಯಶಸ್ಸು ನಿಶ್ಚಿತವಾಗುತ್ತದೆ ಎಂದು ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಎಂ.ಆರ್. ದೊರೆಸ್ವಾಮಿ ಹೇಳಿದರು.

ಬುಧವಾರ ಹಮ್ಮಿಕೊಂಡಿದ್ದ ಪಿಇಎಸ್ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದಯಾನಂದ್ ಸಾಗರ್ ಸಂಸ್ಥೆಗಳನ್ನು ನಡೆಸುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದರಿಂದಲೇ ಪಿಇಎಸ್ ಸಂಸ್ಥೆ ಹುಟ್ಟುಹಾಕಲು ಸಾಧ್ಯವಾಯಿತು. ಇಂದು ಪಿಇಎಸ್ ಬೆಂಗಳೂರು ವಿಶ್ವವಿದ್ಯಾಲಯದಲ್ಲೇ ಮೊದಲ ಸ್ಥಾನ ಪಡೆಯಲು ಸಾಧ್ಯವಾಗಿದೆ ಎಂದರು.

1972ರಲ್ಲಿ ಅಸ್ತಿತ್ವಕ್ಕೆ ಬಂದ ಶಿಕ್ಷಣ ಸಂಸ್ಥೆಯಲ್ಲಿ ಇಂದು 25 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದಾರೆ. ಶಿಕ್ಷಣದ ಗುಣಮಟ್ಟದಲ್ಲಿ ಎಂದೂ ರಾಜಿಯಾಗಿಲ್ಲ. ಇದಕ್ಕೆಲ್ಲ ಆಡಳಿತ ಮಂಡಳಿ, ಉಪನ್ಯಾಸಕರ ಬದ್ಧತೆಯೇ ಕಾರಣ ಎಂದು ಹೇಳಿದರು.

ಇನ್‌ಮೊಬಿ ಗ್ರೂಪ್ ಸಂಸ್ಥಾಪಕ ಸಿಇಒ ನವೀನ್ ತಿವಾರಿ, ಮಾರ್ಕೆಟಿಂಗ್ ಲೊವೆಸ್ ಸರ್ವಿಸಸ್ ಇಂಡಿಯಾದ ಹಿರಿಯ ನಿರ್ದೇಶಕಿ ರಮ್ಯಾ ವಿಶ್ವನಾಥ್, ಶ್ರವಣದೋಷದ ಮಕ್ಕಳಿಗೆ ಅಗ್ಗದ ದರದಲ್ಲಿ ಶ್ರವಣ ಸಾಧನ ಕಂಡು ಹಿಡಿದ ರಾಮನ್, ಲಕ್ಷ್ಮಣನ್, ಐಎಎಸ್ ಅಧಿಕಾರಿ ಶ್ರೇಯಸ್ ಹೊಸೂರ್, ಜೆ. ಸೂರ್ಯಪ್ರಸಾದ್, ಸಮ ಕುಲಪತಿ ಡಿ.ಜವಾಹರ್ ಉಪಸ್ಥಿತರಿದ್ದರು.



ಪಿಇಎಸ್ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವದಲ್ಲಿ ಎಂ.ಆರ್. ದೊರೆಸ್ವಾಮಿ, ನವೀನ್ ತಿವಾರಿ, ರಮ್ಯಾ ವಿಶ್ವನಾಥ್, ಸಮ ಜವಾಹರ್ ದೊರೆಸ್ವಾಮಿ, ಶ್ರೇಯಸ್ ಹೊಸೂರು ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಉಪಲೋಕಾಯುಕ್ತ ಮತ್ತೊಬ್ಬರ ನೇಮಕಕ್ಕೆ ಪ್ರಕ್ರಿಯೆ

ಬೆಂಗಳೂರು: ‘ಎರಡನೇ ಉಪಲೋಕಾಯುಕ್ತರ ನೇಮಕಕ್ಕೆ ಸಂಬಂಧಿಸಿದ ಪ್ರಕ್ರಿಯೆ ಚಾಲ್ತಿಯಲ್ಲಿದೆ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಹಿರಿಯ ವಕೀಲ ಎಸ್.ಬಸವರಾಜು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ, ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠವು ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, ‘ಈತನಕ ವಿರೋಧ ಪಕ್ಷದ ನಾಯಕ ನೇಮಕ ಆಗಿರಲಿಲ್ಲ. ಈ ಕಾರಣಕ್ಕಾಗಿ ಉಪಲೋಕಾಯುಕ್ತರ ನೇಮಕಾತಿ ಪ್ರಕ್ರಿಯೆ ವಿಳಂಬವಾಗಿತ್ತು. ಈಗ ಪ್ರಕ್ರಿಯೆ ಆರಂಭವಾಗಿದೆ’ ಎಂದು ನ್ಯಾಯಪೀಠಕ್ಕೆ ತಿಳಿಸಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ ಅರ್ಜಿ ವಿಚಾರಣೆಯನ್ನು 2024ರ ಫೆಬ್ರುವರಿಗೆ ಮುಂದೂಡಿತು.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಅಭಿಮತ

‘ಮಕ್ಕಳಿಗೆ ಸನ್ಮಾನದಿಂದ ಜವಾಬ್ದಾರಿ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಲಿಕೆಯಲ್ಲಿ ಉತ್ತಮ ಅಂಕಗಳಿಸಿದ ಪ್ರತಿಭಾವಂತರನ್ನು ಸನ್ಮಾನಿಸುವುದರಿಂದ ಮಕ್ಕಳನ್ನು ಶಿಕ್ಷಣಕ್ಕೆ ಉತ್ತೇಜಿಸಿದಂತಾಗುತ್ತದೆ’ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಹೇಳಿದರು.

ಬಿಬಿಎಂಪಿ ನೌಕರರ ಸಹಕಾರ ಸಂಘದ 110ನೇ ಸಂಸ್ಥಾಪನಾ ದಿನಾಚರಣೆ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

‘ಅಂಕ ಗಳಿಸಿದರೆ ಮಾತ್ರ ಬುದ್ಧಿವಂತರಲ್ಲ, ಸಮಾಜದಲ್ಲಿ ಹೇಗೆ ಬದುಕುಬೇಕು ಎಂಬ ಕಲೆ ತಿಳಿದಿರಬೇಕು. ಮಕ್ಕಳನ್ನು ಸನ್ಮಾನಿಸುವುದರಿಂದ ಅವರ ಮೇಲೆ ಜವಾಬ್ದಾರಿ ಹೆಚ್ಚುತ್ತದೆ. ಜ್ಞಾನವಂತರಾಗಿ, ಉತ್ತಮ ಪ್ರಜೆಯಾಗಿ ಒಳ್ಳೆಯ ಸಮಾಜ ನಿರ್ಮಾಣ ಮಾಡಬೇಕು’ ಎಂದು ಹೇಳಿದರು.

‘ದೇಶದಲ್ಲಿ ಶೇಕಡ 50ರಷ್ಟು ಮಹಿಳೆಯರು ಇದ್ದಾರೆ. ಸಾಮಾಜಿಕ, ಸಾಂಸ್ಕೃತಿಕ, ಸಮಾನತೆ, ರಾಜಕೀಯ ನ್ಯಾಯ ಮಹಿಳೆಯರಿಗೆ ಕೊಡಬೇಕು. ಬಸವೇಶ್ವರರು, ಕುವೆಂಪು ಅವರು ಮಹಿಳೆಯರ ಸಮಾನತೆ, ಸಾಮಾಜಿಕ ನ್ಯಾಯದ ಪರ ಮಾತನಾಡಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಬಡವರು, ಬಡವರಾಗಿಯೇ ಇದ್ದಾರೆ’ ಎಂದರು.

‘ಪೌರ ಕಾರ್ಮಿಕರು ಕೋವಿಡ್ ಸಂದರ್ಭದಲ್ಲಿ ಪ್ರಾಣದ ಹಂಗು ತೊರೆದು ಕೆಲಸ ಮಾಡಿದ್ದಾರೆ. ಅವರ ಮಕ್ಕಳ ಶಿಕ್ಷಣ ಮತ್ತು ಪೌರ ಕಾರ್ಮಿಕರ ಆರೋಗ್ಯ, ವಸತಿ ಸೌಕರ್ಯ ಕುರಿತು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು’ ಎಂದು ಹೇಳಿದರು.

ಸಂಗೀತ ನಿರ್ದೇಶಕ ವಿ.ಮನೋಹರ್ ಮಾತನಾಡಿ, ‘ಇಂದಿನ ಪೀಳಿಗೆಯವರು ಕನ್ನಡ ಕಲಿಯಬೇಕು, ಮಾತನಾಡಬೇಕು, ಭಾಷೆಯನ್ನು ಉಳಿಸಬೇಕು’ ಎಂದರು.

ಸಂಘದ ಅಧ್ಯಕ್ಷ ಎ.ಅಮೃತ್‌ರಾಜ್ ಮಾತನಾಡಿ, ‘ಸಹಕಾರ ಸಂಘದಲ್ಲಿ ಸದಸ್ಯರ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಲಾಗಿದೆ. ಎಂಬಿಎ ಮತ್ತು ಬಿಇ, ಪದವಿ ಹಾಗೂ ಎಸ್‌ಎಸ್‌ಎಲ್‌ಸಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು’ ಎಂದರು.

ಸಂಘದ ಉಪಾಧ್ಯಕ್ಷ ಕೆ.ಜಿ.ರವಿ, ಹಿನ್ನಲೆ ಗಾಯಕಿ ಅನುರಾಧಾ ಭಟ್ ಉಪಸ್ಥಿತರಿದ್ದರು.



ಬಿಬಿಎಂಪಿ ನೌಕರರ ಸಹಕಾರ ಸಂಘದ 110ನೇ ಸಂಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಅವರು ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಿದರು

ಉಪ ನಿರ್ದೇಶಕರ ಕ್ರಮಕ್ಕೆ ಪಿಯು ಕಾಲೇಜು ಪ್ರಾಂಶುಪಾಲರು, ಉಪನ್ಯಾಸಕರ ವಿರೋಧ

ಶೇ 100 ಫಲಿತಾಂಶಕ್ಕೆ ಮುಚ್ಚಳಿಕೆ ಪತ್ರ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: 'ಪ್ರಸಕ್ತ ವರ್ಷದ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆಯಲ್ಲಿ ಶೇ 100ರಷ್ಟು ಫಲಿತಾಂಶ ನೀಡುತ್ತೇವೆ. ಕಳಪೆ ಫಲಿತಾಂಶ ಬಂದರೆ ಶಿಸ್ತುಕ್ರಮಕ್ಕೆ ಬದ್ಧರಾಗಿರುತ್ತೇವೆ'.

–ಇದು ಪಿಯು ಕಾಲೇಜುಗಳ ಪ್ರಾಂಶುಪಾಲರು ಮತ್ತು ವಿಷಯವಾರು ಉಪನ್ಯಾಸಕರಿಂದ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಬರೆಸಿಕೊಳ್ಳುತ್ತಿರುವ ಲಿಖಿತ ಮುಚ್ಚಳಿಕೆ ವಿಧಾನ.

ಜಿಲ್ಲಾವಾರು ಫಲಿತಾಂಶದಲ್ಲಿ ತಮ್ಮದೇ ಜಿಲ್ಲೆ ರಾಜ್ಯಕ್ಕೆ ಮೊದಲ ಸ್ಥಾನ ಪಡೆಯಬೇಕು. ಎಲ್ಲ ಕಾಲೇಜುಗಳು ಶೇ100ರಷ್ಟು ಫಲಿತಾಂಶ ದಾಖಲಿಸಬೇಕು ಎಂಬ ಕಾರಣಕ್ಕೆ ಕೆಲ ಉಪ ನಿರ್ದೇಶಕರು ಇಂತಹ ಕ್ರಮಕ್ಕೆ ಮುಂದಾಗಿದ್ದಾರೆ. ಈನಡೆಗೆ ಉಪನ್ಯಾಸಕರ ವಲಯ ಹಾಗೂ ಉಪನ್ಯಾಸಕರ ಸಂಘಟನೆಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ಪ್ರಾಂಶುಪಾಲರು ಹಾಗೂ ವಿಷಯವಾರು ಉಪನ್ಯಾಸಕರಿಂದ ಪ್ರತ್ಯೇಕ ಮುಚ್ಚಳಿಕೆ ಪತ್ರ ಬರೆಸಿಕೊಳ್ಳಲಾಗುತ್ತಿದೆ. '2023–24ನೇ ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ಶೇ 100ರಷ್ಟು ಫಲಿತಾಂಶ ನೀಡುತ್ತೇವೆ. ಒಂದು ವೇಳೆ ಕಳಪೆ ಫಲಿತಾಂಶ ಬಂದರೆ ಶಿಸ್ತು ಕ್ರಮಕ್ಕೆ ಒಳಗಾಗುತ್ತೇವೆ. ಅಲ್ಲದೇ, ವಿಷಯ ಉಪನ್ಯಾಸಕರಿಂದ ಪ್ರಮಾಣೀಕೃತ ಲಿಖಿತ ಹೇಳಿಕೆ ದಾಖಲಿಸಿಕೊಳ್ಳುತ್ತೇವೆ' ಎಂದು ಪ್ರಾಂಶುಪಾಲರಿಗೆ, 'ತಮ್ಮ ವಿಷಯಗಳಲ್ಲಿ ಕಾಲೇಜಿನ ಪ್ರತಿ ವಿದ್ಯಾರ್ಥಿಯೂ ಉತ್ತೀರ್ಣ ರಾಗುವಂತೆ ಕ್ರಮ ವಹಿಸುತ್ತೇವೆ. ಶೇ 100ರಷ್ಟು ಫಲಿತಾಂಶ ನೀಡುತ್ತೇವೆ. ವಿಫಲರಾದರೆ ಶಿಸ್ತುಕ್ರಮಕ್ಕೆ ಒಳಗಾಗುತ್ತೇವೆ' ಎಂದು ಬರೆದುಕೊಡಲು ಉಪನ್ಯಾಸಕರಿಗೆ ಸೂಚಿಸಲಾಗಿದೆ.

> **ಪ್ರಾಂಶುಪಾಲರು, ಉಪನ್ಯಾಸಕರಿಂದ ಮುಚ್ಚಳಿಕೆ ಬರೆಸಿಕೊಳ್ಳುತ್ತಿರುವ ವಿಷಯ ಗಮನಕ್ಕೆ ಬಂದಿಲ್ಲ. ಮಾಹಿತಿ ಪಡೆದು ಪರಿಶೀಲಿಸಲಾಗುವುದು**
> **ಸಿಂಧು ರೂಪೇಶ್,** ನಿರ್ದೇಶಕಿ, ಪದವಿಪೂರ್ವ ಶಿಕ್ಷಣ ಇಲಾಖೆ

> **ಉಪನ್ಯಾಸಕರು ಮಾನಸಿಕ ಒತ್ತಡ ಅನುಭವಿಸುವ ಜತೆಗೆ, ವಿದ್ಯಾರ್ಥಿಗಳ ಮೇಲೂ ಒತ್ತಡ ಹಾಕುವುದರಿಂದ ಅನಾಹುತಗಳಿಗೆ ದಾರಿ ಮಾಡಿಕೊಟ್ಟಂತೆ ಆಗುತ್ತದೆ**
> **ನಿಂಗೇಗೌಡ ಎ.ಎಚ್,** ಅಧ್ಯಕ್ಷ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ

ಮುಚ್ಚಳಿಕೆ ಪತ್ರವನ್ನೂ ಉಪ ನಿರ್ದೇಶಕರ ಕಚೇರಿಯಿಂದಲೇ ಮುದ್ರಿಸಿ, ಆಯಾ ಕಾಲೇಜುಗಳ ಪ್ರಾಂಶುಪಾಲರಿಗೆ ರವಾನಿಸಲಾಗಿದೆ. ಕೆಲ ಕಾಲೇಜುಗಳು ಈಗಾಗಲೇ ಮುಚ್ಚಳಿಕೆ ಪತ್ರ ಬರೆದು ಕೊಟ್ಟಿದ್ದಾರೆ. ಹಲವರು ವಿರೋಧಿಸಿದ್ದಾರೆ.

2021–22ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ 61.88 ಫಲಿತಾಂಶ ಬಂದಿತ್ತು. ಫಲಿತಾಂಶ ಸುಧಾರಣೆಗೆ ಇಲಾಖೆ ಹಲವು ಕ್ರಮಗಳನ್ನು ಕೈಗೊಂಡಿತ್ತು. ಇದರ ಫಲವಾಗಿ 2022-23ನೇ ಸಾಲಿನ ಫಲಿತಾಂಶ ಶೇ 74.67ಕ್ಕೆ ಏರಿಕೆಯಾಗಿತ್ತು. ಜಿಲ್ಲಾವಾರು ಫಲಿತಾಂಶದಲ್ಲಿ ಹಲವು ಜಿಲ್ಲೆಗಳು ಅಚ್ಚರಿಯ ಫಲಿತಾಂಶ ನೀಡಿದ್ದವು. ಈ ಬಾರಿ ತಮ್ಮ ಜಿಲ್ಲೆ ಮೊದಲ ಸ್ಥಾನ ಪಡೆಯಬೇಕು ಎಂಬ ಧೋರಣೆಗಳೇ ಇಂತಹ ನಿರ್ಧಾರಗಳಿಗೆ ದಾರಿ ಮಾಡಿಕೊಡುತ್ತಿವೆ ಎನ್ನುತ್ತಾರೆ ಪಿಯು ಕಾಲೇಜು ಉಪನ್ಯಾಸಕರು.

'ರಾಜ್ಯದ ಪದವಿಪೂರ್ವ ಶಿಕ್ಷಣ ಗುಣಮಟ್ಟದಲ್ಲಿ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಇದಕ್ಕೆ ಉಪನ್ಯಾಸಕರ ಶ್ರಮವೇ ಕಾರಣ. ಆದರೆ, ಒಂದು ಕಾಲೇಜಿಗೂ ಮತ್ತೊಂದಕ್ಕೂ, ಒಂದು ಭಾಗದ ವಿದ್ಯಾರ್ಥಿಗಳಿಗೂ ಮತ್ತೊಂದು ಭಾಗಕ್ಕೂ ಸಾಕಷ್ಟು ಭಿನ್ನತೆ ಇರುತ್ತದೆ. ಶೇ 100ರಷ್ಟು ಫಲಿತಾಂಶ ಕಡ್ಡಾಯವಾಗಿ ಹೇರುವುದು ಅನೈತಿಕ ಪೈಪೋಟಿಗೆ ದಾರಿ ಮಾಡಿಕೊಡುತ್ತದೆ' ಎನ್ನುತ್ತಾರೆ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ ನಿಂಗೇಗೌಡ ಎ.ಎಚ್.

'ವಿದ್ಯಾರ್ಥಿಗಳ ಮೇಲಿನ ಪರೀಕ್ಷಾ ಒತ್ತಡ ಕಡಿಮೆ ಮಾಡಲು ದ್ವಿತೀಯ ಪಿಯುಗೆ ಈಗಾಗಲೇ ಮೂರು ವಾರ್ಷಿಕ ಪರೀಕ್ಷೆಗಳನ್ನು ಪರಿಚಯಿಸಲಾಗಿದೆ. ಆದರೂ, ಶೇ 100ರಷ್ಟು ಫಲಿತಾಂಶ ಪಡೆಯಬೇಕು ಎನ್ನುವ ಕ್ರಮ ಮೂರು ಪರೀಕ್ಷೆ ಪರಿಚಿಸಿದ ಆಶಯಕ್ಕೆ ವಿರುದ್ಧವಾಗಿದೆ ಎನ್ನುತ್ತಾರೆ' ಉಪನ್ಯಾಸಕ ರವಿಕುಮಾರ್.

2023ರ ಜಿಲ್ಲಾವಾರು ಫಲಿತಾಂಶ

ಜಿಲ್ಲೆ	ಶೇಕಡವಾರು
ದಕ್ಷಿಣ ಕನ್ನಡ	95.33
ಉಡುಪಿ	95.24
ಕೊಡಗು	90.55
ಉತ್ತರ ಕನ್ನಡ	89.74
ವಿಜಯಪುರ	84.69
ಚಿಕ್ಕಮಗಳೂರು	83.28
ಹಾಸನ	83.14
ಶಿವಮೊಗ್ಗ	83.13
ಬೆಂಗಳೂರು ಗ್ರಾಮಾಂತರ	83.04
ಬೆಂಗಳೂರು ದಕ್ಷಿಣ	82.3

'ಅತಿಥಿ'ಗಳ ಪಾದಯಾತ್ರೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೇವಾಭದ್ರತೆಗೆ ಆಗ್ರಹಿಸಿ ಅತಿಥಿ ಉಪನ್ಯಾಸಕರು ತುಮಕೂರಿನಿಂದ ಆರಂಭಿಸಿದ್ದ ಪಾದಯಾತ್ರೆಯನ್ನು ಬೆಂಗಳೂರು ಪ್ರವೇಶಕ್ಕೂ ಮೊದಲೇ ತಡೆದ ಪೊಲೀಸರು, ಎಲ್ಲರನ್ನೂ ವಶಕ್ಕೆ ಪಡೆದರು.

ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಎಲ್ಲ ಅತಿಥಿ ಉಪನ್ಯಾಸಕರನ್ನೂ ಬಸ್‌ಗಳಲ್ಲಿ ಕರೆತಂದು ಸ್ವಾತಂತ್ರ್ಯ ಉದ್ಯಾನದ ಬಳಿ ಇಳಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಘಟನೆಯ ಐವರು ಮುಖಂಡರನ್ನು ಸಂಜೆ ಮಾತುಕತೆಗೆ ಆಹ್ವಾನಿಸಿದ್ದರು. ಆದರೆ, ಕೊನೆಗಳಿಗೆಯಲ್ಲಿ ಸಭೆ ಮುಂದೂಡಲಾಯಿತು ಎಂದು ಅತಿಥಿ ಉಪನ್ಯಾಸಕ ರಾಘವೇಂದ್ರ ಮಾಹಿತಿ ನೀಡಿದರು.

ಅತಿಥಿ ಉಪನ್ಯಾಸಕರು ಸೇವಾಭದ್ರತೆ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನ.23ರಿಂದ ಮುಷ್ಕರ ನಡೆಸುತ್ತಿದ್ದಾರೆ. ಈ ಮಧ್ಯೆ ಸರ್ಕಾರ ₹5 ಸಾವಿರಕ್ಕೆ ಗೌರವಧನ ಹೆಚ್ಚಳ, ಕನಿಷ್ಠ 10 ವರ್ಷ ಸೇವೆ ಸಲ್ಲಿಸಿ, 60 ವರ್ಷಕ್ಕೆ ನಿವೃತ್ತರಾಗುವವರಿಗೆ ₹5 ಲಕ್ಷ ಧನಸಹಾಯ, ಆರೋಗ್ಯವಿಮೆ ಹಾಗೂ ಪ್ರತಿ ತಿಂಗಳು ಒಂದು ರಜೆ ನೀಡುವ ಘೋಷಣೆ ಮಾಡಿತ್ತು.

ಉನ್ನತ ಶಿಕ್ಷಣ ಸಚಿವರು ಘೋಷಿಸಿದ ಭರವಸೆಗಳನ್ನು ತಿರಸ್ಕರಿಸಿ, ಜ.1ರಿಂದ ಪಾದಯಾತ್ರೆ ಆರಂಭಿಸಿದ್ದರು. ಮೂರನೇ ದಿನ ನೆಲಮಂಗಲದಿಂದ ಹೊರಟ ಪಾದಯಾತ್ರೆ ಬೆಂಗಳೂರು ಪ್ರವೇಶಿಸಬೇಕಿತ್ತು. ನಾಗಸಂದ್ರದ ಬಳಿ ಅವರನ್ನು ತಡೆಯಲಾಯಿತು.

ಧರಣಿ ಮುಂದುವರಿಕೆ: ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ಆರಂಭಿಸಲಿದ್ದು, ಬೇಡಿಕೆ ಈಡೇರುವರೆಗೂ ಮುಂದುವರಿಸಲಾಗುವುದು. ಸೇವಾಭದ್ರತೆ ಸಿಗುವವರೆಗೂ ಹೋರಾಟ ನಿಲ್ಲಿಸುವುದಿಲ್ಲ ಎಂದು ಅತಿಥಿ ಉಪನ್ಯಾಸಕರ ಸಂಘದ ಮುಖಂಡರು ಹೇಳಿದರು.



ಬೆಂಗಳೂರು ಪ್ರವೇಶಿಸುತ್ತಿದ್ದ ಅತಿಥಿ ಉಪನ್ಯಾಸಕರ ಪಾದಯಾತ್ರೆಯನ್ನು ಪೊಲೀಸರು ತಡೆದರು

ಫೆ.29ರಿಂದ ಮಾ.7ರವರೆಗೆ ಬೆಂಗಳೂರು ಚಲನಚಿತ್ರೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೆಬ್ರುವರಿ 29ರಿಂದ ಮಾರ್ಚ್ 7ರವರೆಗೆ ಬೆಂಗಳೂರು ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದ 15ನೇ ಆವೃತ್ತಿಯನ್ನು ನಡೆಸಲು ನಿರ್ಧರಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಬುಧವಾರ ನಡೆದ ಉನ್ನತಮಟ್ಟದ ಸಭೆಯಲ್ಲಿ ಚಲನ-ಚಿತ್ರೋತ್ಸವದ ದಿನಾಂಕವನ್ನು ಅಂತಿಮ ಗೊಳಿಸಲಾಯಿತು. ಫೆ.29ರಂದು ಮುಖ್ಯಮಂತ್ರಿಯವರು ಚಿತ್ರೋತ್ಸವ ಉದ್ಘಾಟಿಸಲಿದ್ದು, ಮಾರ್ಚ್ 1ರಿಂದ 7ರವರೆಗೆ ಸಿನಿಮಾಗಳ ಪ್ರದರ್ಶನ ನಡೆಯಲಿದೆ.

ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ಕೋಮುವಾದದ ವಿರುದ್ಧ, ಸಮಾನತೆ, ಲಿಂಗ ಸಮಾನತೆ, ಸೌಹಾರ್ದತೆ, ಮಾನವೀಯತೆಯ ಸಂದೇಶಗಳು ಸಮಾಜಕ್ಕೆ ತಲುಪಬೇಕು. ಬಹುತ್ವಕ್ಕೆ ಹೆಚ್ಚು ಒತ್ತು ಕೊಡುವ ರೀತಿಯಲ್ಲಿ ಚಲನ ಚಿತ್ರೋತ್ಸವ ನಡೆಯಲಿದೆ. ಅಂತಹ ಚಿತ್ರಗಳನ್ನು ಹೆಚ್ಚು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ಅಗತ್ಯವಿರುವ ಆರ್ಥಿಕ ನೆರವನ್ನು ಸರ್ಕಾರ ಒದಗಿಸಲಿದೆ' ಎಂದರು.

ಬೆಂಗಳೂರು ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ವಿದೇಶಿ ಸಿನಿಮಾಗಳು, ಭಾರತದ ವಿವಿಧ ಭಾಷೆಗಳ ಸಿನಿಮಾಗಳು ಹಾಗೂ ಕನ್ನಡ ಸಿನಿಮಾಗಳ ಪ್ರದರ್ಶನ ನಡೆಯಲಿದೆ. ಮಾರ್ಚ್ 7ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಪ್ರಶಸ್ತಿ ಪ್ರದಾನ ಮಾಡುವರು ಎಂದು ತಿಳಿಸಿದರು.

ಚಿತ್ರೋತ್ಸವದ ಸಿದ್ಧತೆಗಾಗಿ 'ಪ್ರಮುಖರ ಸಮಿತಿ' ರಚಿಸಲಾಗಿದೆ. ವಿಧಾನಸೌಧದ ಮುಂಭಾಗದಲ್ಲಿ ಚಿತ್ರೋತ್ಸವದ ಉದ್ಘಾಟನಾ ಸಮಾರಂಭ ನಡೆಯಲಿದೆ. ಸಮಾರೋಪ ಸಮಾರಂಭವನ್ನು ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಲಾಗುವುದು ಎಂದು ತಿಳಿಸಿದರು.

ಚಲನಚಿತ್ರೋತ್ಸವಕ್ಕೆ ₹ 1.61 ಕೋಟಿ ಅನುದಾನ ಒದಗಿಸಲಾಗಿದೆ. ಅಗತ್ಯವಿದ್ದಲ್ಲಿ ಹೆಚ್ಚುವರಿ ಅನುದಾನವನ್ನೂ ಒದಗಿಸಲಾಗುವುದು. ಲೀಲಾವತಿ, ಭಗವಾನ್, ಸಿ.ವಿ. ಶಿವಶಂಕರ್ ಸೇರಿದಂತೆ ಕನ್ನಡ ಚಿತ್ರರಂಗದ ಗಣ್ಯರಿಗೆ ಗೌರವ ಸಲ್ಲಿಸಲು ಅವರ ಚಿತ್ರಗಳನ್ನು ಪ್ರದರ್ಶಿಸಲಾಗುವುದು. ಹಿಂದಿನ ವರ್ಷಗಳಂತೆ ಈ ಬಾರಿಯೂ ಒರಾಯನ್ ಮಾಲ್‌ನಲ್ಲಿರುವ ಪಿವಿಆರ್ ಥಿಯೇಟರ್‌ನ 11 ಪರದೆಗಳಲ್ಲಿ ಚಿತ್ರಪ್ರದರ್ಶನ ಆಯೋಜಿಸಲಾಗುವುದು ಎಂದು ಹೇಳಿದರು.

ಸಿಎ ಜಾಗ ವಶಕ್ಕೆ ಪಡೆಯದಿದ್ದರೆ ಸರ್ಕಾರದ ಹಕ್ಕು ರದ್ದು

ಒಂದನೇ ಪುಟದಿಂದ

'ಅರ್ಜಿದಾರರ ಭೂಮಿಯನ್ನು ಪರಿಷ್ಕೃತ ಕ್ರಿಯಾ ಯೋಜನೆಯಡಿ 2007ರ ಜೂನ್ 25ರಂದು ಸಾರ್ವಜನಿಕ ಉದ್ದೇಶಕ್ಕೆ ಮೀಸಲಿಟ್ಟು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಆದೇಶ ಹೊರಡಿಸಿತ್ತು. ಈ ಅವಧಿ 2012ರ ಜೂನ್ 24ಕ್ಕೆ ಕೊನೆಗೊಂಡಿದೆ. ಬಿಡಿಎ ಈ ಭೂಮಿಯನ್ನು ಐದು ವರ್ಷಗಳ ಅವಧಿಯಲ್ಲಿ ಸ್ವಾಧೀನ ಪಡಿಸಿಕೊಂಡಿಲ್ಲ. ಹೀಗಾಗಿ, ಸಾರ್ವಜನಿಕ ಬಳಕೆಗೆ ಮೀಸಲಿಟ್ಟ ಜಾಗವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ–1961ರ (ಕೆಟಿಸಿಪಿ) ಕಲಂ 12(1)(ಸಿ) ಅನ್ವಯ ಹಕ್ಕು ರದ್ದಾಗಲಿದೆ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ಅರ್ಜಿದಾರರ ಭೂಮಿ ಹಾಗೂ ಜಯಮಹಲ್ ಪ್ಯಾಲೇಸ್ ಪ್ರದೇಶವನ್ನು 1995ರಲ್ಲಿ ಅನುಮೋದನೆಗೊಂಡ ಸಮಗ್ರ ಅಭಿವೃದ್ಧಿ ಯೋಜನೆ (ಸಿಡಿಪಿ) 2011ರ ಅಡಿಯಲ್ಲಿ ವಸತಿ ಪ್ರದೇಶವೆಂದು ಘೋಷಿಸಲಾಗಿತ್ತು. ಆದರೆ, 2007ರಲ್ಲಿ ಅನುಮೋದಿಸಲಾದ, ಪರಿಷ್ಕೃತ ಮಾಸ್ಟರ್ ಪ್ಲಾನ್-2015ರ ಅಡಿಯಲ್ಲಿ ಆ ಜಾಗವನ್ನು ಉದ್ಯಾನವನ ಮತ್ತು ಹಸಿರು ಜಾಗ ಅಥವಾ ಕ್ರೀಡಾ ಉದ್ದೇಶದ ಆಟದ ಮೈದಾನಕ್ಕೆ ಮತ್ತು ಸ್ಮಶಾನಕ್ಕೆ ಎಂದು ಕಾಯ್ದಿರಿಸಲಾಗಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಮಲದ ಗುಂಡಿ ಸ್ವಚ್ಛತೆ: ಸ್ವಯಂಪ್ರೇರಿತ ಪಿಐಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಷೇಧವಿದ್ದರೂ ಮಲ ಹೊರುವ ಪದ್ಧತಿ ಜೀವಂತ ಎಂಬ ಮಾಧ್ಯಮ ವರದಿಯನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್,ಈ ಸಂಬಂಧ ಸ್ವಯಂಪ್ರೇರಿತ ಪ್ರಕರಣ ದಾಖಲು ಮಾಡಿಕೊಳ್ಳುವಂತೆ ಹೈಕೋರ್ಟ್ ರಿಜಿಸ್ಟ್ರಿಗೆ ನಿರ್ದೇಶಿಸಿದೆ.

ಬುಧವಾರ ಬೆಳಗಿನ ಕೋರ್ಟ್ ಕಲಾಪ ಆರಂಭವಾಗುತ್ತಿದ್ದಂತೆಯೇ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠವು, ಈ ಸಂಬಂಧ ಆಂಗ್ಲ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ಸುದ್ದಿಯನ್ನು ಮೌಖಿಕವಾಗಿ ಉಲ್ಲೇಖಿಸಿತು.

ವರದಿಯ ಬಗ್ಗೆ ತೀವ್ರ ಕಾಳಜಿ ವ್ಯಕ್ತಪಡಿಸಿದ ಮುಖ್ಯ ನ್ಯಾಯಮೂರ್ತಿಗಳು, 'ಇದೊಂದು ಆತಂಕಕಾರಿ ಸುದ್ದಿ. ಈ ಘಟನೆ ಪ್ರತಿಯೊಬ್ಬರ ಆತ್ಮಸಾಕ್ಷಿಯನ್ನು ಕಲಕುವಂತಿದೆ. ಸ್ವಾತಂತ್ರ್ಯ ಬಂದ ಆರೇಳು ದಶಕಗಳ ಬಳಿಕವೂ ನಿರ್ದಿಷ್ಟ ಸಮುದಾಯ ವೊಂದರಲ್ಲಿ ಜನಿಸಿದ ವ್ಯಕ್ತಿಗಳು ಇಂತಹ ಕೆಲಸ ಮಾಡಬೇಕಿರುವುದು ದುರದೃಷ್ಟಕರ' ಎಂದು ವ್ಯಥೆ ವ್ಯಕ್ತಪಡಿಸಿದರು.

'ಯಾರೋ ಹಣಕಾಸಿನ ಸಮಸ್ಯೆ ಎದುರಿಸುತ್ತಿದ್ದಾರೆ ಎಂದ ಮಾತ್ರಕ್ಕೆ ಅಂತಹವರು ಪ್ರಾಣಿಗಿಂತ ಕೆಟ್ಟು ಬದುಕನ್ನು ಬದುಕಬೇಕೆ? ಇಂದಿನ ದಿನಗಳಲ್ಲಿ ಇಂತಹ ಕೆಲಸಕ್ಕೆ ಸೂಕ್ತ ಯಂತ್ರೋಪಕರಣಗಳಿದ್ದರೂ ಯಾಕೆ ಈ ರೀತಿಯ ಘಟನೆಗಳು ಜರುಗುತ್ತವೆ? ಮಲದ ಗುಂಡಿ ಸ್ವಚ್ಛಗೊಳಿಸಲು ಒಂದು ತಾಸಿಗೆ ಎರಡು ಸಾವಿರ ರೂಪಾಯಿ ವೆಚ್ಚವಾಗುತ್ತದೆಯಷ್ಟೇ ಅಲ್ಲವೇ? ಇದು ಮಾನವೀಯತೆಗೆ ನಾಚಿಕೆಯಾಗುವ ಸಂಗತಿಯಲ್ಲವೇ' ಎಂದು ಪ್ರಶ್ನಿಸಿತು.

ವಕೀಲ ಶ್ರೀಧರ್ ಪ್ರಭು ಅವರನ್ನು ಪ್ರಕರಣದ ಅಮಿಕಸ್ ಕ್ಯೂರಿಯನ್ನಾಗಿ (ನ್ಯಾಯಾಲಯಕ್ಕೆ ಸಹಕರಿಸುವ ವಕೀಲ) ನೇಮಕ ಮಾಡಿದ ನ್ಯಾಯಪೀಠ, 'ಈ ಸಂಬಂಧ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಇದೇ 5ರೊಳಗೆ ಸಿದ್ಧಪಡಿಸಬೇಕು. ಇದೇ 8ಕ್ಕೆ ವಿಚಾರಣೆಗೆ ಪಟ್ಟಿ ಮಾಡಬೇಕು' ಎಂದು ರಿಜಿಸ್ಟ್ರಿಗೆ ನಿರ್ದೇಶಿಸಿತು.

ಆಳ್ವಾಸ್ ಪದವಿ ಕಾಲೇಜಿಗೆ ಸ್ವಾಯತ್ತ ಸ್ಥಾನಮಾನ

ಮೂಡುಬಿದಿರೆ (ದಕ್ಷಿಣ ಕನ್ನಡ): ಇಲ್ಲಿಯ ಆಳ್ವಾಸ್ ಪದವಿ ಕಾಲೇಜಿಗೆ 2023-24ನೇ ಶೈಕ್ಷಣಿಕ ವರ್ಷದಿಂದ ಸ್ವಾಯತ್ತ ಸ್ಥಾನಮಾನ ಲಭಿಸಿದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಮೋಹನ ಆಳ್ವ ತಿಳಿಸಿದರು.

'ಮುಂದಿನ 10 ವರ್ಷಗಳ ಅವಧಿಗೆ ಸ್ವಾಯತ್ತ ಸ್ಥಾನಮಾನ ನೀಡುವ ಕುರಿತು ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಮಂಗಳೂರು ವಿಶ್ವವಿದ್ಯಾಲಯಕ್ಕೆ ಶಿಫಾರಸು ಮಾಡಿತ್ತು. ಈ ಶಿಫಾರಸ್ಸಿನ ಅನ್ವಯ ಮಂಗಳೂರು ವಿಶ್ವವಿದ್ಯಾಲಯವು ಸ್ವಾಯತ್ತ ಸ್ಥಾನಮಾನ ನೀಡಲು ನಿರ್ಧಾರ ತೆಗೆದುಕೊಂಡಿತ್ತು. ಉನ್ನತ ಶಿಕ್ಷಣ ಇಲಾಖೆಯು ಇದಕ್ಕೆ ಸಹಮತ ಸೂಚಿಸಿ ಆದೇಶ ಹೊರಡಿಸಿದೆ' ಎಂದು ಅವರು ಬುಧವಾರ ಇಲ್ಲಿ ಸುದ್ದಿ ಗೋಷ್ಠಿಯಲ್ಲಿ ತಿಳಿಸಿದರು.

ಸ್ವಾಯತ್ತ ಸ್ಥಾನಮಾನ ಲಭಿಸಿರುವುದರಿಂದ ಪದವಿ, ಸ್ನಾತಕೋತ್ತರ ಹಾಗೂ ವೃತ್ತಿಪರ ಕೋರ್ಸ್‌ಗಳನ್ನು ಇನ್ನಷ್ಟು ಕಾಲಬದ್ಧ ಹಾಗೂ ಸಂಘಟಿತವಾಗಿ ನಡೆಸಲು ಅವಕಾಶ ಸಿಗಲಿದೆ. ದಾಖಲಾತಿ, ಪರೀಕ್ಷೆ ಹಾಗೂ ಫಲಿತಾಂಶವನ್ನು ಸುಸಜ್ಜಿತವಾಗಿ ನಡೆಸಲು ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಇನ್ನಷ್ಟು ವೇಗ ನೀಡಲು ಸಾಧ್ಯವಾಗಲಿದೆ. ಕ್ರೀಡೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಆಯೋಜಿಸಲು, ವೃತ್ತಿಪರ ಕ್ಷೇತ್ರಗಳು, ಉದ್ಯಮ ವಲಯಕ್ಕೆ ಬೇಕಾದ ಕೌಶಲ ಆಧಾರಿತ ತರಬೇತಿ ನೀಡಲು ಈ ಸ್ಥಾನಮಾನದಿಂದ ಅವಕಾಶ ಹೆಚ್ಚಿದೆ' ಎಂದು ಮೋಹನ ಆಳ್ವ ಅಭಿಪ್ರಾಯಪಟ್ಟರು.

'ಪ್ರಧಾನಿ: ಮೋದಿ ಮಾತ್ರ ಅರ್ಹ'

ಮೈಸೂರು: 'ದೇಶದಲ್ಲಿ ಪ್ರಧಾನಿಯಾಗುವ ಅರ್ಹತೆ ನರೇಂದ್ರ ಮೋದಿಯವರನ್ನು ಬಿಟ್ಟರೆ ಬೇರಾರಿಗೂ ಇಲ್ಲ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರಿಗೂ ಇಲ್ಲ. ಮೋದಿಯವರಿಗೆ ಸಮನಾದ ನಾಯಕರೇ ಇಲ್ಲ' ಎಂದು ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಪ್ರತಿ ಪಾದಿಸಿದರು. ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಮೋದಿಯವರಿಗಿರುವ ಜನ ಬೆಂಬಲ, ಶಕ್ತಿ ಯಾರಿಗೂ ಇಲ್ಲ. ಲೋಕಸಭಾ ಚುನಾವಣೆ ಹತ್ತಿರವಾಗುತ್ತಿದ್ದಂತೆ ಇಂಡಿಯಾ ಮೈತ್ರಿಕೂಟದ ಹಲವು ನಾಯಕರೂ ಮೋದಿಗೆ ಜೈ ಎನ್ನಲಿದ್ದಾರೆ' ಎಂದು ಭವಿಷ್ಯ ನುಡಿದರು.

ಕೆಪಿಎಸ್‌ಸಿ ಕಾರ್ಯದರ್ಶಿಗೆ ಬ್ಲ್ಯಾಕ್‌ಮೇಲ್?

ಒಂದನೇ ಪುಟದಿಂದ

ಅಲ್ಲದೆ, 10ಕ್ಕೂ ಹೆಚ್ಚು ಪ್ರಸ್ತಾವನೆಗಳನ್ನು ಸಲ್ಲಿಸಲು ಸಿದ್ಧಪಡಿಸಿದ್ದಾರೆ. ಆದರೆ, ಆರು ಸದಸ್ಯರ ಈ ನಡೆಯಿಂದಾಗಿ ನೇಮಕಾತಿ ಅಧಿಸೂಚನೆಗಳನ್ನು ಹೊರಡಿಸುವ ಮತ್ತು ಹಲವು ಆಯ್ಕೆ ಪಟ್ಟಿಗಳಿಗೆ ಅನುಮೋದನೆ ನೀಡುವ ಪ್ರಕ್ರಿಯೆ ಅತಂತ್ರವಾಗಿದೆ.

ಏನಿದು ಪ್ರಕರಣ?:

ಆಯೋಗದ ಕಾನೂನು ಕೋಶದ ಮುಖ್ಯಸ್ಥರಾಗಿದ್ದ ಎಸ್.ಎಚ್. ಹೊಸಗೌಡರ್ ಅವರು ಹುದ್ದೆ ತ್ಯಜಿಸಿದ ಕಾರಣ ಹೊಸಬರ ನೇಮಕಾತಿಗೆ ಕೆಪಿಎಸ್‌ಸಿಯು ನ. 15ರಂದು ಅಧಿಸೂಚನೆ ಹೊರಡಿಸಿತ್ತು. ಒಟ್ಟು 16 ಅರ್ಜಿಗಳು ಸಲ್ಲಿಕೆ ಆಗಿದ್ದವು. ಈ ಪೈಕಿ ಎರಡು ಅರ್ಜಿಗಳು ಅವಧಿ ಮುಗಿದ ಬಳಿಕ ಸಲ್ಲಿಕೆಯಾಗಿದ್ದವು. ಅಭ್ಯರ್ಥಿಯ ಆಯ್ಕೆಗೆ ಆಯೋಗದ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್, ಸದಸ್ಯರಾದ ಬಿ.ವಿ. ಗೀತಾ ಮತ್ತು ಮುಸ್ತಫಾ ಹುಸೇನ್ ಸಯ್ಯದ್ ಅಜೀಜ್ ಅವರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿತ್ತು. ಸಲ್ಲಿಕೆಯಾದ ಅರ್ಜಿಗಳಲ್ಲಿ ಎರಡು ತಿರಸ್ಕೃತಗೊಂಡಿದ್ದರೆ, ಇಬ್ಬರು ಸಂದರ್ಶನಕ್ಕೆ ಗೈರಾಗಿದ್ದರು. 10 ಅಭ್ಯರ್ಥಿಗಳನ್ನು ಸಮಿತಿಯು ಡಿ. 13ರಂದು ಸಂದರ್ಶನ ಮಾಡಿತ್ತು. ಸಮಿತಿಯು ಆಯ್ಕೆ ಮಾಡಿದ ಅಭ್ಯರ್ಥಿಗೆ ತಕ್ಷಣ ನೇಮಕಾತಿಗೆ ಆದೇಶ ಹೊರಡಿಸುವಂತೆ ಆಯೋಗವು ಕಾರ್ಯದರ್ಶಿಗೆ ಕಡತ ಕಳುಹಿಸಿತ್ತು.

ಸಭೆಯ ನಡಾವಳಿಯ ಕಡತದಲ್ಲಿ ಆಯ್ಕೆ ಮಾಡಿದ್ದ ಅಭ್ಯರ್ಥಿಯ ಹೆಸರು ಮಾತ್ರ ಇತ್ತು. ಯಾವ ರೀತಿಯಲ್ಲಿ ಸಂದರ್ಶನ ಪ್ರಕ್ರಿಯೆ ನಡೆಸಲಾಯಿತು, ಮೌಲ್ಯಮಾಪನ ವಿಧಾನ, ಅಂಕಗಳನ್ನು ನೀಡಿರುವ ಕುರಿತಂತೆ ಯಾವುದೇ ಮಾಹಿತಿ ಇರಲಿಲ್ಲ. ಸಂದರ್ಶನಕ್ಕೆ ಆಯ್ಕೆಯಾದ ಇತರ ಅಭ್ಯರ್ಥಿಗಳ ಬಗ್ಗೆಯೂ ವಿವರ ಇರಲಿಲ್ಲ. ನಿಯಮಾನುಸಾರ ಸಂದರ್ಶನ ನಡೆದಿಲ್ಲವೆಂಬ ಕಾರಣ ನೀಡಿ ಆಯೋಗಕ್ಕೆ ಕಡತವನ್ನು ಕಾರ್ಯದರ್ಶಿ ಹಿಂದಿರುಗಿಸಿದ್ದರು ಎಂದು ಆಯೋಗದ ಮೂಲಗಳು ತಿಳಿಸಿವೆ.

ಅಲ್ಲದೆ, ಆಯ್ಕೆ ಪಾರದರ್ಶಕವಾಗಿ ನಡೆಯಬೇಕಾದರೆ ಸಮಿತಿಯಲ್ಲಿ ಒಬ್ಬರು ಮಹಿಳಾ ಪ್ರತಿನಿಧಿ, ಒಬ್ಬರು ಎಸ್‌ಸಿ ಎಸ್‌ಟಿ ಪ್ರತಿನಿಧಿ, ಸದಸ್ಯ ಕಾರ್ಯದರ್ಶಿಯೊಬ್ಬರು ಇರಬೇಕೆಂಬ ನಿಯಮವೂ ಇದೆ ಎಂದೂ ಕಾರ್ಯದರ್ಶಿ ಉಲ್ಲೇಖಿಸಿದ್ದರು ಎಂದೂ ಗೊತ್ತಾಗಿದೆ.

ಕಾರ್ಯದರ್ಶಿಯ ಈ ನಡೆಗೆ ಆಕ್ಷೇಪ ವ್ಯಕ್ತಪಡಿಸಿದ ಆಯೋಗದ ಕೆಲವು ಸದಸ್ಯರು, 'ಆಯೋಗದ ನಿರ್ಣಯವನ್ನು ಪ್ರಶ್ನಿಸುವ ಅಧಿಕಾರ ಕಾರ್ಯದರ್ಶಿಗೆ ಇಲ್ಲ. ಆಯೋಗಕ್ಕಿಂತ ದೊಡ್ಡವರಂತೆ ಅವರು ವರ್ತಿಸುತ್ತಿದ್ದಾರೆ. ಸಮಿತಿ ಆಯ್ಕೆ ಮಾಡಿ, ಆಯೋಗ ನಿರ್ಣಯಿಸಿದ ಅಭ್ಯರ್ಥಿಗೆ ನೇಮಕಾತಿ ಆದೇಶ ಹೊರಡಿಸಬೇಕು ಅಷ್ಟೆ' ಎಂದು ಪಟ್ಟು ಹಿಡಿದಿದ್ದಾರೆ.

ಅಲ್ಲದೆ, ಕಾರ್ಯದರ್ಶಿ ನೇಮಕಾತಿ ಆದೇಶ ಜಾರಿ ಮಾಡುವವರೆಗೂ ಆಯೋಗದ ಸಭೆಗಳಿಂದ ದೂರ ಉಳಿಯಲು ನಿರ್ಧರಿಸಿ ಡಿ. 27ರಂದು ಆರು ಸದಸ್ಯರು ಅಧ್ಯಕ್ಷರಿಗೆ ಪತ್ರ ನೀಡಿದ್ದಾರೆ. ಅದನ್ನು ಅಧ್ಯಕ್ಷರು 28ರಂದು ಕಾರ್ಯದರ್ಶಿಗೆ ನೀಡಿದ್ದಾರೆ ಎಂದೂ ಮೂಲಗಳು ಹೇಳಿವೆ.

> **ಸಭೆಗೆ ಹಾಜರಾಗುವುದಿಲ್ಲ, ಆಯ್ಕೆ ಪಟ್ಟಿಗೆ ಅನುಮೋದನೆ ನೀಡುವುದಿಲ್ಲವೆಂದು 6 ಸದಸ್ಯರು ಸಹಿ ಹಾಕಿ ಪತ್ರ ನೀಡಿರುವುದು ನಿಜ. ಈ ಬಗ್ಗೆ ಹೆಚ್ಚೇನೂ ಮಾತನಾಡುವುದಿಲ್ಲ**
> **ಕೆ.ಎಸ್. ಲತಾಕುಮಾರಿ,** ಕಾರ್ಯದರ್ಶಿ, ಕೆಪಿಎಸ್‌ಸಿ

> **ಕೆಪಿಎಸ್‌ಸಿ ಸದಸ್ಯರ ಬ್ಲ್ಯಾಕ್‌ಮೇಲ್ ತಂತ್ರದಿಂದಾಗಿ ಹಲವು ಹುದ್ದೆಗಳ ನೇಮಕಾತಿ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ. ಆಯೋಗ ಚೆಲ್ಲಾಟವಾಡುತ್ತಿದೆ**
> **ಭವ್ಯಾ ನರಸಿಂಹಮೂರ್ತಿ,** ಅಧ್ಯಕ್ಷರು, ಕರ್ನಾಟಕ ರಾಜ್ಯ ಸ್ಪರ್ಧಾತ್ಮಕ ಪರೀಕ್ಷೆ ಆಕಾಂಕ್ಷಿಗಳ ಸಂಘ

ಸಿಕ್ಕಿದ್ದು ಅಲ್ಪ, ಬರಬೇಕಿದೆ ಅಧಿಕ

ಒಂದನೇ ಪುಟದಿಂದ

'ಆದರೂ, ರಾಜ್ಯ ಸರ್ಕಾರ ಈವರೆಗೆ ಚುನಾವಣೆ ನಡೆಸಿಲ್ಲ. ಉಳಿದ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆಗೊಳಿಸಲಾಗಿದೆ. ಬಿಬಿಎಂಪಿ, ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳ ಚುನಾವಣಾ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಬಾಕಿ ಅನುದಾನ ಬಿಡುಗಡೆಯಾಗಲಿದೆ' ಎಂದು ಹೇಳಿವೆ.

ಬಾರದ ಎನ್‌ಡಿಆರ್‌ಎಫ್ ಹಣ: ಹಣಕಾಸು ಆಯೋಗದ ಶಿಫಾರಸಿನ ಅನುಸಾರ, ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಡಿ (ಎನ್‌ಡಿಆರ್‌ಎಫ್) ರಾಜ್ಯಕ್ಕೆ 2021–22ರಲ್ಲಿ ₹1,623 ಕೋಟಿ ಹಾಗೂ 2022–23ರಲ್ಲಿ ₹939 ಕೋಟಿ ಬಿಡುಗಡೆ ಮಾಡಲಾಗಿತ್ತು. ಆದರೆ, 2023–24ನೇ ಆರ್ಥಿಕ ವರ್ಷದ ಅನುದಾನ ಇಲ್ಲಿಯತನಕ ಬಿಡುಗಡೆಯಾಗಿಲ್ಲ.

ರಾಜ್ಯದಲ್ಲಿ ಬರ ಪರಿಸ್ಥಿತಿ ಗಂಭೀರವಾಗಿದ್ದು, ಶೀಘ್ರವೇ ₹18,177 ಕೋಟಿ ಬಿಡುಗಡೆ ಮಾಡಬೇಕು ಎಂದು ಕೋರಿ ಕರ್ನಾಟಕ ಸರ್ಕಾರವು ಕೇಂದ್ರಕ್ಕೆ ನಾಲ್ಕು ಬಾರಿ ಮನವಿ ಸಲ್ಲಿಸಿದೆ. ಡಿಸೆಂಬರ್ 23ರಂದು ಉನ್ನತ ಮಟ್ಟದ ಸಮಿತಿ ಸಭೆ ನಡೆಸಿ ಬರ ಪರಿಹಾರ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಭರವಸೆ ನೀಡಿದ್ದರು. ಆದರೆ, ಡಿಸೆಂಬರ್ 23ರಂದು ಸಭೆ ನಡೆದಿರಲಿಲ್ಲ. ಹೀಗಾಗಿ, ಬರ ಪರಿಹಾರ ಬಿಡುಗಡೆ ಕುರಿತು ಕೇಂದ್ರ ಸರ್ಕಾರ ಇಲ್ಲಿಯವರೆಗೆ ತೀರ್ಮಾನ ತೆಗೆದುಕೊಂಡಿಲ್ಲ.

ವಿಪತ್ತು ನಿರ್ವಹಣಾ ಅನುದಾನದ ರೂಪದಲ್ಲಿ (ಎಸ್‌ಡಿಆರ್‌ಎಫ್) ಐದು ವರ್ಷದ ಅವಧಿಗೆ ರಾಜ್ಯಕ್ಕೆ ₹4,369 ಕೋಟಿ ನಿಗದಿಪಡಿಸಲಾಗಿದೆ. ಆದರೆ, ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾಗಿರುವುದು ₹1,803 ಕೋಟಿ ಮಾತ್ರ. ರಾಜ್ಯಕ್ಕೆ ಈ ಆರ್ಥಿಕ ವರ್ಷದಲ್ಲಿ ₹929 ಕೋಟಿ ನಿಗದಿಪಡಿಸಲಾಗಿದೆ. ಈ ಪೈಕಿ ಜುಲೈ ತಿಂಗಳಲ್ಲಿ ಮೊದಲ ಕಂತಿನ ರೂಪದಲ್ಲಿ ₹348 ಕೋಟಿ ಬಿಡುಗಡೆಗೊಳಿಸಲಾಗಿತ್ತು. ಎರಡನೇ ಕಂತು ಬಂದಿಲ್ಲ.

ಪ್ರತಿವರ್ಷ ಎರಡು ಸಮಾನ ಕಂತುಗಳಲ್ಲಿ ಕೇಂದ್ರದ ಪಾಲನ್ನು ಎಸ್‌ಡಿಆರ್‌ಎಫ್‌ಗೆ ಬಿಡುಗಡೆ ಮಾಡಲಾಗುತ್ತದೆ. ಮಾರ್ಗಸೂಚಿಗಳ ಪ್ರಕಾರ, ಹಿಂದಿನ ಕಂತಿನಲ್ಲಿ ಬಿಡುಗಡೆಯಾದ ಮೊತ್ತದ ಬಳಕೆಯ ಪ್ರಮಾಣಪತ್ರದ ಸ್ವೀಕೃತಿ ಮತ್ತು ಎಸ್‌ಡಿಆರ್‌ಎಫ್‌ನಿಂದ ಕೈಗೊಂಡ ಚಟುವಟಿಕೆಗಳ ಕುರಿತು ರಾಜ್ಯ ಸರ್ಕಾರದಿಂದ ವರದಿ ಸ್ವೀಕರಿಸಿದ ಬಳಿಕ ಎರಡನೇ ಕಂತಿನ ಹಣ ಬಿಡುಗಡೆ ಮಾಡಲಾಗುತ್ತದೆ ಎಂದು ಹಣಕಾಸು ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದರು.

3.48 ಲಕ್ಷ ಮಹಿಳೆಯರು ದಾಖಲೆ ಪರಿಶೀಲನೆ ಶಿಬಿರದಲ್ಲಿ ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೃಹಲಕ್ಷ್ಮಿ' ಯೋಜನೆಗೆ ಸಂಬಂಧಿಸಿದಂತೆ ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ಏರ್ಪಡಿಸಿದ್ದ ದಾಖಲಾತಿ ಪರಿಶೀಲನೆ ಶಿಬಿರದಲ್ಲಿ ಸುಮಾರು 3.48 ಲಕ್ಷ ಗ್ರಾಮೀಣ ಮಹಿಳೆಯರು ಭಾಗವಹಿಸಿದ್ದರು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಒಟ್ಟು 3,48,386 ಮಹಿಳೆಯರು ಈ ಶಿಬಿರದಲ್ಲಿ ಪಾಲ್ಗೊಂಡು ತಮ್ಮ ಆಧಾರ್ ಕಾರ್ಡ್‌ಗಳನ್ನು ಪುನರ್ ಪರಿಶೀಲನೆಗೆ ಒಳಪಡಿಸಿದರು. ಮೊದಲ ದಿನ 91,681, ಎರಡನೇ ದಿನ 1,31,638 ಮತ್ತು ಮೂರನೇ ದಿನ 1,25,067 ಮಹಿಳೆಯರು ಶಿಬಿರದಲ್ಲಿ ಭಾಗವಹಿಸಿದ್ದರು. ಇದೇ ಅವಧಿಯಲ್ಲಿ 32,201 ಮಂದಿ ಮಹಿಳೆಯರು ಹೊಸದಾಗಿ ಅಂಚೆ ಕಚೇರಿಯ ಐಪಿಪಿಬಿ ಖಾತೆಗಳನ್ನು ತೆರೆದರು ಎಂದು ಪ್ರಿಯಾಂಕ್ ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯಿಂದ ಪುನರ್ ಪರಿಶೀಲನೆಗೆ ಒಳಪಟ್ಟ ಆಧಾರ್ ಕಾರ್ಡ್ ಹಾಗೂ ಐಪಿಪಿಬಿ ಖಾತೆಗಳನ್ನು ಆಧರಿಸಿ 'ಗೃಹಲಕ್ಷ್ಮಿ' ಅರ್ಜಿಗಳನ್ನು ಪರಿಶೀಲಿಸಲಾಗುತ್ತದೆ ಎಂದೂ ಅವರು ಹೇಳಿದರು.

ಅತ್ಯುತ್ತಮ ಕಾದಂಬರಿ ಪ್ರಶಸ್ತಿ: ಕೃತಿ ಆಹ್ವಾನ

ಬೆಂಗಳೂರು: ದ್ವಾರನ ಕುಂಟೆ ಪಾತಣ್ಣ ಪ್ರತಿಷ್ಠಾನವು ರಾಜ್ಯಮಟ್ಟದ ಅತ್ಯುತ್ತಮ ಕಾದಂಬರಿ ಪ್ರಶಸ್ತಿಗಾಗಿ ಕಾದಂಬರಿಗಳನ್ನು ಆಹ್ವಾನಿಸಿದೆ. ಪ್ರಶಸ್ತಿಯು ₹25 ಸಾವಿರ ನಗದು ಬಹುಮಾನ ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಕಾದಂಬರಿಗಳು 2023ರಲ್ಲಿ ಪ್ರಕಟವಾಗಿರಬೇಕು. ಮೂರು ಪ್ರತಿಗಳನ್ನು ಜ. 30ರೊಳಗೆ ಕಳುಹಿಸಬೇಕೆಂದು ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ. ಹನೀಫ್ ಪ್ರಕಟಣೆ ಯಲ್ಲಿ ತಿಳಿಸಿದ್ದಾರೆ. **ವಿಳಾಸ:** ಅಧ್ಯಕ್ಷರು, ದ್ವಾರನ ಕುಂಟೆ ಪಾತಣ್ಣ ಪ್ರತಿಷ್ಠಾನ, ನಂ. 118, 'ಹೊಂಬೆಳಕು', 5ನೇ ಕ್ರಾಸ್, 1ನೇ ಬ್ಲಾಕ್, ಎಚ್.ಎಂ.ಟಿ. ಲೇಔಟ್, ನಾಗಸಂದ್ರ ಅಂಚೆ, ಬೆಂಗಳೂರು560073. ಹೆಚ್ಚಿನ ಮಾಹಿತಿಗೆ: 9686073837 /7760350244 ಸಂಪರ್ಕಿಸಬಹುದು.



ಸಮುದ್ರ ತಟದ ದೇಗುಲ ಸಮುಚ್ಚಯ ಮಹಾಬಲಿಪುರಂ

ಸಾಮಾನ್ಯ ಜ್ಞಾನ

ಗುರುಶಂಕರ್ ಕೆ.ಪಿ

ಮಹಾಬಲಿಪುರಂ ತಮಿಳುನಾಡಿನ ಬಂದರು ನಗರಿ, ಅದ್ಭುತ ಸ್ಮಾರಕ ಮತ್ತು ದೇವಾಲಯಗಳಿಗೆ ಹೆಸರುವಾಸಿಯಾಗಿದೆ.

ಏಳನೇ ಶತಮಾನದಲ್ಲಿ ತಮಿಳುನಾಡನ್ನು ಆಳಿದ ಪಲ್ಲವರ ಕಾಲದಲ್ಲಿ ಮಹಾಬಲಿಪುರಂ ವಾಸ್ತುಶಿಲ್ಪವು ಉನ್ನತಿಯನ್ನು ಕಂಡಿತ್ತು. ಇಲ್ಲಿನ ದೇವಾಲಯಗಳು ಮತ್ತು ಸ್ಮಾರಕಗಳು ಯುನೆಸ್ಕೊ ಸಂಸ್ಥೆಯ ವಿಶ್ವ ಪಾರಂಪರಿಕ ತಾಣ ಆಗಿವೆ.

ಮಹಾಬಲಿಪುರಂ ವಾಸ್ತುಶಿಲ್ಪದ ವಿಧಗಳು

ರಥ ದೇವಾಲಯಗಳು ಅಥವಾ ಪಂಚರಥ : ಈ ದೇವಾಲಯಗಳನ್ನು ಪಾಂಡವರ ರಥ ಎಂದು ಕರೆಯಲಾಗುತ್ತದೆ. ದಕ್ಷಿಣ ಭಾರತದ ಅತ್ಯಂತ ಹಳೆಯ ದೇವಾಲಯಗಳಾಗಿದ್ದು ಇವುಗಳನ್ನು ಧರ್ಮರಾಜ ರಥ, ಭೀಮರಥ, ಅರ್ಜುನ ರಥ, ನಕುಲ ಮತ್ತು ಸಹದೇವ ರಥ ಮತ್ತು ದ್ರೌಪದಿ ರಥ ಎಂದು ಹೆಸರಿಸಲಾಗಿದೆ. ಧರ್ಮರಾಜ ರಥವು ಅತ್ಯಂತ ದೊಡ್ಡ ದೇವಾಲಯವಾಗಿದೆ.

ಬಂಡೆಗಲ್ಲಿನಿಂದ ನಿರ್ಮಿತ ದೇವಾಲಯಗಳು: ಈ ಸ್ವರೂಪದ ದೇವಾಲಯಗಳಲ್ಲಿ ವರಾಹ ದೇವಾಲಯ, ಕೃಷ್ಣ ದೇವಾಲಯ, ಪಂಚಪಾಂಡವ ದೇವಾಲಯ ಮತ್ತು ಮಹಿಷಾಸುರ ಮರ್ದಿನಿ ಮಂಟಪ ಪ್ರಮುಖವಾದವು. ಮಹಿಷಾಸುರ ಮರ್ದಿನಿ ಮಂಟಪದಲ್ಲಿ ತಾಯಿ ದುರ್ಗೆ ಮಹಿಷಾಸುರನನ್ನು ವಧೆ ಮಾಡುತ್ತಿರುವ ಭಂಗಿಯಲ್ಲಿ ಪ್ರತಿಷ್ಠಾಪಿಸಲಾಗಿದೆ.

ತೆರೆದ ಗುಹಾಂತರ ಶಿಲ್ಪಗಳು : ದೊಡ್ಡ ಬಂಡೆಗಳನ್ನು ಬಳಸಿ ಶಿಲ್ಪಗಳನ್ನು ಕೆತ್ತಲಾಗಿದೆ. ಭಗೀರಥನು ತಪಸ್ಸು ಮಾಡುತ್ತಿರುವಂತೆ ಹಾಗೂ ಗಂಗಾನದಿಯು ಸ್ವರ್ಗದಿಂದ ಭೂಮಿಗೆ ಧುಮುಕುತ್ತಿರುವ ಶಿಲ್ಪವನ್ನು ಕೆತ್ತಲಾಗಿದೆ.

ದೇವಾಲಯಗಳ ಸಂಕೀರ್ಣ: ದೇವಾಲಯಗಳ ಸಂಕೀರ್ಣದಲ್ಲಿ ಎರಡು ಸಣ್ಣ ದೇವಾಲಯಗಳನ್ನು ಮತ್ತು ಒಂದು ದೊಡ್ಡ ದೇವಾಲಯವನ್ನು ನಿರ್ಮಿಸಲಾಗಿದೆ. ಗೋಡೆಯ ಮೇಲೆ ನಂದಿಯ ಶಿಲ್ಪವಿದ್ದು, ಈ ಮೂರು ದೇವಾಲಯಗಳು ಶಿವನಿಗೆ ಅರ್ಪಿತವಾದ ದೇವಾಲಯಗಳಾಗಿವೆ.

ಚೋಳರ ಕಾಲದ ವಾಸ್ತುಶಿಲ್ಪ : ಚೋಳರ ಆಳ್ವಿಕೆಯಲ್ಲಿ ನೂರಾರು ದೇವಾಲಯಗಳನ್ನು ದಕ್ಷಿಣ ಭಾರತದಲ್ಲಿ ನಿರ್ಮಿಸಲಾಯಿತು. ಪಲ್ಲವರ ಆಳ್ವಿಕೆಯ ಸಂದರ್ಭದ ವಾಸ್ತುಶಿಲ್ಪಕ್ಕೆ ಹೋಲಿಕೆ ಇದ್ದರೂ, ಇದನ್ನು ದ್ರಾವಿಡ ಶೈಲಿಯ ವಾಸ್ತುಶಿಲ್ಪ ಎಂದು ಕರೆಯಬಹುದು.

ದ್ರಾವಿಡ ಶೈಲಿಯ ಗುಣಲಕ್ಷಣಗಳು: ದೇವಾಲಯದ ಸುತ್ತ ಎತ್ತರದ ಗೋಡೆಗಳನ್ನು ನಿರ್ಮಿಸಲಾಗಿರುತ್ತದೆ. ದೇವಾಲಯದ ಪ್ರವೇಶ ದ್ವಾರದಲ್ಲಿ ಎತ್ತರದ ಗೋಪುರಗಳಿರುತ್ತವೆ. ನಾಡ ಶೈಲಿಯ ದೇವಾಲಯಗಳಲ್ಲಿಯೂ 'ಪಂಚಾಯತನ ಶೈಲಿ' ಕಾಣಬಹುದು. ಮಧ್ಯಭಾಗದಲ್ಲಿ ಪ್ರಮುಖ ದೇವರ ದೇವಾಲಯ ಮತ್ತು ಸುತ್ತಲಿನ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಸಣ್ಣ ದೇವಾಲಯಗಳಿರುತ್ತವೆ.

ಗೋಪುರಗಳು ಪಿರಮಿಡ್ ಆಕಾರದಲ್ಲಿದ್ದು , ಇವುಗಳನ್ನು ವಿಮಾನ ಎಂದು ಕರೆಯಲಾಗುತ್ತದೆ. ಶಿಖರಗಳು ಅಷ್ಟ ಭುಜ ಆಕಾರದಲ್ಲಿರುತ್ತವೆ. ನಾಗರ ಶೈಲಿಯ ದೇವಾಲಯಗಳ ಕಳಶವನ್ನು ಹೋಲುವಂತಿರುತ್ತದೆ.

ಪ್ರಮುಖ ದೇವಾಲಯದ ಮೇಲೆ ವಿಮಾನವನ್ನು ನಿರ್ಮಿಸಿದ್ದು, ನಾಲ್ಕು ದಿಕ್ಕುಗಳಲ್ಲಿ ಉಪದೇವಾಲಯಗಳಿರುತ್ತವೆ. ಗರ್ಭಗೃಹ ಮತ್ತು ಸಭಾಂಗಣಗಳಿಗೆ ಹಜಾರದ ಸುರಂಗ ಮಾರ್ಗದಿಂದ ಸಂಪರ್ಕ ಕಲ್ಪಿಸಲಾಗಿದೆ. ಈ ಮಾರ್ಗವನ್ನು ಅಂತರಾಳ ಎಂದು ಕರೆಯಲಾಗುತ್ತದೆ.

ಪ್ರತಿಯೊಂದು ದೇವಾಲಯದ ಪ್ರವೇಶ ದ್ವಾರದಲ್ಲಿ ದ್ವಾರಪಾಲಕರು, ಮಿಥುನ ಮತ್ತು ಯಕ್ಷ ದೇವರ ಶಿಲ್ಪಗಳನ್ನು ಕಾಣಬಹುದು. ದ್ರಾವಿಡ ಶೈಲಿಯ ವಾಸ್ತುಶಿಲ್ಪದಲ್ಲಿ ಮಾತ್ರ ಕಂಡುಬರುವ ಮತ್ತೊಂದು ಪ್ರಮುಖ ಅಂಶವೆಂದರೆ ದೇವಾಲಯದ ಒಳಗೆ ನೀರಿನ ತೊಟ್ಟಿಯನ್ನು ಕಾಣಬಹುದು.

ದ್ರಾವಿಡ ವಾಸ್ತುಶಿಲ್ಪ ಶೈಲಿಯ ದೇಗುಲಗಳು

ಒಂದನೇ ರಾಜರಾಜ ನಿರ್ಮಿಸಿದ ತಂಜಾವೂರಿನ ಬಳಿ ಇರುವಂತಹ ಬೃಹದೇಶ್ವರ ದೇವಾಲಯ ಹಾಗೂ ಒಂದನೇ ರಾಜೇಂದ್ರ ನಿರ್ಮಿಸಿದಂತಹ ಗಂಗೈಕೊಂಡ ಚೋಳಪುರಂ ದೇವಾಲಯ.

ಇತರೆ ವಾಸ್ತುಶಿಲ್ಪ ಶೈಲಿಗಳು

ನಾಯಕ ವಾಸ್ತುಶಿಲ್ಪ ಶೈಲಿ: ಈ ಸ್ವರೂಪದ ವಾಸ್ತುಶಿಲ್ಪವನ್ನು ಮಧುರೈ ವಾಸ್ತುಶಿಲ್ಪ ಶೈಲಿ ಎಂದು ಕೂಡ ಕರೆಯಲಾಗುತ್ತದೆ. ನಾಯಕ ವಾಸ್ತುಶಿಲ್ಪ ಶೈಲಿಯು 16 ನೇ ಶತಮಾನದಿಂದ 18 ನೇ ಶತಮಾನದ ಅವಧಿಯಲ್ಲಿ ಉಚ್ಛ್ರಾಯ ಸ್ಥಿತಿ ತಲುಪಿತು. ನಾಯಕ ವಾಸ್ತುಶಿಲ್ಪ ಶೈಲಿಯು ದ್ರಾವಿಡ ಶೈಲಿಯ ವಾಸ್ತುಶಿಲ್ಪವನ್ನು ಹೋಲುತ್ತಿದ್ದರೂ ಇಸ್ಲಾಮಿಕ್ ಪ್ರಭಾವ ಕಾಣುತ್ತದೆ.

ಇದರ ಪ್ರಮುಖ ಗುಣಲಕ್ಷಣಗಳು: ಈ ದೇವಾಲಯಗಳಲ್ಲಿ ಅತಿದೊಡ್ಡ ಗೋಪುರಗಳನ್ನು ಕಾಣಬಹುದು. ಮಧುರೈ ಮೀನಾಕ್ಷಿ ದೇವಾಲಯ ಇದಕ್ಕೆ ಪ್ರಸಿದ್ಧಿಯಾಗಿದೆ.

ವೇಸರ ವಾಸ್ತುಶಿಲ್ಪ ಶೈಲಿ : ವೇಸರ ವಾಸ್ತುಶಿಲ್ಪ ಶೈಲಿಯನ್ನು ಕರ್ನಾಟಕದ ವಾಸ್ತುಶಿಲ್ಪ ಶೈಲಿ ಎಂದೂ ಕರೆಯಬಹುದು. ಏಳನೇ ಶತಮಾನದ ಮಧ್ಯಭಾಗದಲ್ಲಿ ಚಾಲುಕ್ಯರ ಆಳ್ವಿಕೆಯ ಸಂದರ್ಭದಲ್ಲಿ ನಾಗರ ವಾಸ್ತುಶಿಲ್ಪ ಶೈಲಿ ಹಾಗೂ ದ್ರಾವಿಡ ವಾಸ್ತುಶಿಲ್ಪ ಶೈಲಿಯ ಮಿಶ್ರ ಅಂಶಗಳೊಂದಿಗೆ ವೇಸರ ವಾಸ್ತುಶಿಲ್ಪ ಶೈಲಿ ಅಭಿವೃದ್ಧಿಯಾಗಿದೆ.

ಈ ಶೈಲಿಗೆ ಹೆಚ್ಚು ಕೊಡುಗೆ ನೀಡಿದ ಸಾಮ್ರಾಜ್ಯಗಳು: ಬಾದಾಮಿ ಮತ್ತು ಕಲ್ಯಾಣಿಯ ಚಾಲುಕ್ಯ ವಂಶಸ್ಥರು

ರಾಷ್ಟ್ರಕೂಟರು - ಎಲ್ಲೋರಾದ ಕೈಲಾಸನಾಥ ದೇವಾಲಯ.

ಹೊಯ್ಸಳರು - ಹಳೇಬೀಡು ಮತ್ತು ಬೇಲೂರು ದೇವಾಲಯಗಳು.

ಏನಿದು ಡೈಮಂಡ್ ಬೋರ್ಸ್?

ಪ್ರಚಲಿತ

ಹನುಮಾನಾಯಕ್ ರಾಥೋಡ್

ಗುಜರಾತ್‌ನ ಸೂರತ್‌ನಲ್ಲಿ ನೂತನವಾಗಿ ನಿರ್ಮಿಸಿರುವ ಸೂರತ್ ಡೈಮಂಡ್ ಬೋರ್ಸ್ ಅನ್ನು (ಎಸ್.ಡಿ.ಬಿ) ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದ್ದಾರೆ. ಈ ಬೃಹತ್ ಸಂಕೀರ್ಣದಲ್ಲಿ 4,200 ವಜ್ರದ ವ್ಯಾಪಾರ ಕಚೇರಿಗಳಿವೆ.

ವಜ್ರಗಳನ್ನು ಕತ್ತರಿಸುವ ಮತ್ತು ಪಾಲಿಶ್ ಮಾಡುವುದಕ್ಕೆ ಮುಂಬೈನ ಬಾಂದ್ರಾ ಕಾಂಪ್ಲೆಕ್ಸ್ (ಬಿಕೆಸಿ), ಸೂರತ್‌ನ ಮಹಿಧರ ಹೀರಾ ಬಜಾರ್ ಮತ್ತು ವರಚಾ ಹೀರಾ ಬಜಾರ್ ಹೆಸರುವಾಸಿಯಾಗಿದ್ದವು. ಆದರೆ, ಇಲ್ಲಿ ಮೂಲಸೌಕರ್ಯಗಳ ಕೊರತೆ ಹಾಗೂ ಭದ್ರತಾ ಕ್ರಮಗಳು ಇರಲಿಲ್ಲ. ಅಂತರರಾಷ್ಟ್ರೀಯ ಖರೀದಿದಾರರನ್ನು ಗಮನದಲ್ಲಿಟ್ಟುಕೊಂಡು ವಜ್ರದ ವ್ಯಾಪಾರದ ಈ ಪ್ರಮುಖ ಕೇಂದ್ರಗಳನ್ನು ಸೂರತ್ ಡೈಮಂಡ್ ಬೋರ್ಸ್ ಕಚೇರಿಗೆ ಸ್ಥಳಾಂತರಿಸಲಾಗಿದೆ.

ವಜ್ರಗಳ ಮಹತ್ವ: ವಜ್ರವು ಅತ್ಯಂತ ಕಠಿಣ ಲೋಹ. ಚಿನ್ನಕ್ಕಿಂತಲೂ ಹೆಚ್ಚು ಬೆಲೆಬಾಳುತ್ತದೆ. ದಕ್ಷಿಣ ಆಫ್ರಿಕಾ ದೇಶವು ವಜ್ರದ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದ್ದು, ಭಾರತವು ವಜ್ರ ವಿನ್ಯಾಸದಲ್ಲಿ ಜಗತ್ತಿನಲ್ಲಿಯೇ ಅಗ್ರಸ್ಥಾನದಲ್ಲಿದೆ. ವಜ್ರಗಳನ್ನು ಆಭರಣಗಳಾಗಿ ಧರಿಸುವುದು ಸಾಮಾನ್ಯ. ಈ ಆಭರಣಗಳನ್ನು ಶ್ರೀಮಂತಿಕೆ ಹಾಗೂ ಸಂಪತ್ತಿನ ಸಂಕೇತವೆಂದು ಪರಿಗಣಿಸಲಾಗಿದೆ. ಭಾರತದಲ್ಲಿ ಉತ್ಪಾದಿಸಲಾಗುವ ಮುಖ್ಯ ಹರಳುಗಲ್ಲುಗಳೆಂದರೆ ವಜ್ರ, ರೂಬಿ, ಬ್ಲೂ ಸಫೈರ್ ಮತ್ತು ಎಮರಾಲ್ಡ್.

ಉಪಯೋಗಗಳು: ಹರಳುಗಲ್ಲುಗಳಲ್ಲಿ ವಜ್ರವು ಅತ್ಯಂತ ಅಮೂಲ್ಯವಾದುದು. ಇದರ ಆಕರ್ಷಣೆ, ಹೊಳಪು, ಪಾರದರ್ಶಕತೆ ಹಾಗೂ ಕಠಿಣತೆ ಮೊದಲಾದ ಲಕ್ಷಣಗಳು ಇದರ ವಿಶೇಷತೆಗೆ ಕಾರಣಗಳು.

ಹಸಿರು, ನೀಲಿ ಮತ್ತು ಕೆಂಪು ಬಣ್ಣದ ವಜ್ರಗಳು ಅಪರೂಪವಾಗಿದ್ದು , ಅಪಾರ ಮೌಲ್ಯವನ್ನು ಹೊಂದಿವೆ. ಇದು ಅತ್ಯಂತ ಕಠಿಣವಾಗಿರುವುದರಿಂದ ಕೈಗಾರಿಕೆಗಳಲ್ಲಿಯೂ ವಜ್ರದ ಬಳಕೆ ಹೆಚ್ಚು.

ಡ್ರಿಲ್ಲಿಂಗ್ ಗಣಿಗಾರಿಕೆಯಲ್ಲಿ ವಜ್ರವು ವ್ಯಾಪಕವಾಗಿ ಬಳಕೆಯಾಗುವುದು. ಕಲ್ಲು ಮತ್ತು ಗಾಜುಗಳನ್ನು ಕತ್ತರಿಸಲು ವಜ್ರಗಳನ್ನು ಬಳಸಲಾಗುವುದು.

ಮೂಲತಃ ವಜ್ರವು ಕ್ಷಾರೀಯ ಅಂತರಾಗ್ನಿ ಶಿಲೆಗಳಲ್ಲಿ ಕಂಡುಬರುವುದು. ಭೂಮೇಲ್ಮೈನಿಂದ ಸುಮಾರು 100 ಕಿಲೋಮೀಟರ್ ಆಳದಲ್ಲಿ ಶಿಲಾಪಾಕ ವಲಯದಲ್ಲಿ ವಜ್ರವು ನಿರ್ಮಿತವಾಗುವುದೆಂದು ತಿಳಿಯಲಾಗಿದೆ.

ದೇಶದಲ್ಲಿ ವಜ್ರದ ನಿಕ್ಷೇಪವನ್ನು ಹೊಂದಿರುವ ನಾಲ್ಕು ಮುಖ್ಯ ವಲಯಗಳಿವೆ. ಅವುಗಳೆಂದರೆ

ದಕ್ಷಿಣ ಭಾರತ: ಆಂಧ್ರಪ್ರದೇಶದ ಕಡಪ, ಅನಂತಪುರ, ಗುಂಟೂರು, ಕೃಷ್ಣ, ಮೆಹಬೂಬ್ ನಗರ ಮತ್ತು ಕರ್ನೂಲು ಜಿಲ್ಲೆಗಳು.

ಮಧ್ಯಭಾರತ : ಮಧ್ಯಪ್ರದೇಶದ ಪನ್ನಾ ವಲಯ.

ಪೂರ್ವ ಭಾರತ : ಮಹಾನದಿ ಗೋದಾವರಿ ನಡುವಿನ ಪ್ರದೇಶ. ಛತ್ತೀಸಗಢದ ರಾಯಪುರ ಜಿಲ್ಲೆಯ ಬೆಹ್ರದಿನ್ - ಕೋಡವಾಲಿ ಮತ್ತು ಬಸ್ತಾರ್ ಜಿಲ್ಲೆಯ ತೋಕಪಾಲ್ ಮತ್ತು ಧುಗಪಾಲ್ ಪ್ರದೇಶ.

ಮಧ್ಯಪ್ರದೇಶ : ಇದು ವಜ್ರದ ನಿಕ್ಷೇಪ ಹಾಗೂ ಉತ್ಪಾದನೆಯಲ್ಲಿ ದೇಶದ ಅತಿ ಮುಖ್ಯ ರಾಜ್ಯವಾಗಿದೆ. ಈ ರಾಜ್ಯದಲ್ಲಿ ವಜ್ರದ ನಿಕ್ಷೇಪವು ಕಿಂಬರ್ ಲೈಟ್ ಪೈಪ್ ಶಿಲೆಗಳು, ಕಂಗ್ಲೋ ಮರೇಟ್ ಹಾಗೂ ಮರಳುಗಲ್ಲುಗಳಲ್ಲಿ ಕಂಡು ಬರುವುದು. ಪನ್ನಾ ಜಿಲ್ಲೆಯ ಮುಜ್ವಾ ಮುಜಗಾಂ ಬಳಿ ಕಂಗ್ಲೋ ಮರೇಟ್‌ನಲ್ಲಿ ಒಂದು ಸಣ್ಣ ಪದರಿನಂತೆ ವಜ್ರದ ನಿಕ್ಷೇಪವು ಕಂಡುಬರುವುದು. ಇಲ್ಲಿಯೇ ದೇಶದ ಏಕೈಕ ವಜ್ರದ ಗಣಿಯು ಕಾರ್ಯ ನಿರ್ವಹಿಸುತ್ತಿದೆ.

ಮಧ್ಯಪ್ರದೇಶವು ದೇಶದ ಶೇ 90ರಷ್ಟು ವಜ್ರ ನಿಕ್ಷೇಪವನ್ನು ಹೊಂದಿದೆ.

ಇತರ ಪ್ರದೇಶಗಳು: ಆಂಧ್ರಪ್ರದೇಶದ ಕರ್ನೂಲು ಮತ್ತು ಅನಂತಪುರ ಜಿಲ್ಲೆಗಳು, ಒಡಿಶಾದ ಮಹಾನದಿ ಕಣಿವೆ ಹಾಗೂ ಛತ್ತೀಸಗಢ ವಜ್ರದ ನಿಕ್ಷೇಪವನ್ನು ಹೊಂದಿರುವ ಇತರ ಮುಖ್ಯ ಪ್ರದೇಶಗಳು.

ರೂಬಿ ಮತ್ತು ಸಫೈರ್: ರೂಬಿ ಹಾಗೂ ನೀಲಿ ಬಣ್ಣದ ಸಫೈರ್ ಹರಳುಗಲ್ಲುಗಳು ಪಾರದರ್ಶಕತೆ ಹಾಗೂ ಹೊಳಪಿಗೆ ಪ್ರಸಿದ್ಧಿಯಾಗಿದೆ. ರೂಬಿ ಸುಣ್ಣದ ಕಲ್ಲಿನ ಪದರು, ಮೆಕ್ಕಲು ಮಣ್ಣಿನ ಪದರುಗಳಲ್ಲಿಯೂ ಕಂಡುಬರುತ್ತವೆ. ಕಾಶ್ಮೀರದ ಕಿಶ್ ವಾತ್ ಜಿಲ್ಲೆಯ ಪಾಡಾರ್ ಪ್ರದೇಶದಲ್ಲಿ ಸಫೈರ್ ಸಿಗುತ್ತದೆ.



ಸೂರತ್ ಡೈಮಂಡ್ ಬೋರ್ಸ್ ಕಚೇರಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ–

6) ಏಕಲಿಂಗಿ ಹೂವು ಯಾವುದು?

ಉತ್ತರ:– ಒಂದು ಹೂವು ಕೇವಲ ಕೇಸರಗಳನ್ನೋ ಅಥವಾ ಶಲಾಕಗಳನ್ನೋ ಹೊಂದಿದ್ದರೆ ಅದು ಏಕಲಿಂಗಿ ಹೂವು ಎನ್ನುವರು ಉದಾ:– ಪಪಾಯ, ಕಲ್ಲಂಗಡಿ


7) ಗೋಳೀಯ ದರ್ಪಣದ ವಕ್ರತಾ ಕೇಂದ್ರ ಎಂದರೇನು?

ಉತ್ತರ:– ಗೋಳೀಯ ದರ್ಪಣದ ಪ್ರತಿಫಲಿಸುವ ಮೇಲ್ಮೈ ಗೋಳದ ಒಂದು ಭಾಗವನ್ನು ರೂಪಿಸುತ್ತದೆ. ಈ ಗೋಳದ ಕೇಂದ್ರವನ್ನು ವಕ್ರತಾ ಕೇಂದ್ರ ಎನ್ನುವರು.

8) ಪ್ರಭೇದಿಕರಣಕ್ಕೆ ಕಾರಣವಾಗುವ ಅಂಶಗಳನ್ನು ಹೆಸರಿಸಿ

ಉತ್ತರ:– ಭಿನ್ನತೆಗಳು, ಭೌಗೋಳಿಕ ಬೇರ್ಪಡಿವಿಕೆ.

9) ಕೊಟ್ಟಿರುವ ಚಿತ್ರವನ್ನು ಗಮನಿಸಿ ಚಿತ್ರವು ಸೂಚಿಸುವ ದೃಷ್ಟಿ ದೋಷವನ್ನು ಹೆಸರಿಸಿ. ಮತ್ತು ಆ ದೃಷ್ಟಿ ದೋಷವನ್ನು ಸರಿಪಡಿಸಲು ಉಪಯೋಗಿಸುವ ಮಸೂರವನ್ನು ತಿಳಿಸಿ



ಉತ್ತರ:– * ಸಮೀಪ ದೃಷ್ಟಿದೋಷ(ಮಯೊಪಿಯಾ)
* ನಿಮ್ನ ಮಸೂರ

10) 15 ಸೆಂ.ಮೀ ಸಂಗಮದೂರವನ್ನು ಹೊಂದಿರುವ ನಿಮ್ನ ದರ್ಪಣದ ಮುಂದೆ 25 ಸೆಂ.ಮೀ ದೂರದಲ್ಲಿ ವಸ್ತುವನ್ನು ಇರಿಸಿದೆ. ಸ್ಪಷ್ಟ ಬಿಂಬವನ್ನು ಪಡೆಯಲು ಪರದೆಯನ್ನು ದರ್ಪಣದಿಂದ ಎಷ್ಟು ದೂರದಲ್ಲಿ ಇರಿಸಬೇಕು?

ಉತ್ತರ:– $u = 25cm$ - ನಿಮ್ನ ದರ್ಪಣ

$f = 15cm$

$V = ?$

ದರ್ಪಣ ಸೂತ್ರ

$$\frac{1}{f} = \frac{1}{v} + \frac{1}{u} ...... \therefore$$

$$\frac{1}{15} = \frac{1}{v} + \frac{1}{25}$$

$$\frac{1}{v} = \frac{1}{25} - \frac{1}{15}$$

$$\frac{1}{v} = \frac{3-5}{75}$$

$$v = \frac{-75}{2} = -37.5cm$$

$$\therefore v = -37cm$$

ಸ್ಪಷ್ಟ ಪ್ರತಿಬಿಂಬವನ್ನು ಪಡೆಯಲು ಪರದೆಯನ್ನು 37.5 ಸೆಂ.ಮೀ ದೂರದಲ್ಲಿ ಇರಿಸಬೇಕು.

11) ಪಳೆಯುಳಿಕೆ ಇಂಧನ ಎಂದರೇನು? ಉದಾ ಕೊಡಿ

ಉತ್ತರ:– ಲಕ್ಷಾಂತರ ವರ್ಷಗಳ ಹಿಂದೆ ಭೂಮಿಯಡಿಯಲ್ಲಿ ಹುದುಗಿದ್ದ ಸಸ್ಯ ಮತ್ತು ಪ್ರಾಣಿಗಳು ಆಕ್ಸಿಜನ್ ಸಂಪರ್ಕವಿಲ್ಲದ ಅಪಾರ ಒತ್ತಡ ಮತ್ತು ಉಷ್ಣತೆಗೆ ಒಳಗಾಗಿ ರೂಪುಗೊಂಡ ಇಂಧನಕ್ಕೆ ಪಳಯುಳಿಕೆ ಇಂಧನಗಳು ಎನ್ನುವರು ಉದಾ:– ಕಲ್ಲಿದ್ದಲು ಮತ್ತು ಪೆಟ್ರೋಲಿಯಂ

12) ಕೋಶೀಯ ರಚನೆಗಳ ಮೇಲಿನ ಡಿಎನ್‌ಎಗಳ ನಿಯಂತ್ರಣ ಅಸ್ತವ್ಯಸ್ಥಗೊಳಿಸುವ ಸಂಭವವು ಯಾವುದರಿಂದ ಆಗಬಹುದಾಗಿದೆ?

ಉತ್ತರ:– ಪ್ರತಿ ಹೊಸ ಪೀಳಿಗೆಯು ಈ ಮೊದಲೇ ಅಸ್ತಿತ್ವದಲ್ಲಿರುವ ಜೀವಿಗಳ ಡಿಎನ್‌ಎ ಪ್ರತಿಗಳ ಸಂಯೋಜನೆಯಿಂದ ಉಂಟಾದ ಪಕ್ಷದಲ್ಲಿ ಪ್ರತಿ ಹೊಸ ಪೀಳಿಗೆಯು ಹಿಂದಿನ ಪೀಳಿಗೆ ಹೊಂದಿರುವುದಕ್ಕಿಂತ ಎರಡು ಪಟ್ಟು ಹೆಚ್ಚು ಪ್ರಮಾಣದ ಡಿಎನ್‌ಎಯನ್ನು ಹೊಂದಿರಬೇಕಾಗುತ್ತದೆ. ಇದರಿಂದ ಕೋಶೀಯ ರಚನೆಗಳ ಮೇಲಿನ ಡಿಎನ್‌ಎಗಳ ನಿಯಂತ್ರಣ ಅಸ್ತವ್ಯಸ್ಥಗೊಳಿಸುವ ಸಂಭವವಿರುತ್ತದೆ

13) ಪಟ್ಟಿ:1ರಲ್ಲಿ ಸಾಧನಗಳ ಹೆಸರನ್ನು ಪಟ್ಟಿ–2ರಲ್ಲಿ ಅವುಗಳ ಅನುರೂಪ ಕಾರ್ಯಗಳನ್ನು ನೀಡಲಾಗಿದೆ. ಅವುಗಳನ್ನು ಹೊಂದಿಸಿ ಬರೆಯಿರಿ

ಪಟ್ಟಿ: 1

(ಎ) ದಿಕ್ಪರಿವರ್ತಕ
(ಬಿ) ಫ್ಯೂಸ್
(ಸಿ) ಗೆಲ್ವನೋ ಮೀಟರ್
(ಡಿ) ವಿದ್ಯುತ್ ಜನಕ

ಪಟ್ಟಿ–2

1) ಒಂದು ಮಂಡಲದಲ್ಲಿ ವಿದ್ಯುತ್ ಪ್ರವಾಹದ ಉಪಸ್ಥಿತಿಯನ್ನು ಕಂಡುಹಿಡಿಯುತ್ತದೆ.
2) ಯಾಂತ್ರಿಕ ಶಕ್ತಿಯನ್ನು ವಿದ್ಯುತ್ ಶಕ್ತಿಯಾಗಿ ಪರಿವರ್ತಿಸುತ್ತದೆ.
3) ವಿಭವಾಂತರವನ್ನು ಅಳೆಯುತ್ತದೆ.
4) ವಾಹಕದ ಚಲನೆಯ ದಿಕ್ಕನ್ನು ತೋರಿಸುತ್ತದೆ.
5) ವಿದ್ಯುತ್ ಉಪಕರಣಗಳನ್ನು ರಕ್ಷಿಸುತ್ತದೆ.
6) ವಿದ್ಯುತ್ ಪ್ರವಾಹದ ದಿಕ್ಕನ್ನು ಹಿಮ್ಮುಖಗೊಳಿಸುತ್ತದೆ.
7) ವಿದ್ಯುತ್ ಶಕ್ತಿಯನ್ನು ಯಾಂತ್ರಿಕ ಶಕ್ತಿಯನ್ನಾಗಿ ಪರಿವರ್ತಿಸುತ್ತದೆ.


ಉತ್ತರ:– ಎ–6 ಬಿ–5 ಸಿ–1 ಡಿ–2

14) ಯಾವುದಕ್ಕೆ ಉಭಯಧರ್ಮಿ (amphoteric) ಆಕ್ಸೈಡ್‌ಗಳು ಎನ್ನುವರು?

ಉತ್ತರ:– ಅಲ್ಯುಮಿನಿಯಂ ಆಕ್ಸೈಡ್, ಸತುವಿನ ಆಕ್ಸೈಡ್‌ಗಳಂಥ ಕೆಲವು ಲೋಹದ ಆಕ್ಸೈಡ್‌ಗಳು ಆಮ್ಲೀಯ ಹಾಗೂ ಪ್ರತ್ಯಾಮ್ಲೀಯ ಗುಣಗಳೆರಡನ್ನೂ ಪ್ರದರ್ಶಿಸುತ್ತವೆ. ಇಂತಹ ಲೋಹದ ಆಕ್ಸೈಡ್‌ಗಳು ಆಮ್ಲ ಮತ್ತು ಪ್ರತ್ಯಾಮ್ಲಗಳೆರಡರ ಜೊತೆಗೂ ಪ್ರತಿವರ್ತಿಸಿದಾಗ ಲವಣ ಮತ್ತು ನೀರನ್ನು ಉತ್ಪತ್ತಿ ಮಾಡುತ್ತವೆ. ಇವುಗಳಿಗೆ ಉಭಯಧರ್ಮಿ (amphoteric) ಆಕ್ಸೈಡ್‌ಗಳು ಎನ್ನುವರು.

15) ಅಮೀಬಾದ ಕೋಶವಿಭಜನೆಯ ಚಿತ್ರ ಬರೆಯಿರಿ

ಉತ್ತರ:–



16) ಲೈಂಗಿಕತೆಯ ಹಿನ್ನೆಲೆಯಲ್ಲಿ ಉಂಟಾಗುವ ರೋಗಗಳು ಯಾವುವು?

ಉತ್ತರ:– ಗೊನೋರಿಯಾ, ಸಿಫಿಲಿಸ್ ಮತ್ತು ಏಡ್ಸ್

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

II PUC MATHS

MODEL QUESTIONS

Multiple choice Questions

1. If $y = |\cos x| + |\sin x|$, then $\frac{dy}{dx}$ at $x = \frac{2\pi}{3}$ is

(A) $\frac{1-\sqrt{3}}{2}$ (B) 0

(C) $\frac{1}{2}(\sqrt{3}-1)$ (D) None of these

Ans: (C) $\frac{1}{2}(\sqrt{3}-1)$

$$\frac{dy}{dx} = \sin x + \cos x \quad \therefore \left(\frac{dy}{dx}\right)_{x=\frac{2\pi}{3}} = \sin 120^0 + \cos 120^0$$

$$= \frac{\sqrt{3}}{2} - \frac{1}{2} = \frac{\sqrt{3}-1}{2}.$$

2. $\int e^x \left(\frac{1+\sin x}{1+\cos x}\right) dx$ is

(A) $\tan\left(\frac{x}{2}\right) + C$ (B) $e^x \sin x + C$

(C) $e^x \tan\left(\frac{x}{2}\right) + C$ (D) $e^x + C$

Ans: (C) $e^x \tan\left(\frac{x}{2}\right) + C$

$$\frac{1+\sin x}{1+\cos x} = \frac{1+2\sin\frac{x}{2}\cos\frac{x}{2}}{2\cos^2\frac{x}{2}} = \frac{1}{2}\sec^2\frac{x}{2} + \tan\frac{x}{2}$$

Let $f(x) = \tan\frac{x}{2}$. Then $f'(x) = \frac{1}{2}\sec^2\frac{x}{2}$.

$$\therefore \int e^x \left(\frac{1+\sin x}{1+\cos x}\right) dx = \int e^x [f(x) + f'(x)] \text{ form.}$$

$$= e^x f(x) = e^x . \tan\frac{x}{2} + C.$$

3. If 1, w, w^2 are three cube roots of unity, then $(1 - w + w^2)(1 + w - w^2)$ is........................

(A) 2 (B) 4

(C) 1 (D) 3

Ans: (B) 4

Expln:- We know $1 + w + w^2 = 0$. $\therefore 1 + w = -w^2$ and $1 + w^2 = -w$.

$\therefore (1 - w + w^2)(1 + w - w^2)$

$= (-2w)(-2w^2) = 4w^3 = 4.$

4. Solve for x

$$\tan^{-1}\left(\frac{1-x}{1+x}\right) = \frac{1}{2}\tan^{-1} x, \ x > 0$$

(A) 1 (B) $\frac{1}{\sqrt{3}}$ (C) $\sqrt{3}$ (D) −1

Ans: (B) $\frac{1}{\sqrt{3}}$

Expln :– $\tan^{-1}\left(\frac{1-x}{1+x}\right) = \frac{1}{2}\tan^{-1} x$

$$\therefore 2\tan^{-1}\left(\frac{1-x}{1+x}\right) = \tan^{-1} x, \ x > 0$$

Put $x = \tan\theta$. Then $\frac{1-x}{1+x} = \frac{1-\tan\theta}{1+\tan\theta} = \tan\left(\frac{\pi}{4}-\theta\right)$

$$\therefore 2\tan^{-1}\tan\left(\frac{\pi}{4}-\theta\right) = \theta$$

i.e., $2\left(\frac{\pi}{4}-\theta\right) = \theta \therefore \frac{\pi}{2} = 3\theta$ or $\theta = \frac{\pi}{6}$

$$x = \tan\frac{\pi}{6} = \frac{1}{\sqrt{3}}.$$

5. the system of linear equations $x + y + z = 6$, $x + 2y + 3z = 10$ and $x + 2y + az = b$ has no solutions when

(A) $a = 3, b \neq 10$ (B) $b = 3, a \neq 10$

(C) $a = 2, b \neq 3$ (D) $b = 2, a = 3$

Ans: (A) $a = 3, b \neq 10$

Expln:-
$$x + y + z = 6$$
$$x + 2y + 3z = 10$$
$$x + 2y + az = b$$

$$\text{Let } A = \begin{pmatrix} 1 & 1 & 1 \\ 1 & 2 & 3 \\ 1 & 2 & a \end{pmatrix}, X = \begin{pmatrix} x \\ y \\ z \end{pmatrix}, B = \begin{pmatrix} 6 \\ 10 \\ b \end{pmatrix}$$

The matrix equation is $AX = B$.

If $|A| = 0$, $(\text{adj } A)B \neq 0$, then there exists no solution.

$$|A| = 0 \Rightarrow \begin{vmatrix} 1 & 1 & 1 \\ 1 & 2 & 3 \\ 1 & 2 & a \end{vmatrix} = 0. \text{ On expanding, we get } a = 3.$$

$$(\text{adj } A)\, B = \begin{pmatrix} 2a-6 & 2-a & 1 \\ 3-a & a-1 & -2 \\ 0 & -1 & 1 \end{pmatrix}\begin{pmatrix} 6 \\ 10 \\ b \end{pmatrix}$$

$\Rightarrow 12a - 36 + 20 - 10a + b \neq 0$

If $a = 3, -10 + b \neq 0 \Rightarrow b \neq 10.$

6. The value of $\tan(1^0) + \tan(89^0)$ is

(A) $\frac{2}{\sin(2^0)}$ (B) $\frac{1}{\sin(2^0)}$ (C) $\frac{1}{\sin(1^0)}$ (D) $\frac{2}{\sin(1^0)}$

Ans: (A) $\frac{2}{\sin(2^0)}$

Expln :– $\tan 1^0 + \tan 89^0 = \tan 1^0 + \tan(90^2 - 1^0) = \tan 1^0 + \cot 1^0$

6. The value of $\tan(1^0) + \tan(89^0)$ is

(A) $\frac{2}{\sin(2^0)}$ (B) $\frac{1}{\sin(2^0)}$

(C) $\frac{1}{\sin(1^0)}$ (D) $\frac{2}{\sin(1^0)}$

Ans: (A) $\frac{2}{\sin(2^0)}$

Expln :– $\tan 1^0 + \tan 89^0 = \tan 1^0 + \tan(90^2 - 1^0) = \tan 1^0 + \cot 1^0$

$$= \frac{\sin 1^0}{\cos 1^0} + \frac{\cos 1^0}{\sin 1^0} = \frac{\sin^0 1^0 + \cos^2 1^0}{\cos 1^0 \sin 1^0}$$

$$= \frac{1}{\sin 1^0 \cos 1^0} = \frac{1}{\frac{1}{2}\sin 2 \times 1^0} = \frac{2}{\sin 2^0}$$

7. If $\frac{(x+1)^2}{(x^3+x} = \frac{A}{x} + \frac{Bx+C}{x^2+1}$, then $\operatorname{cosec}^{-1}\left(\frac{1}{A}\right) + \cot^{-1}\left(\frac{1}{B}\right) + \sec^{-1} C =$

(A) 0 (B) $\frac{\pi}{2}$

(C) $\frac{5\pi}{6}$ (D) $\frac{\pi}{6}$

Ans: (C) $\frac{5\pi}{6}$

(Contd....)

ಸ್ಪೇಸ್ ಎಕ್ಸ್ ರಾಕೆಟ್ ಬಳಸಿ ಇಸ್ರೊ ಉಪಗ್ರಹ ಉಡ್ಡಯನ



ನವದೆಹಲಿ(ಪಿಟಿಐ): ಇಸ್ರೊದ ವಾಣಿಜ್ಯ ಅಂಗಸಂಸ್ಥೆ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ (ಎನ್ಎಸ್ಐಎಲ್), ಸ್ಪೇಸ್ ಎಕ್ಸ್‌ನ 'ಫಾಲ್ಕನ್–9' ರಾಕೆಟ್‌ನ ನೆರವಿನಿಂದ ಸಂವಹನ ಉದ್ದೇಶದ ಉಪಗ್ರಹವನ್ನು ಉಡ್ಡಯನ ಮಾಡಲಿದೆ.

ದೇಶದ ಬ್ರಾಡ್‌ಬ್ಯಾಂಡ್, ವಿಮಾನ, ನೌಕೆಗಳಲ್ಲಿ ಸಂವಹನ (ಐಎಫ್ಎಂಸಿ), ಸೆಲ್ಯುಲರ್ ಸೇವೆ ಒದಗಿಸುವ 'ಜಿಎಸ್ಎಟಿ–20' ಉಪಗ್ರಹವನ್ನು ಈ ವರ್ಷ ಉಡ್ಡಯನ ಮಾಡಲಾಗುತ್ತದೆ. ಇದಕ್ಕಾಗಿ ಅಮೆರಿಕದ ಸ್ಪೇಸ್ಎಕ್ಸ್ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಎನ್ಎಸ್ಐಎಲ್ ಬುಧವಾರ ಪ್ರಕಟಿಸಿದೆ.

4.7 ಟನ್ ಭಾರದ

ಈ 'ಜಿಎಸ್ಎಟಿ–20' ಉಪಗ್ರಹವು ಅಧಿಕ ಸಂವಹನ ಸಾಮರ್ಥ್ಯವನ್ನು ಹೊಂದಿರಲಿದ್ದು, ಇದರಿಂದ ದೇಶ-ದಾದ್ಯಂತವಲ್ಲದೇ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಲಕ್ಷದ್ವೀಪಕ್ಕೂ ಸೇವೆ ವಿಸ್ತರಿಸಲು ಸಾಧ್ಯವಾಗಲಿದೆ ಎಂದು ತಿಳಿಸಿದೆ.

ಇಸ್ರೊ ಬಳಿ ಇರುವ 'ಜಿಎಸ್ಎಲ್‌ವಿ–ಎಂಕೆ3' ರಾಕೆಟ್‌ನಿಂದ 4 ಟನ್ ಭಾರದ ಉಪಗ್ರಹಗಳನ್ನು ಭೂ ಕಕ್ಷೆಗೆ ಸೇರಿಸಬಹುದಾಗಿದೆ. ಹೀಗಾಗಿ 'ಜಿಎಸ್ಎಟಿ–20' ಉಪಗ್ರಹ ಉಡ್ಡಯನಕ್ಕೆ ಸ್ಪೇಸ್ ಎಕ್ಸ್‌ನ ಅಧಿಕ ಸಾಮರ್ಥ್ಯದ 'ಫಾಲ್ಕನ್–9' ರಾಕೆಟ್ ಬಳಸಲಾಗುತ್ತದೆ. 'ಫಾಲ್ಕನ್–9' ರಾಕೆಟ್, 8.3 ಟನ್‌ನಷ್ಟು ಭಾರದ ಸಾಧನಗಳನ್ನು ಹೊತ್ತೊಯ್ದು, ಭೂಕಕ್ಷೆಗೆ ಸೇರಿಸುವ ಸಾಮರ್ಥ್ಯ ಹೊಂದಿದೆ.

10 ಟನ್ ಭಾರದ

ಸಾಧನಗಳನ್ನು ಸಹ ಉಡ್ಡಯನ ಮಾಡುವ ಸಾಮರ್ಥ್ಯವಿರುವ 'ನೆಕ್ಸ್ಟ್ ಜನರೇಷನ್ ಲಾಂಚ್ ವೆಹಿಕಲ್' (ಎನ್‌ಜಿಎಲ್‌ವಿ) ರಾಕೆಟ್ ಅನ್ನು ಇಸ್ರೊ ಅಭಿವೃದ್ಧಿಪಡಿಸುತ್ತಿದೆ.

ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ಬಂಧಿಸಲು ಪಿತೂರಿ–ಎಎಪಿ • ಭ್ರಷ್ಟರಿಗೆ ಕೈಕೋಳ–ಬಿಜೆಪಿ

ವಿಚಾರಣೆಗೆ ಗೈರು: ಪ್ರಶ್ನಾವಳಿ ಕೋರಿಕೆ

ನವದೆಹಲಿ (ಪಿಟಿಐ): ವಿಚಾರಣೆಗೆ ಹಾಜರಾಗುವಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಮೂರನೇ ಬಾರಿ ಸಮನ್ಸ್ ಜಾರಿಗೊಳಿಸಿದ್ದರೂ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬುಧವಾರವೂ ಹಾಜರಾಗಲಿಲ್ಲ.



ಅರವಿಂದ ಕೇಜ್ರಿವಾಲ್

ತನಿಖೆಗೆ ಸಂಬಂಧಿಸಿದ ಪ್ರಶ್ನಾವಳಿಯನ್ನು ಕಳುಹಿಸಿ ಕೊಡುವಂತೆ ಕೋರಿ ತನಿಖಾ ಸಂಸ್ಥೆಗೆ ಕೇಜ್ರಿವಾಲ್ ಪತ್ರ ಬರೆದಿದ್ದಾರೆ.

'ರಾಜ್ಯಸಭೆಯ ಚುನಾವಣೆ ಹಾಗೂ ಗಣರಾಜ್ಯೋತ್ಸವದ ಸಿದ್ಧತೆಯಲ್ಲಿ ಕಾರ್ಯನಿರತನಾಗಿದ್ದೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಸ್ಪಷ್ಟತೆ ಸಿಗದಾಗಿದೆ. ಪ್ರಶ್ನಾವಳಿಯನ್ನು ಕಳುಹಿಸಿದರೆ ಉತ್ತರಿಸುವೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ದೆಹಲಿ ಅಬಕಾರಿ ನೀತಿ ಹಗರಣದ ಜತೆಗೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜ.3ರಂದು ವಿಚಾರಣೆಗೆ ಹಾಜರಾಗಬೇಕು ಎಂದು ಇ.ಡಿ ಸಮನ್ಸ್ ನೀಡಿತ್ತು. ಈ ಹಿಂದೆಯೂ 2023ರ ನ.2 ಮತ್ತು ಡಿ.21ರಂದು ಕೇಜ್ರಿವಾಲ್ ಅವರಿಗೆ ಸಮನ್ಸ್ ಜಾರಿಗೊಳಿಸಲಾಗಿತ್ತು. ಮೂರು ಬಾರಿಯೂ ಕೇಜ್ರಿವಾಲ್ ಅವರು ಹಾಜರಾಗಿಲ್ಲ.

ಈ ಬೆಳವಣಿಗೆಯು ಎಎಪಿ ಹಾಗೂ ಬಿಜೆಪಿ ನಡುವೆ ಆರೋಪ–ಪ್ರತ್ಯಾರೋಪಕ್ಕೆ ಎಡೆಮಾಡಿಕೊಟ್ಟಿದೆ.

'ಲೋಕಸಭಾ ಚುನಾವಣೆಯಲ್ಲಿ ಕೇಜ್ರಿವಾಲ್ ಅವರು ಪ್ರಚಾರ ಮಾಡದಂತೆ ತಡೆಯಲು ಪದೇ ಪದೇ ಸಮನ್ಸ್ ನೀಡಲಾಗುತ್ತಿದೆ. ಕೇಜ್ರಿವಾಲ್ ಅವರನ್ನು ಬಂಧಿಸಲು ಪಿತೂರಿ ನಡೆದಿದೆ' ಎಂದು ಆಮ್ ಆದ್ಮಿ ಪಕ್ಷವು ಆರೋಪಿಸಿದೆ. 'ಸತ್ಯ ಹೊರಬರುವುದು ಕೇಜ್ರಿವಾಲ್ ಅವರಿಗೆ ಬೇಕಾಗಿಲ್ಲ' ಎಂದು ಬಿಜೆಪಿ ತಿರುಗೇಟು ನೀಡಿದೆ.

'ತನಿಖೆಗೆ ಸಹಕರಿಸುವುದಾಗಿ ಕೇಜ್ರಿವಾಲ್ ಹೇಳಿದ್ದರೂ, ಬಂಧಿಸುವ ಉದ್ದೇಶದಿಂದಲೇ ಇ.ಡಿ ಸಮನ್ಸ್ ಹೊರಡಿಸಿದೆ. ಚುನಾವಣೆಗೆ ಮುನ್ನವೇ ಏಕೆ ನೋಟಿಸ್ ಕೊಡುತ್ತಿದೆ' ಎಂದು ಎಎಪಿ ಪ್ರಶ್ನಿಸಿದೆ.

ದೆಹಲಿಯ ಸಚಿವರಾದ ಸೌರಭ್ ಭಾರದ್ವಾಜ್ ಪತ್ರಿಕಾಗೋಷ್ಠಿ ನಡೆಸಿ ಇ.ಡಿ ಕ್ರಮದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. 'ಸಾಕ್ಷಿಯಾಗಿಯೇ ಅಥವಾ ಆರೋಪಿಯಾಗಿ ಸಮನ್ಸ್ ನೀಡಲಾಗಿದೆಯೇ ಎನ್ನುವುದನ್ನು ತಿಳಿಸಿಲ್ಲ' ಎಂದಿದ್ದಾರೆ.

'ಮೋದಿ ಆಡಳಿತದಲ್ಲಿ ಭ್ರಷ್ಟರಿಗೆ ಶಿಕ್ಷೆ'

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಇ.ಡಿ ವಿಚಾರಣೆಗೆ ಹಾಜರಾಗದಿರುವುದರ ವಿರುದ್ಧ ಬಿಜೆಪಿ ತೀವ್ರ ವಾಗ್ದಾಳಿ ನಡೆಸಿದ್ದು, ಪ್ರಧಾನಿ ನರೇಂದ್ರ ಮೋದಿಯವರ ಆಡಳಿತದಲ್ಲಿ ಪ್ರತಿಯೊಬ್ಬ ಭ್ರಷ್ಟ ರಾಜಕಾರಣಿಗೂ ಶಿಕ್ಷೆಯಾಗಲಿದೆ ಎಂದಿದೆ.

'ರಾಜಕೀಯ ಸೇಡಿನ ಕ್ರಮವಿದು ಎಂದು ಕೇಜ್ರಿವಾಲ್ ಹೇಳುವುದಾದರೆ, ಇದೂವರೆಗೂ ನ್ಯಾಯಾಲಯಕ್ಕೆ ಏಕೆ ಹೋಗಿಲ್ಲ' ಎಂದು ಪ್ರಶ್ನಿಸಿರುವ ಬಿಜೆಪಿಯು, 'ಇಂತಹ ನಾಟಕ ಹೆಚ್ಚು ದಿನ ನಡೆಯಲ್ಲ. ಕೈಕೋಳ ತಮ್ಮ ಹತ್ತಿರವೇ ಬಂದಿದೆ ಎಂಬುದು ಅವರಿಗೆ ಗೊತ್ತಾಗಿದೆ' ಎಂದು ತಿಳಿಸಿದೆ.

'ಮೋದಿ ಸರ್ಕಾರ ಭ್ರಷ್ಟಾಚಾರ ನಿರ್ಮೂಲನೆಗೆ ಪಣ ತೊಟ್ಟಿದೆ. ನಿಷ್ಪಕ್ಷಪಾತವಾಗಿ ಕಠಿಣ ಕ್ರಮ ಜರುಗಿಸಲು ತನಿಖಾ ಸಂಸ್ಥೆಗಳಿಗೆ ಮುಕ್ತ ಅಧಿಕಾರ ಕೊಟ್ಟಿದೆ. ಕಾನೂನಿನ ಶಕ್ತಿ ಹಾಗೂ ಜನರ ನಂಬಿಕೆಯು ಕೇಂದ್ರದ ತನಿಖಾ ಸಂಸ್ಥೆಗಳೊಟ್ಟಿಗಿದೆ' ಎಂದು ಬಿಜೆಪಿ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ ಹೇಳಿದರು.

ಸಂಸತ್ ಭದ್ರತಾ ಲೋಪ: ನೀಲಂ ಅರ್ಜಿ ವಜಾ

ನವದೆಹಲಿ (ಪಿಟಿಐ): 'ತಮ್ಮನ್ನು ಪೊಲೀಸ್ ವಶದಲ್ಲಿರಿಸಿರುವುದು ಕಾನೂನು ಬಾಹಿರ. ಹೀಗಾಗಿ ಬಿಡುಗಡೆಗೊಳಿಸಬೇಕು' ಎಂದು ಕೋರಿ ಸಂಸತ್ ಭದ್ರತಾ ಲೋಪ ಪ್ರಕರಣದ ಆರೋಪಿ ನೀಲಂ ಆಜಾದ್ ಅವರು ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಬುಧವಾರ ವಜಾ ಮಾಡಿದೆ.

'ಪೊಲೀಸ್ ಕಸ್ಟಡಿಯ ಅವಧಿಯಲ್ಲಿ ವಕೀಲರನ್ನು ಸಂಪರ್ಕಿಸಲು ತಮಗೆ ಅವಕಾಶವನ್ನೇ ಕೊಟ್ಟಿಲ್ಲ' ಎಂದು ನೀಲಂ ತಮ್ಮ ಅರ್ಜಿಯಲ್ಲಿ ವಾದಿಸಿದ್ದರು. ಆದರೆ, ಈ ಅರ್ಜಿ ವಿಚಾರಣೆಗೆ ಯೋಗ್ಯವಲ್ಲ ಎಂದು ನ್ಯಾಯಮೂರ್ತಿ ಸುರೇಶ್ ಕುಮಾರ್ ಕೈಟ್ ಅವರಿದ್ದ ಪೀಠ ಅಭಿಪ್ರಾಯಪಟ್ಟಿತು. 'ಅರ್ಜಿದಾರರು ಜಾಮೀನು ಕೋರಿ ಈಗಾಗಲೇ ವಿಚಾರಣಾಧೀನ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ್ದಾರೆ. ಆದ್ದರಿಂದ ಈ ಅರ್ಜಿ ಊರ್ಜಿತವಲ್ಲ.' ಎಂದು ಪೀಠ ಹೇಳಿತು.

19 ವರ್ಷಗಳ ಹಿಂದೆ ನಡೆದಿದ್ದ ಶ್ರಮಜೀವಿ ಎಕ್ಸ್‌ಪ್ರೆಸ್ ರೈಲು ಸ್ಫೋಟ ಪ್ರಕರಣ

ಇಬ್ಬರು ಉಗ್ರರಿಗೆ ಮರಣ ದಂಡನೆ

ಲಖನೌ: ಉತ್ತರ ಪ್ರದೇಶದ ಜೌನ್‌ಪುರ ಜಿಲ್ಲೆಯಲ್ಲಿ 19 ವರ್ಷಗಳ ಹಿಂದೆ ಶ್ರಮಜೀವಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಸಂಭವಿಸಿದ್ದ ಸ್ಫೋಟ ಪ್ರಕರಣದಲ್ಲಿ ಇಬ್ಬರು ಉಗ್ರರಿಗೆ ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಮರಣ ದಂಡನೆ ವಿಧಿಸಿದೆ.

ಬಾಂಗ್ಲಾದೇಶ ಮೂಲದ ಹಿಲಾಲುದ್ದೀನ್ ಹಾಗೂ ಪಶ್ಚಿಮ ಬಂಗಾಳದ ನಫೀಕುಲ್ ಬಿಸ್ವಾಸ್ ಶಿಕ್ಷೆಗೆ ಗುರಿಯಾದವರು.

ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ರಾಜೇಶಕುಮಾರ್ ರಾಯ್ ಅವರು, ಈ ಇಬ್ಬರು ಉಗ್ರರು ದೋಷಿಗಳು ಎಂದು ಡಿಸೆಂಬರ್ 22ರಂದು ಪ್ರಕಟಿಸಿದ್ದ ಆದೇಶದಲ್ಲಿ ತಿಳಿಸಿದ್ದರು. ಶಿಕ್ಷೆ ಪ್ರಮಾಣವನ್ನು ಮಂಗಳವಾರ ಪ್ರಕಟಿಸಿದ್ದಾರೆ.



ಪ್ರಕರಣಕ್ಕೆ ಸಂಬಂಧಿಸಿ ಒಟ್ಟು 7 ಜನ ಆರೋಪಿಗಳಿದ್ದು, ಓಬೇದ್–ಉರ್–ರೆಹಮಾನ್ ಹಾಗೂ ರೋನಿ ಎಂಬುವವರಿಗೆ ಜಿಲ್ಲಾ ನ್ಯಾಯಾಲಯವು 2016ರಲ್ಲಿ ಮರಣ ದಂಡನೆ ವಿಧಿಸಿತ್ತು. ವಿಚಾರಣೆ ನಡೆಯುತ್ತಿದ್ದ ವೇಳೆ ಒಬ್ಬ ಆರೋಪಿ ಮೃತಪಟ್ಟಿದ್ದರೆ, ಇಬ್ಬರು ಇನ್ನೂ ಪತ್ತೆಯಾಗಿಲ್ಲ.

'ಪ್ರಕರಣಕ್ಕೆ ಸಂಬಂಧಿಸಿ 117 ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿತ್ತು' ಎಂದು ಪ್ರಾಸಿಕ್ಯೂಷನ್ ಪರ ವಕೀಲ ವೀರೇಂದ್ರಕುಮಾರ್ ಮೌರ್ಯ ಹೇಳಿದ್ದಾರೆ.

2005ರ ಜುಲೈ 28ರಂದು, ಪಟ್ನಾ–ನವದೆಹಲಿ ಶ್ರಮಜೀವಿ ಎಕ್ಸ್‌ಪ್ರೆಸ್ ರೈಲು ಜೌನ್‌ಪುರ ಜಿಲ್ಲೆಯ ಹರಿಹರಪುರ ರೈಲು ನಿಲ್ದಾಣದಲ್ಲಿ ಕ್ರಾಸಿಂಗ್ ಮಾಡುತ್ತಿದ್ದ ವೇಳೆ, ರೈಲಿನಲ್ಲಿ ಪ್ರಬಲ ಸ್ಫೋಟ ಸಂಭವಿಸಿತ್ತು. ಈ ಘಟನೆಯಲ್ಲಿ 14 ಜನರ ಮೃತಪಟ್ಟು, ಇತರ 62 ಮಂದಿ ಗಾಯಗೊಂಡಿದ್ದರು.

'ಜೌನ್‌ಪುರ ರೈಲು ನಿಲ್ದಾಣದಲ್ಲಿ ಇಬ್ಬರು ಯುವಕರು ಬಿಳಿ ಬಣ್ಣದ ಸೂಟ್‌ಕೇಸ್‌ನೊಂದಿಗೆ ರೈಲು ಏರಿದ್ದರು. ರೈಲು ಚಲಿಸಲು ಆರಂಭಿಸಿದ ನಂತರ ಅವರು ಸೂಟ್‌ಕೇಸ್ ಬಿಟ್ಟು ಇಳಿದು ಹೋಗಿದ್ದರು' ಎಂದು ಸಾಕ್ಷಿಗಳು ಹೇಳಿಕೆ ನೀಡಿದ್ದರು.

ರೈಲಿನ ಶೌಚಾಲಯದಲ್ಲಿ ಇರಿಸಿ, ಸ್ಫೋಟ ಮಾಡಿದ್ದ ವಸ್ತು ಆರ್‌ಡಿಎಕ್ಸ್ ಎಂಬುದು ನಂತರ ದೃಢಪಟ್ಟಿತ್ತು.

ಬ್ರಿಟನ್‌ನಲ್ಲಿ ವೈದ್ಯರ ಮುಷ್ಕರ

ಲಂಡನ್(ಎಪಿ): ಸೂಕ್ತ ವೇತನಕ್ಕೆ ಆಗ್ರಹಿಸಿ ಬ್ರಿಟನ್‌ನಲ್ಲಿ ಕಿರಿಯ ವೈದ್ಯರು ಆರು ದಿನಗಳ ಮುಷ್ಕರಕ್ಕೆ ಧುಮುಕಿದ್ದಾರೆ. ರಾಷ್ಟ್ರೀಯ ಆರೋಗ್ಯ ಸೇವೆಯ ಇತಿಹಾಸದಲ್ಲೇ ಇದು ಅತ್ಯಂತ ದೀರ್ಘ ಮುಷ್ಕರ ಎನಿಸಿಕೊಂಡಿದ್ದು, ಸೇವೆಯಲ್ಲಿ ತೀವ್ರ ವ್ಯತ್ಯಯವಾಗಿದೆ.

ಪ್ರತಿಭಟನೆಯ ಮೊದಲ ದಿನವಾದ ಬುಧವಾರ ಸಾವಿರಾರು ವೈದ್ಯರು ಕೆಲಸಕ್ಕೆ ಗೈರುಹಾಜರಾಗಿದ್ದರು.

ಜ್ಞಾನವಾಪಿ ಸಮೀಕ್ಷಾ ವರದಿ ಸದ್ಯ ಬಹಿರಂಗ ಬೇಡ: ಎಎಸ್ಐ

ವಾರಾಣಸಿ (ಪಿಟಿಐ): ಜ್ಞಾನವಾಪಿ ಮಸೀದಿ ಸಂಕೀರ್ಣದ ಸಮೀಕ್ಷಾ ವರದಿಯನ್ನು ಇನ್ನೂ ನಾಲ್ಕು ವಾರ ಬಹಿರಂಗ ಪಡಿಸಬಾರದು ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್ಐ) ಬುಧವಾರ ವಾರಾಣಸಿಯ ನ್ಯಾಯಾಲಯಕ್ಕೆ ಮನವಿ ಮಾಡಿದೆ.

ಈ ಕುರಿತ ವಿಚಾರಣೆಯನ್ನು ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶ ಎ.ಕೆ. ವಿಶ್ವೇಶ್ ಅವರು ಗುರುವಾರಕ್ಕೆ ಮುಂದೂಡಿದ್ದಾರೆ ಎಂದು ಹಿಂದೂ ಪರ ವಕೀಲ ಮದನ್ ಮೋಹನ್ ಯಾದವ್ ತಿಳಿಸಿದ್ದಾರೆ.

ಅಲಹಾಬಾದ್ ಹೈಕೋರ್ಟ್ ಈಚೆಗೆ ನೀಡಿದ್ದ ತೀರ್ಪನ್ನು ಉಲ್ಲೇಖಿಸಿದ ಎಎಸ್ಐ, ನಾಲ್ಕು ವಾರಗಳ ಕಾಲಾವಕಾಶ ಕೇಳಿದೆ ಎಂದು ತಿಳಿಸಿದ್ದಾರೆ.

ಜೆಇಇ–ಮೇನ್: ಅಭ್ಯರ್ಥಿಗಳ ತೀವ್ರ ತಪಾಸಣೆ

ನವದೆಹಲಿ (ಪಿಟಿಐ): ಎನ್ಐಟಿ ಮತ್ತು ಐಐಐಟಿಗಳಲ್ಲಿನ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ನಡೆಯುವ 'ಜೆಇಇ–ಮೇನ್' ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಮಧ್ಯದಲ್ಲಿ ಶೌಚಾಲಯಕ್ಕೆ ಹೋಗಿ ಬಂದ ಬಳಿಕವೂ ಬಯೋಮೆಟ್ರಿಕ್ ಹಾಜರಾತಿ ಮತ್ತು ತಪಾಸಣೆಗೆ ಒಳಗಾಗಬೇಕಾಗುತ್ತದೆ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಅಧಿಕಾರಿಗಳು ತಿಳಿಸಿದ್ದಾರೆ.

ಪರೀಕ್ಷಾ ಕಾರ್ಯದಲ್ಲಿ ತೊಡಗುವ ಅಧಿಕಾರಿಗಳು, ವೀಕ್ಷಕರು, ಸಿಬ್ಬಂದಿ ಹಾಗೂ ಉಪಹಾರ ನೀಡುವವರೂ ಇದೇ ರೀತಿ ತಪಾಸಣೆಗೆ ಒಳಗಾಗಬೇಕಾಗುತ್ತದೆ ಎಂದು ಹೇಳಿದ್ದಾರೆ.

'ಈಗಾಗಲೇ ಈ ನಿಟ್ಟಿನಲ್ಲಿ ಎನ್‌ಟಿಎ ಕಠಿಣ ಕಾರ್ಯ ವಿಧಾನಗಳನ್ನು ಹೊಂದಿದೆ. ಆದರೂ, ನಕಲು ಅಭ್ಯರ್ಥಿಗಳ ಹಾಜರಾತಿ ಸೇರಿದಂತೆ ಯಾವುದೇ ರೀತಿಯ ಅಕ್ರಮಕ್ಕೂ ಅವಕಾಶ ಸಿಗದಂತೆ ಎಚ್ಚರವಹಿಸುವ ಉದ್ದೇಶದಿಂದ ಈ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ' ಎಂದು ಎನ್‌ಟಿಎ ನಿರ್ದೇಶಕ ಸುಬೋಧ್ ಕುಮಾರ್ ಸಿಂಗ್ ತಿಳಿಸಿದ್ದಾರೆ.

ಪ್ರಸ್ತುತ, ಪರೀಕ್ಷಾ ಕೇಂದ್ರಗಳ ಪ್ರವೇಶದಲ್ಲಿ ಅಭ್ಯರ್ಥಿಗಳನ್ನು ತಪಾಸಣೆಗೆ ಒಳಪಡಿಸಿ, ಬಯೋಮೆಟ್ರಿಕ್ ಹಾಜರಾತಿಯನ್ನು ದಾಖಲಿಸುವ ವ್ಯವಸ್ಥೆ ಚಾಲ್ತಿಯಲ್ಲಿದೆ. ಇದೇ ರೀತಿಯ ಪ್ರಕ್ರಿಯೆಗಳನ್ನು ಮುಂದೆ ಇತರ ಪರೀಕ್ಷೆಗಳಿಗೂ ವಿಸ್ತರಿಸಲಾಗುತ್ತದೆ ಎಂದು ಸಿಂಗ್ ವಿವರಿಸಿದ್ದಾರೆ.

ಇದೇ 24ರಿಂದ ಪರೀಕ್ಷೆ: ಜೆಇಇ–ಮೇನ್ (2024) ಪರೀಕ್ಷೆಯು ಜನವರಿ 24ರಿಂದ ಫೆಬ್ರುವರಿ 1ರವರೆವರೆಗೆ ನಡೆಯಲಿದೆ. ಇದು ಕಂಪ್ಯೂಟರ್ ಆಧಾರಿತ ಪರೀಕ್ಷೆಯಾಗಿದ್ದು (ಸಿಬಿಟಿ), ಫೆಬ್ರುವರಿ 12ರಂದು ಫಲಿತಾಂಶ ಪ್ರಕಟವಾಗಲಿದೆ.

ಈ ಬಾರಿಯ ಪರೀಕ್ಷೆಗೆ ಒಟ್ಟು 12.3 ಲಕ್ಷ ಅಭ್ಯರ್ಥಿಗಳು ಹೆಸರು ನೋಂದಾಯಿಸಿದ್ದಾರೆ. ಪರೀಕ್ಷೆಯ 2ನೇ ಆವೃತ್ತಿ ಏಪ್ರಿಲ್‌ನಲ್ಲಿ ನಡೆಯಲಿದೆ.

ಸೊರೇನ್ ಮಾಧ್ಯಮ ಸಲಹೆಗಾರ ಮನೆ ಮೇಲೆ ಇ.ಡಿ ದಾಳಿ

ರಾಂಚಿ (ಪಿಟಿಐ): ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿನ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ಬುಧವಾರ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ಮಾಧ್ಯಮ ಸಲಹೆಗಾರರಿಗೆ ಸಂಬಂಧಿಸಿದ ಸ್ಥಳಗಳ ಮೇಲೆ ದಾಳಿ ನಡೆಸಿದೆ.

ರಾಂಚಿಯೂ ಸೇರಿದಂತೆ ರಾಜ್ಯದ ಹತ್ತಾರು ಕಡೆಗಳಲ್ಲಿ ಮತ್ತು ರಾಜಸ್ಥಾನದ ಕೆಲವೆಡೆ ತಪಾಸಣೆ ನಡೆಯಿತು. ಸಿಎಂ ಮಾಧ್ಯಮ ಸಲಹೆಗಾರ ಪ್ರಸಾದ್ ಅಲಿಯಾಸ್ ಪಿಂಟು, ಸಾಹಿಬ್‌ಗಂಜ್‌ನ ಜಿಲ್ಲಾಧಿಕಾರಿ, ಮಾಜಿ ಶಾಸಕ ಪಪ್ಪು ಯಾದವ್, ಬಂದಿಖಾನೆ ಇಲಾಖೆಯ ಹಲವು ಅಧಿಕಾರಿಗಳಿಗೆ ಸಂಬಂಧಿಸಿದ ಸ್ಥಳಗಳಲ್ಲೂ ದಾಳಿ ನಡೆದಿದೆ.

ಪ್ರಕರಣದಲ್ಲಿ ಪ್ರಸಾದ್ ಅವರನ್ನು ಈ ಹಿಂದೆಯೂ ವಿಚಾರಣೆಗೆ ಒಳಪಡಿಸಲಾಗಿತ್ತು. ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಸುಭಾಷಿತ

ನಿಮ್ಮ ಮನಸ್ಸನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಿ, ಇಲ್ಲವಾದರೆ ಅದು ನಿಮ್ಮನ್ನು ನಿಯಂತ್ರಿಸುತ್ತದೆ.

-ಗೌತಮ ಬುದ್ಧ

ಹಣಕಾಸು ಆಯೋಗಕ್ಕೆ ಅಧ್ಯಕ್ಷರ ನೇಮಕ ಅರ್ಥಪೂರ್ಣ ಕೆಲಸಕ್ಕೆ ಹಲವು ಸವಾಲು

ಹದಿನಾರನೇ ಹಣಕಾಸು ಆಯೋಗಕ್ಕೆ ಅರವಿಂದ ಪನಗಢಿಯಾ ಅವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದ ಪರಿಣಾಮವಾಗಿ ಆಯೋಗವು ಒಂದು ರೂಪ ಪಡೆದುಕೊಂಡಂತೆ ಆಗಿದೆ. ಪನಗಢಿಯಾ ಅವರು ನೀತಿ ಆಯೋಗದ ಮೊದಲ ಉಪಾಧ್ಯಕ್ಷ ಆಗಿದ್ದವರು. ಅರ್ಥಶಾಸ್ತ್ರಜ್ಞರಾದ ಪನಗಢಿಯಾ ಅವರು ಈಗ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಹಣಕಾಸು ಆಯೋಗದ ಇತರ ಸದಸ್ಯರನ್ನು ಇನ್ನಷ್ಟೇ ನೇಮಕ ಮಾಡಬೇಕಿದೆ. ಪನಗಢಿಯಾ ಅವರ ನೇಮಕದ ಮೂಲಕವೇ ಕೇಂದ್ರ ಸರ್ಕಾರವು ಕೆಲವು ಸಂದೇಶಗಳನ್ನು ರವಾನಿಸುವ ಯತ್ನ ನಡೆಸಿರಬಹುದು. ಆಯೋಗವು ಕೆಲಸ ಮಾಡುವಾಗ ಹಾಗೂ ಶಿಫಾರಸುಗಳನ್ನು ಸಲ್ಲಿಸುವಾಗ ಗಣನೆಗೆ ತೆಗೆದುಕೊಳ್ಳಬೇಕಾದ ಹಣಕಾಸಿನ ಪರಿಸ್ಥಿತಿ ಹಾಗೂ ರಾಜಕೀಯ ಪರಿಸ್ಥಿತಿಯ ಬಗ್ಗೆ ಪನಗಢಿಯಾ ಅವರಿಗೆ ಅರಿವಿದೆ. ಆಯೋಗಕ್ಕೆ ನಿಗದಿ ಮಾಡಿರುವ ವ್ಯಾಪ್ತಿ ಏನು ಎಂಬುದನ್ನು ಸರ್ಕಾರವು ವಿವರವಾಗಿ ಹೇಳಿಲ್ಲ. ಆದರೆ ಈ ಹಿಂದೆ ಹಣಕಾಸು ಆಯೋಗಗಳಿಗೆ ಕೇಂದ್ರವು ಅವುಗಳ ಕೆಲಸದ ವ್ಯಾಪ್ತಿಯನ್ನು ಸ್ಪಷ್ಟವಾಗಿ ಹೇಳುತ್ತಿತ್ತು. ಈಗ ಈ ಪದ್ಧತಿಯಲ್ಲಿ ತುಸು ಬದಲಾವಣೆಯಾದಂತೆ ಕಾಣುತ್ತಿದೆ. ಇದರಿಂದಾಗಿ ಆಯೋಗಕ್ಕೆ ತನ್ನ ಕೆಲಸಗಳಲ್ಲಿ ಹೆಚ್ಚಿನ ಸ್ವಾತಂತ್ರ್ಯ ಸಿಗಬಹುದು. ಅಲ್ಲದೆ, ಆಯೋಗವು ತನ್ನ ವ್ಯಾಪ್ತಿಯನ್ನು ನಿಗದಿ ಮಾಡಿಕೊಳ್ಳುವ ವಿಚಾರದಲ್ಲಿ ಸಮರ್ಥವಾಗಿದೆ ಎಂಬ ವಿಶ್ವಾಸ ಸರ್ಕಾರಕ್ಕೆ ಇದ್ದಿರಬಹುದು.



ಹಣಕಾಸು ಆಯೋಗವು ಸಬ್ಸಿಡಿಗಳು ಹಾಗೂ ವಿತ್ತೀಯ ಕೊರತೆಯ ವಿಚಾರವಾಗಿ ಕೆಲವು ನಿಯಮಗಳನ್ನು ರೂಪಿಸಬೇಕಿದೆ

ಆಯೋಗವು ತೆರಿಗೆ ವರಮಾನವನ್ನು ಕೇಂದ್ರ ಹಾಗೂ ರಾಜ್ಯಗಳ ನಡುವೆ ಯಾವ ಸೂತ್ರದ ಅಡಿಯಲ್ಲಿ ಹಂಚಿಕೆ ಮಾಡಬೇಕು ಎಂಬುದನ್ನು ತೀರ್ಮಾನಿಸಬೇಕಿದೆ. ಅಲ್ಲದೆ, ವಿವಿಧ ರಾಜ್ಯಗಳ ನಡುವೆ ತೆರಿಗೆ ವರಮಾನದ ಹಂಚಿಕೆಗೆ ಕೂಡ ಸೂತ್ರವನ್ನು ರೂಪಿಸಬೇಕಿದೆ. ಆಯೋಗವು 2026ರಿಂದ 2031ರವರೆಗೆ ಅನ್ವಯವಾಗುವಂತೆ ಈ ಸೂತ್ರವನ್ನು ಸಿದ್ಧಪಡಿಸಬೇಕಿದೆ. ಆರ್ಥಿಕ ವಿಚಾರದಲ್ಲಿ ಒಕ್ಕೂಟ ವ್ಯವಸ್ಥೆಯಲ್ಲಿ ಸಮಸ್ಯೆಗಳು ಇರುವಾಗ ಈ ಹೊಣೆಯು ಬಹಳ ಸವಾಲಿನದ್ದು. ಕೇಂದ್ರದಿಂದ ರಾಜ್ಯಗಳಿಗೆ ಸಿಗುವ ತೆರಿಗೆ ವರಮಾನವು ನ್ಯಾಯಸಮ್ಮತವಾಗಿ ಇರುವಂತೆ ಆಯೋಗ ನೋಡಿಕೊಳ್ಳಬೇಕು. ಈಗಿನ ನಿಯಮಗಳ ಅನ್ವಯ, ಕಡಿಮೆ ವರಮಾನ ಇರುವ ರಾಜ್ಯಗಳಿಗೆ ತೆರಿಗೆ ಪಾಲು ಹೆಚ್ಚು ಸಿಗುತ್ತಿದೆ. ತಾವು ಅಭಿವೃದ್ಧಿಯನ್ನು ಸಾಧಿಸಿದರೂ, ವರಮಾನ ಹಂಚಿಕೆಯಲ್ಲಿ ತಮಗೆ ಅನ್ಯಾಯ ಆಗುತ್ತಿದೆ ಎಂಬ ಅಳಲು ದಕ್ಷಿಣದ ರಾಜ್ಯಗಳದ್ದಾಗಿದೆ. ತೆರಿಗೆ ವರಮಾನದಲ್ಲಿ ತಮಗಿಂತಲೂ ಹೆಚ್ಚಿನ ಪಾಲು ಉತ್ತರ ಭಾರತದ ರಾಜ್ಯಗಳಿಗೆ ಸಿಗುತ್ತಿದೆ ಎಂದು ಕೂಡ ಅವು ಹೇಳುತ್ತಿವೆ. ದೇಶದಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆ ಜಾರಿಗೆ ಬಂದ ನಂತರದಲ್ಲಿ ವರಮಾನ ಸಂಗ್ರಹದ ವಿಚಾರದಲ್ಲಿ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ಉಳಿದಿಲ್ಲ. ವೆಚ್ಚಗಳ ವಿಚಾರದಲ್ಲಿ ತಮ್ಮ ಸ್ವಾತಂತ್ರ್ಯ ಒಂದೆಡೆ ಕುಗ್ಗುತ್ತಿದೆ, ವರಮಾನ ಸಂಗ್ರಹಿಸುವ ಮಾರ್ಗಗಳು ಕಡಿಮೆ ಆಗಿವೆ ಎಂಬುದು ರಾಜ್ಯಗಳ ಅಳಲು. ಹಣಕಾಸು ಆಯೋಗವು ಸಬ್ಸಿಡಿಗಳು ಹಾಗೂ ವಿತ್ತೀಯ ಕೊರತೆಯ ವಿಚಾರವಾಗಿ ಕೆಲವು ನಿಯಮಗಳನ್ನು ರೂಪಿಸಬೇಕಿದೆ. ಇವು ಮುಂದಿನ ದಿನಗಳಲ್ಲಿ ಬಹಳ ಮಹತ್ವ ಪಡೆಯಲಿವೆ.

ಹಣಕಾಸು ಆಯೋಗವು ದತ್ತಾಂಶದ ಕೊರತೆ ಹಾಗೂ ದೋಷಪೂರಿತ ದತ್ತಾಂಶದ ಸಮಸ್ಯೆಯನ್ನೂ ನಿಭಾಯಿಸಬೇಕಿದೆ. ವರಮಾನ ಹಂಚಿಕೆಯ ಸೂತ್ರವನ್ನು ತೀರ್ಮಾನಿಸುವಾಗ ಜನಸಂಖ್ಯೆಯ ಬಗ್ಗೆಯೂ ಗಮನ ನೀಡಬೇಕಿದೆ. ಆದರೆ 2021ರಲ್ಲಿ ಜನಗಣತಿ ಆಗದೆ ಇರುವ ಕಾರಣ, ಹಣಕಾಸು ಆಯೋಗವು ಜನಸಂಖ್ಯೆಯನ್ನು 2011ರ ಜನಗಣತಿಯ ಆಧಾರದಲ್ಲಿ ಲೆಕ್ಕಹಾಕಬೇಕಾಗುತ್ತದೆ. ಇದು ಹಣಕಾಸು ಆಯೋಗಕ್ಕೆ ಕೆಲವು ಅಂದಾಜುಗಳನ್ನು ಮಾಡುವ ಕೆಲಸದಲ್ಲಿ ತೊಡಕಾಗಿ ಪರಿಣಮಿಸಬಹುದು. ತಲಾವಾರು ಆದಾಯಕ್ಕೆ ಸಂಬಂಧಿಸಿದ ದತ್ತಾಂಶ ಕೂಡ ಲಭ್ಯವಿಲ್ಲದೆ ಇರಬಹುದು. ಕೆಲವು ದತ್ತಾಂಶಗಳು ಎಷ್ಟರಮಟ್ಟಿಗೆ ಸರಿ ಇವೆ ಎಂಬ ಪ್ರಶ್ನೆ ಒಂದೆಡೆ ಇದೆ. ಆಯೋಗವು ಅರ್ಥಪೂರ್ಣವಾದ ಕೆಲಸ ಮಾಡಬೇಕು ಎಂದಾದರೆ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾಗುತ್ತದೆ.

ದಿನದ ಟ್ವೀಟ್

ಬದಲಾವಣೆ ಅನಿವಾರ್ಯ



ಈ ದೇಶದ ಅತಿ ದೊಡ್ಡ ಪಿಡುಗು ಜಾತಿ ವ್ಯವಸ್ಥೆ. ಅದನ್ನು ಹೋಗಲಾಡಿಸುವ ಸಾಮಾಜಿಕ ಚಳವಳಿ ಸಾವಿರ ವರ್ಷಗಳಿಂದ ನಡೆಯುತ್ತಿದ್ದರೂ ಅದು ಎಲ್ಲಿಯೂ ಹೋಗಿಲ್ಲ. ನಗರಗಳು ಒಂದು ಮಟ್ಟಿಗೆ ಈ ಪಿಡುಗನ್ನು ಮರೆಮಾಚಿದಂತೆ ಕಂಡರೂ ಆಳದಲ್ಲಿ ಯಾವ ಬದಲಾವಣೆಯೂ ಆದಂತೆ ಕಾಣುವುದಿಲ್ಲ. ಅಂಬೇಡ್ಕರ್ ಅವರ 'Annihilation of Caste' ಓದಿದರೆ ಕಳೆದ ನೂರು ವರ್ಷಗಳಲ್ಲಿ ಆಗಿರುವ ಬದಲಾವಣೆ ಬಹಳ ಸಣ್ಣದು ಅನ್ನುವುದು ಅರಿವಾಗುತ್ತದೆ.

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ



ಕರ್ನಾಟಕದ ತೆರಿಗೆ ಪಾಲು ವರ್ಷದಿಂದ ವರ್ಷಕ್ಕೆ ಇಳಿಕೆಯಾಗುತ್ತಿದೆ. ಕನ್ನಡಿಗರು ಬೆವರು ಸುರಿಸಿ ಕೇಂದ್ರಕ್ಕೆ ಕಟ್ಟುವ ತೆರಿಗೆ ಹಣದ ಬಹುಪಾಲು ಉತ್ತರ ಭಾರತದ ರಾಜ್ಯಗಳ ಪಾಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರೇ, ಕರ್ನಾಟಕಕ್ಕೆ ಮಾತ್ರ ಯಾಕೆ ಈ ಅನ್ಯಾಯ? ಆರೂವರೆ ಕೋಟಿ ಕನ್ನಡಿಗರ ಪ್ರಶ್ನೆಯಿದು.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಸೋಮವಾರ, 4-1-1999

• ಮಾರ್ಗಪ್ರವರ್ತಕರಾಗಲು ವಿಜ್ಞಾನಿಗಳಿಗೆ ಪ್ರಧಾನಿ ಕರೆ

ಚೆನ್ನೈ, ಜ. 3 (ಪಿಟಿಐ)– 'ಕೇವಲ ತಂತ್ರಜ್ಞಾನವನ್ನು ಪಡೆದುಕೊಳ್ಳುವವರು' ಎಂಬ ಅಪಕೀರ್ತಿಯಿಂದ ಹೊರಬಂದು ತಂತ್ರಜ್ಞಾನ ರಂಗದಲ್ಲಿ ಮಾರ್ಗಪ್ರವರ್ತಕರಾಗಬೇಕು ಎಂದು ದೇಶದ ವಿಜ್ಞಾನಿಗಳಿಗೆ ಪ್ರಧಾನಿ ವಾಜಪೇಯಿ ಅವರು ಇಂದು ಕರೆ ನೀಡಿದರು.

'ತಂತ್ರಜ್ಞಾನವನ್ನು ನಿರಾಕರಿಸುವ ದೇಶಗಳು ನಿಮ್ಮ ಕೈ ತಿರುಚುವ ಕೃತ್ಯಕ್ಕೆ ಅವಕಾಶ ನೀಡಬೇಡಿ' ಎಂದು ಅವರು ಕಿವಿಮಾತು ಹೇಳಿದರು.

ದೇಶ–ವಿದೇಶಗಳಿಂದ ಸುಮಾರು 5 ಸಾವಿರ ವಿಜ್ಞಾನಿಗಳು ಭಾಗವಹಿಸುತ್ತಿರುವ 86ನೇ ಭಾರತೀಯ ವಿಜ್ಞಾನ ಸಮ್ಮೇಳನವನ್ನು ಇಲ್ಲಿನ ಅಣ್ಣಾ ವಿಶ್ವವಿದ್ಯಾಲಯದಲ್ಲಿ ಉದ್ಘಾಟಿಸಿದ ಅವರು, 'ಬಲಿಷ್ಠರನ್ನು ಮಾತ್ರವೇ ಶಕ್ತಿಶಾಲಿಗಳು ಗೌರವಿಸುತ್ತಾರೆ' ಎಂದರು.

'ವಿದೇಶಿ ಸಂಸ್ಥೆಗಳ ಜತೆ ಭಾರತವು ಅತ್ಯಂತ ಮೈತ್ರಿಯುತ ಸಹಯೋಗವನ್ನು ಹೊಂದಬೇಕು. ಆದರೆ ಯಾವುದೇ ದೇಶವು ನಮಗೆ ನ್ಯಾಯಯುತವಾಗಿ ದಕ್ಕಬೇಕಾದ ವೈಜ್ಞಾನಿಕ ಸಹಕಾರವನ್ನು ನಿರಾಕರಿಸಿದಾಗ, ನಮ್ಮ ವಿಜ್ಞಾನಿಗಳು ದೇಶದ ಅಗತ್ಯಗಳನ್ನು ಪೂರೈಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು' ಎಂದು ರಾಷ್ಟ್ರದ ಪ್ರತಿಷ್ಠಿತ ಹಾಗೂ ವಿಜ್ಞಾನಿಗಳ ಬೃಹತ್ ಸಮಾವೇಶದಲ್ಲಿ ಪ್ರಧಾನಿ ಅಭಿಪ್ರಾಯಪಟ್ಟರು.

• ದಳ ಬಿಕ್ಕಟ್ಟು ಪರಿಹಾರ ಸದ್ಯಕ್ಕೆ ಅಸಂಭವ

ಬೆಂಗಳೂರು, ಜ. 3 – ರಾಜ್ಯ ಜನತಾದಳದ ಬಿಕ್ಕಟ್ಟು ಪರಿಹರಿಸುವ ಸಂಬಂಧ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಶರದ್ ಯಾದವ್ ಅವರು ಮುಖಂಡರೊಡನೆ ಸಮಾಲೋಚನಾ ಪ್ರಕ್ರಿಯೆ ಆರಂಭಿಸಿದ್ದರೂ, ಸಂಕ್ರಾಂತಿ ಹಬ್ಬಕ್ಕೆ ಮುನ್ನ ತಮ್ಮ ನಿರ್ಧಾರ ಪ್ರಕಟಿಸುವ ಸೂಚನೆಗಳು ಕಂಡುಬರುತ್ತಿಲ್ಲ.

50 ವರ್ಷಗಳ ಹಿಂದೆ

ಶುಕ್ರವಾರ, 4-1-1974

• ದಾರಿದ್ರ್ಯ ನಿರ್ಮೂಲನಕ್ಕೆ ವಿಜ್ಞಾನಿಗಳ ನೆರವಿಗೆ ಇಂದಿರಾ ಮನವಿ

ನಾಗ್ಪುರ, ಜ. 3 – ದೇಶದಲ್ಲಿನ ಬಡತನ ನಿರ್ಮೂಲನೆಗೊಳಿಸುವ ಗತಿಯನ್ನು ತ್ವರಿತ-ಗೊಳಿಸಲು ಸಹಕರಿಸುವಂತೆ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರು ಇಂದು ಇಲ್ಲಿ ವಿಜ್ಞಾನಿಗಳು ಮತ್ತು ತಾಂತ್ರಿಕ ತಜ್ಞರಿಗೆ ಮನವಿ ಮಾಡಿದರು.

ಭಾರತೀಯ ವಿಜ್ಞಾನ ಕಾಂಗ್ರೆಸ್ಸಿನ 61ನೇ ಅಧಿವೇಶನ ಉದ್ಘಾಟಿಸಿದ ಅವರು, ವಿದ್ಯುಚ್ಛಕ್ತಿ ಅಭಾವದ ಬಿಕ್ಕಟ್ಟಿನ ಮಧ್ಯೆ ಹೊಸ ವರ್ಷ ಉದಯವಾಗಿದೆ ಎಂದು ಹೇಳಿದರು.

ಈ ಬಿಕ್ಕಟ್ಟು ನಮ್ಮ ವೈಜ್ಞಾನಿಕ ಮತ್ತು ತಾಂತ್ರಿಕ ಅಧ್ಯಯನಗಳ ಬಗ್ಗೆ ಹೊಸದೃಷ್ಟಿ ತಾಳುವಂತೆ ಮಾಡಿದೆ ಎಂದು ಅವರು ತಿಳಿಸಿದರು.

• ಬಸ್ ಡ್ರೈವರ್ ಮೇಲೆ ಕೈಮಾಡಿದ ಆರೋಪ: ಸಚಿವ ಚಿಕ್ಕೇಗೌಡ ಅವರಿಗೆ ಘೇರಾವ್

ದೊಡ್ಡಬಳ್ಳಾಪುರ, ಜ. 3 – ಇಲ್ಲಿಗೆ ಸಮೀಪದ ಘಾಟಿ ಕ್ಷೇತ್ರದ ಬಳಿ ಜ. 1ರಂದು ಸರ್ಕಾರಿ ಬಸ್ಸಿನ ಚಾಲಕನ ಮೇಲೆ ಕೈಮಾಡಿದರೆಂದು ಆಪಾದಿಸಿ, ಅದರ ವಿರುದ್ಧ ಪ್ರತಿಭಟಿಸಲು ಬಸ್ಸಿನ ಪ್ರಯಾಣಿಕರು ಕೃಷಿ ಸಚಿವ ಎನ್. ಚಿಕ್ಕೇಗೌಡರಿಗೆ ಘೇರಾವ್ ಹಾಕಿದ ಘಟನೆ ವರದಿಯಾಗಿದೆ.

ತಮ್ಮ ಕಾರಿಗೆ ಮುಂದೆ ಹೋಗಲು ದಾರಿ ಬಿಡಲಿಲ್ಲವೆಂಬ ಕಾರಣಕ್ಕಾಗಿ ಸಚಿವ ಚಿಕ್ಕೇಗೌಡರು, ಮುಂದೆ ಹೋಗುತ್ತಿದ್ದ ಸರ್ಕಾರಿ ಬಸ್ಸನ್ನು ನಿಲ್ಲಿಸಿ, ಬಸ್ಸಿನ ಚಾಲಕನಿಗೆ ಬಯ್ದು, ಆತನ ಮೇಲೆ ಕೈಮಾಡಿದರೆಂದು ಹೇಳಲಾಗಿದೆ.

ದುಡಿಯುವ ವಯಸ್ಸಿನಲ್ಲಿಯೇ ವೃದ್ಧಾಪ್ಯದ ದಿನಗಳಿಗಾಗಿ ನಡೆಯಲಿ ಪೂರ್ವಸಿದ್ಧತೆ

ಸಂಕ್ರಮಣ ಕಾಲದಲ್ಲಿ ವಯೋವೃದ್ಧರು



ವಿಶ್ಲೇಷಣೆ

ಜ್ಯೋತಿ

ಬದಲಾವಣೆಯೊಂದೇ ಶಾಶ್ವತ ಎನ್ನುವ ಲೋಕೋಕ್ತಿಯಂತೆ, ಭಾರತೀಯ ಸಾಂಪ್ರದಾಯಿಕ ಕೌಟುಂಬಿಕ ಸಂಬಂಧಗಳಲ್ಲಿ ಕಾಲಾನುಕ್ರಮವಾಗಿ ಬಹಳಷ್ಟು ಬದಲಾವಣೆಗಳು ಆಗಿರುವುದನ್ನು ನಾವು ಗುರುತಿಸಬಹುದು. ಬಾಹ್ಯ ಪ್ರಭಾವದಿಂದ ಎಳೆಯ ಮನಸ್ಸುಗಳು ಮುಕ್ತತೆಗೆ ತೆರೆದುಕೊಂಡರೆ, ಹಳೆಯ ತಲೆಗಳು ಅತಂತ್ರ ಸ್ಥಿತಿಗೆ ತಳ್ಳಲ್ಪಡುತ್ತಿರುವುದು ನೋವಿನ ಸಂಗತಿ. ಹಾಗಾಗಿ, ವರ್ತಮಾನ ಭಾರತದ ಈ ಕಾಲಘಟ್ಟವನ್ನು ಹಿರಿಯ ಜೀವಗಳ ಬದುಕಿನ ನಿರ್ವಹಣೆಯ ಕುರಿತು ಗಂಭೀರವಾಗಿ ಚಿಂತಿಸಬೇಕಾದ ಸಂಕ್ರಮಣಕಾಲ ಎನ್ನಬಹುದು.

ಈ ಚರ್ಚೆ ಯಾಕೆ ಮುಖ್ಯವಾಗುತ್ತದೆಂದರೆ, ಬದುಕಿರುವ ಪ್ರತಿಯೊಬ್ಬರೂ ಈ ಕಾಲಘಟ್ಟವನ್ನು ಅನುಭವಿಸಲೇಬೇಕಾಗಿರುವುದರಿಂದ. ಆದರೆ ಅದಕ್ಕಾಗಿ ಸೂಕ್ತ ಪೂರ್ವತಯಾರಿ ಬೇಕು, ಮಾನಸಿಕ ಸ್ಥಿರತೆ ಹಾಗೂ ಬದುಕುವ ಕಲೆಯನ್ನು ಅಂತರ್ಗತ ಮಾಡಿಕೊಳ್ಳಬೇಕಾದುದು ಅಗತ್ಯ. ಇಂದು ವಯೋವೃದ್ಧರಿಗಾಗಿ ಬಹಳಷ್ಟು ಯೋಜನೆಗಳು ಇದ್ದರೂ ಅವು ಎಷ್ಟರ-ಮಟ್ಟಿಗೆ ಅರ್ಹರನ್ನು ತಲುಪುತ್ತಿವೆ ಎಂಬ ಪ್ರಶ್ನೆ ಇದ್ದೇ ಇದೆ. ಅದಕ್ಕಿಂತ ಮಿಗಿಲಾಗಿ, ಅವರ ಗೌರವಯುತ ಜೀವನಕ್ಕೆ ಪೂರಕವಾಗುವಂತಹ ಸಾಮಾಜಿಕ ನಿಲುವು ಇನ್ನೂ ರೂಪುಗೊಂಡಿಲ್ಲ. ಇಂತಹ ಸಂವೇದನೆಯನ್ನು 'ಬುದ್ಧಿವಂತ' ಮನುಷ್ಯನಲ್ಲಿ ಜಾಗೃತಗೊಳಿಸಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯ.

ಹಿಂದಿನ ಅವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿ ವಯೋವೃದ್ಧರಿಗೆ ಗೌರವದ ಸ್ಥಾನಮಾನ, ನಿರ್ಧಾರ ತೆಗೆದುಕೊಳ್ಳುವ ಅಧಿಕಾರ, ಆರೈಕೆ ಧಾರಾಳವಾಗಿ ಸಿಗುತ್ತಿತ್ತು. ಅಲ್ಲಿ ಎಳೆಯರಿಗೆ 'ಹುಡುಗುಬುದ್ಧಿ' ಪಟ್ಟವಿತ್ತು, ಅವರ ಜೀವನದ ರೂಪುರೇಷೆಗಳನ್ನು ಹಿರಿಯರೇ ನಿರ್ಧರಿಸುತ್ತಿದ್ದರು. ಇದಕ್ಕೆ ತದ್ವಿರುದ್ಧವಾಗಿ, ಇಂದು ನಮ್ಮ ಯುವಜನರು ಸೂತ್ರವಿಲ್ಲದ ಗಾಳಿಪಟದಂತೆ, ಕೈಯಲ್ಲೊಂದು ಸ್ಮಾರ್ಟ್ ಫೋನ್ ಹಿಡಿದು ಪ್ರಪಂಚವನ್ನು ಮರೆತು ಧ್ಯಾನಸ್ಥರಾಗಿರುವಂತೆ ಕಂಡುಬಂದರೆ, ವಯಸ್ಸಾದವರು ತೀವ್ರ ಸಂಕಷ್ಟವಿದ್ದರೂ ಗಣನೆಗೆ ಬಾರದಂತಹ ಸ್ಥಿತಿಯಲ್ಲಿದ್ದಾರೆ. ಹೀಗೆ, ಮಾನಸಿಕ, ದೈಹಿಕ ಮತ್ತು ಆರ್ಥಿಕ ಅಶಕ್ತಿಯ ದಣಿವಿನಲ್ಲಿರುವ ಮನುಷ್ಯನ ಜೀವನದ ಕೊನೆಯ ದಿನಗಳನ್ನು ಸಹನೀಯ ಮತ್ತು ಆನಂದದಾಯಕ ಮಾಡುವ ಹೊಣೆ ಸಮಾಜಕ್ಕೆ ಇದೆಯಲ್ಲವೇ? ಹೀಗಾಗಿ, ಇಂದಿನ ವಯೋವೃದ್ಧರ ಬದುಕಿನ ಸೂಕ್ತ ನಿರ್ವಹಣೆಗಾಗಿ ಇಡೀ ದೇಶಕ್ಕೆ ಅನ್ವಯ ಆಗುವಂತೆ ತುರ್ತಾಗಿ ಕೈಗೆತ್ತಿಕೊಳ್ಳಬೇಕಾದ ಗ್ಯಾರಂಟಿ ಯೋಜನೆಯೊಂದರ ಅಗತ್ಯವಿದೆ ಎನಿಸುತ್ತದೆ.

ವೃದ್ಧಾಪ್ಯದ ದಿನಗಳಿಗೆ ನಮ್ಮ ಪೂರ್ವತಯಾರಿ ಹೇಗಿರಬೇಕು? ನಿಧಿ ಹೂಡಿಕೆ ಮತ್ತು ಉಳಿತಾಯವಷ್ಟೇ ಸಾಕೆ? ದೈಹಿಕ ಮತ್ತು ಮಾನಸಿಕ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಲ್ಲವೇ? ನಿವೃತ್ತಿಯ ನಂತರ ಅನುಭವಿಸುವ ಒತ್ತಾಯಪೂರ್ವಕ ಒಂಟಿತನ, ನಿರುಪಯುಕ್ತತೆಯ ಭಾವ, ಮಾನಸಿಕ ಖಿನ್ನತೆ ಕಾಡಿದಾಗ ಮತ್ತು ಬದುಕು ಹಂಚಿಕೊಂಡವರೆಲ್ಲ ಒಬ್ಬೊಬ್ಬರೇ ಕಣ್ಣೆದುರಿನಲ್ಲೇ ಕಣ್ಮರೆ ಆಗುತ್ತಿರುವಾಗ, ನಮ್ಮನ್ನು ನಾವು ನಿಭಾಯಿಸಿಕೊಳ್ಳುವುದಕ್ಕೆ ಸಿದ್ಧತೆ ಮಾಡಿಕೊಳ್ಳಬೇಕಲ್ಲವೇ?

ಮೂಲತಃ ಸ್ವಕೇಂದ್ರಿತವಾಗಿ ವ್ಯವಹರಿಸುವ ನಮಗಿಂದು, ಮಕ್ಕಳು ನಮ್ಮ ವೃದ್ಧಾಪ್ಯ ಕಾಲದ ಊರುಗೋಲಾಗಿ ಕಂಡರೆ, ವೃದ್ಧರು ಇನ್ನೇನೂ ಪ್ರಯೋಜನಕ್ಕೆ ಬಾರದ ಭೂತಕಾಲದ ಸವಕಲು ನಾಣ್ಯದಂತೆ ಕಾಣಿಸುತ್ತಾರೆ. ಈ ನಿಲುವು, ನಾವು ನಮ್ಮ ಜೀವನ ದೃಷ್ಟಿಯನ್ನು ಬದಲಾಯಿಸಿಕೊಳ್ಳಬೇಕೆಂದು ಒತ್ತಾಯಿಸುತ್ತದೆ. ಲೌಕಿಕ ವ್ಯವಹಾರಗಳಲ್ಲಿ ಮುಳುಗಿರುವ ಮಕ್ಕಳಿಗೆ, ಹೆತ್ತವರೊಂದಿಗೆ ಕಳೆಯಲು ಸಮಯ ಇರುವುದಿಲ್ಲ. ಮೊಮ್ಮಕ್ಕಳೊಂದಿಗೆ ಆಟವಾಡುವ, ಕಥೆ ಹೇಳಬಯಸುವ ತುಡಿತವಿದ್ದರೂ ಅವರ ಶಾಲಾ ಚಟುವಟಿಕೆಗಳ ಒತ್ತಡದಲ್ಲಿ (ಅಥವಾ ಹೆತ್ತವರ ಸೂಚನೆಯಂತೆ) ಅವರಿಗೂ ಹಿರಿಯರೊಂದಿಗೆ ಕಳೆಯಲು ಸಮಯವಿಲ್ಲ. ಜೊತೆಗೆ, ವಯಸ್ಸು ಹೆಚ್ಚಾದಂತೆ ಕಾಡುವ ಆರೋಗ್ಯ ಸಮಸ್ಯೆಗಳಿಗಾಗಿ ಪೋಷಕರಿಗೆ ಮಾಡಬೇಕಾದ ಖರ್ಚುವೆಚ್ಚ, ಆರೈಕೆಗೆ ಅನ್ಯರನ್ನು ಅವಲಂಬಿಸಬೇಕಾದ ಅನಿವಾರ್ಯ ಸಂದರ್ಭಗಳನ್ನು ನಿಭಾಯಿಸುವ ಸಂಯಮ ಮತ್ತು ಕಾಳಜಿ ಮಕ್ಕಳಲ್ಲಿ ಕಾಣಿಸುತ್ತಿಲ್ಲ. ಆದಕಾರಣ, ವಯೋವೃದ್ಧರು ತಮ್ಮ ಇಳಿವಯಸ್ಸಿನಲ್ಲಿ ಎದುರಾಗುವ ತೊಡಕುಗಳನ್ನು ಸಂಭಾಳಿಸಿಕೊಳ್ಳಲು ದುಡಿಯುವ ವಯಸ್ಸಿನಲ್ಲಿಯೇ ಪೂರ್ವಸಿದ್ಧತೆ ಮಾಡಿಕೊಳ್ಳಬೇಕಾದುದು ಅಗತ್ಯ.

ಇಂದಿನ ಮಕ್ಕಳು ತಮ್ಮ ಬಾಲ್ಯ ಮತ್ತು ಹಿರಿಯರ ಈಡೇರದ ಕನಸಿನ ಬಾಲ್ಯ ಎರಡನ್ನೂ ಮೇಳೈಸಿಕೊಂಡು ದೊಡ್ಡವರಾಗಬೇಕಾದ ಒತ್ತಡದಲ್ಲಿದ್ದಾರೆ. ಇದರಿಂದ ಉಂಟಾಗಿರುವ ಪ್ರಮುಖ ಸಮಸ್ಯೆಯೆಂದರೆ, ಹೆತ್ತವರು–ಮಕ್ಕಳ ನಡುವೆ ಎದ್ದಿರುವ ಸಂಬಂಧಗಳ ಪರಕೀಯತೆ. ನಾವು ಪ್ರೀತಿಯ ಬದಲಾಗಿ ಅವರಿಗೆ ಅತ್ಯುತ್ತಮ ವ್ಯವಸ್ಥೆಯನ್ನು ನೀಡುವುದಕ್ಕೆ ಹೋರಾಡುತ್ತೇವೆ. ಹಾಗಾಗಿ, ಅವರು ಕೂಡ ನಮ್ಮ ಇಳಿವಯಸ್ಸಿನಲ್ಲಿ ಪ್ರೀತಿಯ ಬದಲಾಗಿ ಬದುಕುವ ವ್ಯವಸ್ಥೆಯನ್ನಷ್ಟೇ ಮಾಡಿಕೊಟ್ಟು ದೂರವಿದ್ದರೆ ಆಶ್ಚರ್ಯಪಡಬೇಕಾಗಿಲ್ಲ.

ನಾವು ನಮ್ಮ ಭವಿಷ್ಯದ ದಾರಿಯಲ್ಲಿ ರಭಸವಾಗಿ ನಡೆಯುತ್ತಾ, ನಿಧಾನವಾಗಿ ನಡೆಯುವ ನಮ್ಮ ಹೆತ್ತವರನ್ನು ಹಿಂದಕ್ಕೆ ಬಿಟ್ಟು ಮುಂದೆ ಸಾಗುತ್ತೇವೆ. ಅಂತೆಯೇ, ನಮ್ಮ ಮಕ್ಕಳನ್ನು ಸ್ಪರ್ಧಾಯುಗದಲ್ಲಿ ಮುನ್ನುಗ್ಗುವುದಕ್ಕೆ ಬಿಟ್ಟ ನಾವು, ಅವರೆದುರು ಹಳೆಯ ಕಾಲದವರಾಗಿ ಹಿಂದುಳಿದರೆ ಸೋಜಿಗವಿಲ್ಲ.



ಮನಸ್ಸನ್ನು ಗಾಸಿಗೊಳಿಸುವ, ನಿಷ್ಕರುಣೆಯ ವ್ಯವಹಾರದ ಮಾತುಗಳನ್ನು ಮಕ್ಕಳ ಬಾಯಿಂದ ಕೇಳುವ ಪರಿಸ್ಥಿತಿಗಿಂತ, ಅವರಿಗೆ ಭಾರವಾಗದೆ, ಹಂಗಿಲ್ಲದೆ, ತಮ್ಮಿಚ್ಛೆಯಂತೆ, ಕೊನೆಯಪಕ್ಷ ಜೀವನದ ಅಂತಿಮ ದಿನಗಳಲ್ಲಾದರೂ ಲೋಕದ ನಿರೀಕ್ಷೆಗಳ ಭಾರ ಕಳಚಿ ನೆಮ್ಮದಿಯಿಂದ ಬದುಕಲು ಮಾನಸಿಕ ಸಿದ್ಧತೆಯ ಅಗತ್ಯವಿದೆ. ಇದಕ್ಕಾಗಿ, 'ನಿನಗೆ ನೀನೇ ದಾರಿದೀಪ' ಎಂಬ ಬುದ್ಧನ ಮಾತನ್ನು ಅಂತರ್ಗತಗೊಳಿಸಿಕೊಳ್ಳುವುದು, ಮಕ್ಕಳನ್ನು ಬೆಳೆಸುವುದು ನಮ್ಮ ಆನಂದಕ್ಕಾಗಿಯೇ ವಿನಾ ಅವರಿಗೆ ಭಾರವಾಗುವುದಕ್ಕಾಗಿ ಅಲ್ಲ ಎನ್ನುವ ನಿರ್ಲಿಪ್ತತೆಯನ್ನು ಮೈಗೂಡಿಸಿಕೊಳ್ಳುವುದು ಅಗತ್ಯ. ಇಂತಹ ಮಾನಸಿಕ ಪೂರ್ವಸಿದ್ಧತೆಯನ್ನು ಹಿರಿಯರಲ್ಲಿ ಬೆಳೆಸುವ ಕಾರ್ಯಕ್ರಮಗಳು ಮತ್ತು ಯೋಜನೆಗಳು ಹೆಚ್ಚು ಜನಪ್ರಿಯ ಹಾಗೂ ಸಾಮೂಹಿಕ ಆಂದೋಲನವಾಗಬೇಕಾಗಿದೆ.


ವೃದ್ಧಾಪ್ಯದಲ್ಲಿ ಸಹಜವಾಗಿ ಕಾಣಿಸಿಕೊಳ್ಳುವ ಕಾಯಿಲೆಗಳು ದೀರ್ಘಕಾಲದವರೆಗೆ ನಮ್ಮ ಮೈಮನಸ್ಸುಗಳನ್ನು ಕಾಡಿದಾಗ, ಪರಾವಲಂಬನೆ ಅನಿವಾರ್ಯವಾದಾಗ, ಆರ್ಥಿಕ ಪರಿಸ್ಥಿತಿ ಹದಗೆಟ್ಟಾಗ, ಬದುಕು ಹತಾಶೆಗೆ ಮತ್ತು ಖಿನ್ನತೆಗೆ ತಳ್ಳಲ್ಪಡುತ್ತದೆ. ಹಾಗಾಗಿ, ದೈಹಿಕ ವ್ಯಾಯಾಮ ಮತ್ತು ಸ್ವನಿಯಂತ್ರಿತ ಊಟೋಪಚಾರವನ್ನು ನಮ್ಮ ದೈನಂದಿನ ಜೀವನದ ಭಾಗವಾಗಿಸಿ-ಕೊಂಡಲ್ಲಿ, ಹೆಚ್ಚಿನ ವಯೋಸಂಬಂಧಿ ಕಾಯಿಲೆಗಳನ್ನು ಸೈರಿಸಿಕೊಂಡು ಸ್ವಾವಲಂಬಿಯಾಗಿ ಬದುಕುವಷ್ಟು ದೈಹಿಕ ಶಕ್ತಿಯನ್ನು ಉಳಿಸಿಕೊಳ್ಳಬಹುದು.

ನಮ್ಮನ್ನು ನಾವು ನೋಡಿಕೊಳ್ಳುವಷ್ಟು ಆರ್ಥಿಕ ಅನುಕೂಲ ಹೊಂದಿದ್ದರೆ ಆತ್ಮವಿಶ್ವಾಸದಿಂದ ಬದುಕಲು ಭರವಸೆ ದೊರೆಯುತ್ತದೆ. ನಾವು ಮಕ್ಕಳನ್ನು ಪ್ರೀತಿಸಬೇಕು ನಿಜ, ಆದರೆ, ನಮ್ಮೆಲ್ಲಾ ಆರ್ಥಿಕ ಮೂಲಗಳನ್ನು ಅವರಿಗೆ ಹಸ್ತಾಂತರಿಸುವ ಬದಲು, ನಮ್ಮ ಜೀವನ ನಿರ್ವಹಣೆಗೆ ಆಗುವಷ್ಟನ್ನು ನಮ್ಮ ಕೈಯಲ್ಲೇ ಉಳಿಸಿಕೊಂಡಲ್ಲಿ, ಎಂತಹ ಅನಿಶ್ಚಿತ ಸ್ಥಿತಿಯನ್ನಾದರೂ ಎದುರಿಸುವ ಧೈರ್ಯ ಬರುತ್ತದೆ.

ವೃದ್ಧಾಶ್ರಮಗಳನ್ನು ಅನಾಥಾಶ್ರಮಗಳೆಂದೇ ನಾವಿಂದು ಪರಿಗಣಿಸುತ್ತೇವೆ. ಈ ಪರಿಕಲ್ಪನೆಯನ್ನು ಬದಲಾಯಿಸಿ, ಇವುಗಳನ್ನು ಜೀವನದ ಕೊನೆಯ ದಿನಗಳನ್ನು ಸಾಮೂಹಿಕವಾಗಿ ಆನಂದಮಯವಾಗಿ ಕಳೆಯುವ ತಾಣಗಳನ್ನಾಗಿಸಬೇಕಾಗಿದೆ. ವೃದ್ಧಾಶ್ರಮಗಳು ಇಂದು ಅನಾಥರಿಗೆ ಮಾತ್ರವಲ್ಲ ಒಂಟಿತನ ಅನುಭವಿಸುವ ಉಳ್ಳವರಿಗೂ ಅಗತ್ಯವಾಗಿವೆ. ಹಾಗಾಗಿ, ವೃದ್ಧಾಶ್ರಮಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತೆರೆದು, ಅವು ಕೊಡುವ ಸೌಕರ್ಯಕ್ಕೆ ಅನುಗುಣವಾಗಿ ವಯೋವೃದ್ಧರು ಅವುಗಳನ್ನು ಆಯ್ಕೆ ಮಾಡಿಕೊಳ್ಳುವಂತಹ ಪ್ರಕ್ರಿಯೆಗಳನ್ನು ಸಾಮಾನ್ಯವಾಗಿಸಬೇಕು. ಆಗ ವೃದ್ಧಾಶ್ರಮಗಳಲ್ಲಿ ಯಾವ ಹಂಗಿಲ್ಲದೆ ನೆಮ್ಮದಿಯಿಂದ ಸಮವಯಸ್ಕರೊಂ-ದಿಗೆ ದಿನಗಳೆಯಲು ಹೆಚ್ಚು ಜನರು ಮುಂದೆ ಬಂದಾರು.

ಅನಿವಾರ್ಯ ಕಾರಣಗಳಿಂದ ಹೆತ್ತವರನ್ನು ನೋಡಿ-ಕೊಳ್ಳಲಾಗದ ಮಕ್ಕಳು ಕೂಡ ಉತ್ತಮ ಸೌಕರ್ಯವಿರುವ ವೃದ್ಧಾಶ್ರಮಗಳಲ್ಲಿ ಹೆತ್ತವರನ್ನು ಬಿಟ್ಟು, ಅದರ ಖರ್ಚುವೆಚ್ಚ ಭರಿಸಿ, ನಿರಂತರವಾಗಿ ಭೇಟಿ ನೀಡುವುದರ ಮೂಲಕ ತಮ್ಮ ಋಣ ತೀರಿಸಬಹುದು. ಇದು, ಒಟ್ಟಿಗಿದ್ದೂ ದಿನಾ ಕಿತ್ತಾಡುತ್ತಾ ಬದುಕುವುದಕ್ಕಿಂತ ಮೇಲು. ಇಂತಹ, ಮನಃಪರಿವರ್ತನೆಯು ಸಾಮುದಾಯಿಕವಾಗಿ ಆಗಬೇಕಾದುದು ಇಂದಿನ ತುರ್ತು.

ಚುರುಮುರಿ



ಸಲಹಾ ಸಂಪುಟ!

• ಚಂದ್ರಕಾಂತ ವಡ್ಡು

'ಅಮ್ಮ... ಅಪ್ಪನಿಗೆ ವ್ಯವಹಾರ ಜ್ಞಾನವೇ ಇಲ್ಲ. ಮನೆಕೆಲಸದ ಶಿವಮ್ಮನಿಗೆ ಸುಖಾಸುಮ್ಮನೆ 500 ರೂಪಾಯಿ ಜಾಸ್ತಿ ಮಾಡ್ಯಾರ...' ತಿಂಗಳೇಶನ ಬಗ್ಗೆ ಮಗನ ಆಕ್ಷೇಪ.

'ಅವರದು ಬರೀ ಇದೇ ಕಥೆ. ಮೊನ್ನೆ ಅವರ ಅಣ್ಣನ ಮಗನ ಕಾಲೇಜು ಫೀಜಿಗೆ ಅಂತ ಹತ್ತು ಸಾವಿರ ಕಳಿಸಿದ್ದಾರೆ' ಅಮ್ಮನ ವರಾತ.

'ಪಕ್ಕದ ಮನೆ ಅಂಕಲ್‌ಗೆ ಕರೆಂಟ್ ಬಿಲ್ ಕಟ್ಟಾಕ ಅಂತ ಎರಡು ಸಾವಿರ ಕೊಟ್ಟದ್ದಾರೆ'.

'ಅಯ್ಯೋ... ಬರಗಾಲ ಐತಿ, ಹಳ್ಳಿಯಲ್ಲಿ ನಮ್ಮ ಹೊಲ ಮಾಡುವ ರೈತನಿಗೆ ಈ ವರ್ಷ ಹಣ ಕೇಳೋದು ಬೇಡ ಅಂತ ಶುರು ಮಾಡಿದ್ದರು. ನಾನೇ ನಿಲ್ಲಿಸೇನಿ'.

'ಅಪ್ಪನಿಗೆ ದಾನಶೂರ ಕರ್ಣ ಅನ್ನಿಸಿಕೊಳ್ಳುವ ಚಟ. ಗೃಹಸಾಲ ಬೇಗ ತೀರಿಸುವ ಬಗ್ಗೆ ಒಂದಿಷ್ಟೂ ಕಾಳಜಿಯಿಲ್ಲ. ನಮ್ಮ ಮೇಲೆ ಸಾಲದ ಹೊರೆ ಹಾಕುತ್ತಾರಷ್ಟೇ'.

'ಅಷ್ಟೇ ಅಲ್ಲ, ಸಂಬಂಧಿಕರೆಲ್ಲಾ ಸೇರಿದ ಸಮಾರಂಭಗಳಲ್ಲಿ ಏನೇನೋ ಮಾತಾಡಿ, ಆಡಿಕೊಳ್ಳುವವರ ಬಾಯಿಗೆ ಆಹಾರ ಆಗ್ತಾರೆ'.

'ಅಂಗಡಿಯಲ್ಲಿ ಸರಿಯಾಗಿ ಚೌಕಾಸಿ ಮಾಡಲೂ ಬರುವುದಿಲ್ಲ' ಮಗಳೂ ದನಿ ಸೇರಿಸಿದಳು.

'ಅಪ್ಪನಿಗೆ ಒಳ್ಳೆಯ ಸಲಹೆಗಾರರ ಅವಶ್ಯಕತೆ ಇದೆ. ಹಾಗೇ ಬಿಟ್ಟರೆ ನಮ್ಮ ಕುಟುಂಬ ದಿವಾಳಿ ಆಗೋದು ಗ್ಯಾರಂಟಿ' ಮಗ ಎಚ್ಚರಿಕೆಯ ಗಂಟೆ ಮೊಳಗಿಸಿದ. ಸರ್ವಾನುಮತದ ತೀರ್ಮಾನದಂತೆ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು? ಎಂದಿನಂತೆ ಅಮ್ಮ ಮುಂದಾದಳು.

'ರೀ... ಮಕ್ಕಳು ದೊಡ್ಡವರಾಗಿದ್ದಾರೆ, ನಿಮ್ಮ ಮನಸ್ಸಿಗೆ ಬಂದಂತೆ ತೀರ್ಮಾನ ತೆಗೆದುಕೊಳ್ಳಬೇಡಿ. ಇನ್ನುಮೇಲೆ ಹಣಕಾಸು ವಿಷಯದಲ್ಲಿ ಮಗಳು, ಬಿಸಿನೆಸ್ ಬಗ್ಗೆ ಮಗ ಮತ್ತು ಸಂಬಂಧಿಕರಿಗೆ ನೆರವು ಕುರಿತು ನನ್ನ ಮಾತು ಕೇಳಿ ಮುಂದುವರಿಯಿರಿ'.

'ನಿಮ್ಮನ್ನೆಲ್ಲಾ ಸಲಹೆಗಾರರನ್ನಾಗಿ ನೇಮಿಸಿಕೊಂಡು ಸಂಸಾರ ನಡೆಸಲು ನಾನೇನು ಮುಖ್ಯಮಂತ್ರಿ ಸಿದ್ರಾಮಣ್ಣ ಅಲ್ಲ. ನೀವು 'ಸಲಹಾ ಸಂಪುಟ' ಸೇರುವ ಕನಸು ಬಿಟ್ಟುಬಿಡಿ!' ದುರುಗುಟ್ಟಿ ಎದ್ದುಹೋದ ತಿಂಗಳೇಶ.

ಸಂಗತ

ಮಕ್ಕಳಸ್ನೇಹಿ ತರಗತಿ: ಬೇಕು ಖಾತರಿ

ಮಕ್ಕಳು ಮಧ್ಯದಲ್ಲೇ ಶಾಲೆ ತೊರೆಯುವುದಕ್ಕೆ ಅಥವಾ ಕಲಿಕೆಯಲ್ಲಿ ಹಿಂದೆ ಉಳಿಯುವುದಕ್ಕೆ ಕಾರಣಗಳನ್ನು ಕಂಡುಕೊಂಡು ನಿವಾರಣೆಯತ್ತ ಗಮನಹರಿಸಬೇಕಿದೆ

• ಎಚ್.ಬಿ.ಚಂದ್ರಶೇಖರ್

ಕೆಲವು ದಿನಗಳ ಹಿಂದೆ ಅಂಗಡಿಯೊಂದರಲ್ಲಿ, ಮಗನೊಟ್ಟಿಗೆ ಬಂದಿದ್ದ ತಾಯಿಯನ್ನು ಗಮನಿಸಿದೆ. ಮುಖದಲ್ಲಿದ್ದ ಆಯಾಸ, ಮಾಸಿದ ಕೂದಲನ್ನು ಕಂಡು, ಆ ಬಾಲಕ ಕಟ್ಟಡ ಕಾರ್ಮಿಕನಿರಬಹುದು ಎಂದು ಊಹಿಸಿ, ಆತನ ಪೂರ್ವಾಪರ ವಿಚಾರಿಸಿದೆ. ರಾಯಚೂರು ಜಿಲ್ಲೆಯ ಹಳ್ಳಿಯೊಂದರಿಂದ ಬಂದಿರುವುದಾಗಿಯೂ ಮನೆಯವರು ಮಾಡಿಕೊಂಡಿರುವ ಸಾಲವನ್ನು ತೀರಿಸುವ ಸಲುವಾಗಿ ಮೂರ್ನಾಲ್ಕು ತಿಂಗಳುಗಳ ಕಾಲ ಬೆಂಗಳೂರಿನಲ್ಲಿದ್ದು ಕಟ್ಟಡ ನಿರ್ಮಾಣ ಕೆಲಸ ಮಾಡುತ್ತಿರುವುದಾಗಿಯೂ ತಾಯಿ ತಿಳಿಸಿದಳು. ಊರಿನಲ್ಲಿ 8ನೇ ತರಗತಿ ಓದುತ್ತಿದ್ದ ಬಾಲಕ ಕೆಲ ತಿಂಗಳ ಹಿಂದೆಯೇ ಶಾಲೆಯನ್ನು ಬಿಟ್ಟಿದ್ದ. ಬೆಂಗಳೂರಿನಲ್ಲಿ ಮತ್ತೆ ಶಾಲೆಗೆ ಸೇರಿಸುವುದಾಗಿ ನಾನು ಹಲವು ಬಾರಿ ಮನವೊಲಿಸಲು ಪ್ರಯತ್ನಿಸಿದರೂ 'ಬ್ಯಾಡ ಸಾರ್, ಸಾಲೆ ಒಲ್ಲೆ' ಎಂದೇ ಹೇಳಿದ.

ಬಡತನ, ನಿರುದ್ಯೋಗದಂತಹ ಕಾರಣಗಳಿಂದ ಉತ್ತರ ಕರ್ನಾಟಕ ಹಾಗೂ ಇತರ ಭಾಗಗಳಿಂದ ಜನ ಬೆಂಗಳೂರು, ಗೋವಾದಂತಹ ನಗರ ಪ್ರದೇಶಗಳಿಗೆ ವಲಸೆ ಹೋಗುವುದು ಸಾಮಾನ್ಯ. ಆಗ ಇಂತಹ ಪೋಷಕರ ಜೊತೆ ತಾವೂ ತೆರಳುವ ಕೆಲವು ಮಕ್ಕಳು ಶಾಲೆ ತೊರೆಯುತ್ತಾರೆ. ಸ್ವಲ್ಪ ಕಾಲಾನಂತರ ಆ ಕುಟುಂಬಗಳು ತಮ್ಮ ಗ್ರಾಮಗಳಿಗೆ ಹಿಂದಿರುಗಿದರೂ ದೀರ್ಘಾವಧಿಯಲ್ಲಿ ಶಾಲೆಯನ್ನು ತಪ್ಪಿಸಿದ್ದರಿಂದ ಹೆಚ್ಚಿನ ಮಕ್ಕಳು ಮರಳಿ ಶಾಲೆಗೆ ಹಾಜರಾಗುವ ಗೋಜಿಗೆ ಹೋಗುವುದಿಲ್ಲ.

ವಾಸಸ್ಥಳದ ಬಗ್ಗೆ ಸ್ಥಿರತೆ ಇಲ್ಲದಿರುವುದು, ಬಾಲಕಾರ್ಮಿಕರಾಗಿ ತಮ್ಮ ತಂದೆ–ತಾಯಿ ಜೊತೆ ಕೆಲಸ ಮಾಡಬೇಕಾದ ಅನಿವಾರ್ಯ ಸಂದರ್ಭಗಳು ಸೃಷ್ಟಿಯಾಗುವುದು ಅಥವಾ ತಮ್ಮ–ತಂಗಿಯರನ್ನು ನೋಡಿಕೊಳ್ಳುವ ಸಲುವಾಗಿಯೂ ಕೆಲವು ಮಕ್ಕಳ ಶಾಲಾ ಶಿಕ್ಷಣ ಮೊಟಕುಗೊಳ್ಳುತ್ತದೆ.

ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಮುಸ್ಲಿಂ ಸಮುದಾಯದ ಮಕ್ಕಳು, ವಿವಿಧ ವರ್ಗಗಳ ಹೆಣ್ಣುಮಕ್ಕಳ ಜೊತೆಗೆ ಕುಟುಂಬ ವಂಚಿತರಾದ ಬೀದಿ ಮಕ್ಕಳು, ಅಂಗವಿಕಲ ಮಕ್ಕಳು ಮಧ್ಯದಲ್ಲಿ ಶಾಲೆಯನ್ನು ತೊರೆಯುವುದು ಹೆಚ್ಚು ಎಂದು ವಿವಿಧ ಅಧ್ಯಯನಗಳು ನಮಗೆ ತಿಳಿಸುತ್ತವೆ.

ಕೇಂದ್ರ ಸರ್ಕಾರವು 2021-22ರಲ್ಲಿ ಪ್ರಕಟಿಸಿರುವ ಅಂಕಿ ಅಂಶಗಳ ಪ್ರಕಾರ, ರಾಜ್ಯದಲ್ಲಿ ಪ್ರೌಢಶಾಲಾ ಹಂತದಲ್ಲಿ (9-10ನೇ ತರಗತಿ) ಮಕ್ಕಳ ಶಾಲೆ ಬಿಡುವ ಪ್ರಮಾಣವು ಶೇಕಡ 14.7ರಷ್ಟು ಇದೆ. ಶಾಲೆ ಬಿಡುವ ಮಕ್ಕಳ ರಾಷ್ಟ್ರೀಯ ಸರಾಸರಿ ಪ್ರಮಾಣಕ್ಕಿಂತ (ಶೇ 12.6) ಇದು ಹೆಚ್ಚು. ಒಡಿಶಾ ರಾಜ್ಯವು ಪ್ರೌಢಶಾಲಾ ಹಂತದಲ್ಲಿ ದೇಶದಲ್ಲಿ ಅತಿಹೆಚ್ಚು ಶಾಲೆ ಬಿಡುವವರ ಪ್ರಮಾಣವನ್ನು (ಶೇ 27.3) ಹೊಂದಿದೆ. ನಂತರದ ಸ್ಥಾನಗಳಲ್ಲಿ ಮೇಘಾಲಯ (ಶೇ 21.7), ಬಿಹಾರ (ಶೇ 20.5), ಅಸ್ಸಾಂ (ಶೇ 20.3) ರಾಜ್ಯಗಳು ಇವೆ. ಇದೇ ವರದಿಯಲ್ಲಿ 2020-21 ಮತ್ತು 2021-22ರಲ್ಲಿ ಪೂರ್ವಪ್ರಾಥಮಿಕ ಹಂತದಿಂದ 12ನೇ ತರಗತಿಯವರೆಗೆ ದಾಖಲಾಗಿದ್ದ ಮಕ್ಕಳ ಸಂಖ್ಯೆಯನ್ನು ನೀಡಲಾಗಿದೆ. ಅದರ ಪ್ರಕಾರ, ಅಲ್ಪಸಂಖ್ಯಾತರನ್ನು ಹೊರತುಪಡಿಸಿ ಉಳಿದ ಎಲ್ಲ ಜಾತಿ-ಸಮುದಾಯಗಳ ಮಕ್ಕಳ ದಾಖಲಾತಿ ಪ್ರಮಾಣದಲ್ಲಿ ಹೆಚ್ಚಳ ಕಂಡುಬಂದಿದೆ. ಅಲ್ಪಸಂಖ್ಯಾತ ವರ್ಗದ ಮಕ್ಕಳ ದಾಖಲಾತಿ ಪ್ರಮಾಣ ಮಾತ್ರ ಕಡಿಮೆಯಾಗಿದೆ ಎಂಬುದು ಗಮನಾರ್ಹ.

ಸ್ವಾತಂತ್ರ್ಯಪೂರ್ವ ಭಾರತದಲ್ಲಿ 9 ಶಿಕ್ಷಣ ಆಯೋಗಗಳು ನೀಡಿದ ವರದಿಗಳಲ್ಲಿ ಶಾಲಾ ಶಿಕ್ಷಣಕ್ಕೆ ಹೆಚ್ಚಿನ ಒತ್ತು ಸಿಗಲಿಲ್ಲ. ಸ್ವಾತಂತ್ರ್ಯಾನಂತರ ರಚನೆಯಾದ ಶಿಕ್ಷಣ ಆಯೋಗಗಳು ನೀಡಿದ ವರದಿಗಳಿಂದಾಗಿ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ–1968 ಹಾಗೂ 1986, ಸರ್ವಶಿಕ್ಷಣ ಅಭಿಯಾನ ಹಾಗೂ ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆಯ ಫಲವಾಗಿ ದೇಶದ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ತಕ್ಕಮಟ್ಟಿಗೆ ಪ್ರಗತಿ ಆಗಿರುವುದನ್ನು ಅಲ್ಲಗಳೆಯಲಾಗದು. ಆದರೆ ಶಿಕ್ಷಣದ ಖಾತರಿಯನ್ನು ಎಲ್ಲ ವರ್ಗದ ಮಕ್ಕಳಿಗೂ ಸಮಾನ ನೆಲೆಯಲ್ಲಿ ದೊರಕಿಸಿಕೊಡಲು ಸಾಧ್ಯವಾಗಿಲ್ಲ. ಈ ನ್ಯೂನತೆಯನ್ನು ನಿವಾರಿಸುವ ಕೆಲಸ ಆಗಬೇಕಾಗಿದೆ.



ಶೈಕ್ಷಣಿಕ ವ್ಯವಸ್ಥೆಯು ಶಾಲೆಗಳ ಲಭ್ಯತೆಯನ್ನು ಖಾತರಿಪಡಿಸಿಕೊಳ್ಳಲು ಸಫಲವಾಗಿರುವುದನ್ನು ಗಮನಿಸಬಹುದು. ಆದರೆ ಕೆಲವು ವರ್ಗಗಳ ಮಕ್ಕಳು ಶಾಲೆಗೆ ಹಾಜರಾಗದೇ ಇರುವುದಕ್ಕೆ ಅಥವಾ ಹಾಜರಾದರೂ ಕಲಿಕೆಯಲ್ಲಿ ಯಶಸ್ಸು ಸಾಧಿಸದೇ ಇರುವುದಕ್ಕೆ ಇರಬಹುದಾದ ಸಾಮಾಜಿಕ, ಆರ್ಥಿಕ ಅಥವಾ ಸಾಂಸ್ಕೃತಿಕ ಕಾರಣಗಳನ್ನು ಕಂಡುಕೊಳ್ಳದೇ ಇದ್ದಲ್ಲಿ ಪೂರ್ಣ ಪ್ರಗತಿ ಸಾಧಿಸಲು ಸಾಧ್ಯವಾಗದು.

ಎಷ್ಟೋ ಬಾರಿ ಸೂಕ್ಷ್ಮ ಮನೋಭಾವ ಹೊಂದಿಲ್ಲದ ಶಿಕ್ಷಕರ ವರ್ತನೆಗಳು, ಆಸಕ್ತಿ ಕೆರಳಿಸದ ತರಗತಿ ಪ್ರಕ್ರಿಯೆಗಳು ಸಹ ಮಕ್ಕಳು ಶಾಲೆಯಿಂದ ಹೊರಗುಳಿಯುವಂತೆ ಮಾಡುತ್ತವೆ. ಮಕ್ಕಳ ವೈವಿಧ್ಯದ ಹಿನ್ನೆಲೆಯನ್ನು ಯಶಸ್ವಿಯಾಗಿ ಕಂಡುಕೊಂಡು, ಅದಕ್ಕೆ ತಕ್ಕಂತೆ ಅನುಭೂತಿಯಿಂದ ಸ್ಪಂದಿಸುವುದು ಹೆಚ್ಚು ಪರಿಣಾಮಕಾರಿ ಆಗಬಲ್ಲದು.

ಮಕ್ಕಳ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಿನ್ನೆಲೆ ಹಾಗೂ ಅನನ್ಯತೆಯನ್ನು ಗುರುತಿಸುವುದು ಮತ್ತು ಅನನುಕೂಲ ಹೊಂದಿರುವ ಮಕ್ಕಳನ್ನು ನಿರ್ದಿಷ್ಟವಾಗಿ ಗುರುತಿಸಿ, ಅದಕ್ಕೆ ತಕ್ಕಂತೆ ಶಾಲೆ ಹಾಗೂ ತರಗತಿಯ ಪ್ರಕ್ರಿಯೆಗಳನ್ನು ಮಕ್ಕಳಸ್ನೇಹಿಯಾಗಿ ರೂಪಿಸುವುದು ಎಲ್ಲಾ ವರ್ಗಗಳ ಮಕ್ಕಳ ಶಿಕ್ಷಣವನ್ನು ಖಾತರಿಪಡಿಸುವಲ್ಲಿ ಪರಿಣಾಮಕಾರಿ ಆಗಲಿದೆ.

ವಾಚಕರ ವಾಣಿ

ಟೈರ್‌ಗೆ ಬೆಂಕಿ: ನಿಮ್ಮನ್ನೇ ಸುಟ್ಟೀತು!

ಪ್ರತಿಭಟನೆಗೆ ಮುಂದಾಗುವ ಹೆಚ್ಚಿನವರು ಟೈರ್‌ಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸುವುದು ಸಾಮಾನ್ಯ ಸಂಗತಿಯಾಗಿದೆ. ಚಳವಳಿ, ಧರಣಿ, ಪ್ರತಿಭಟನೆ ಮಾಡುವುದು ತಪ್ಪಲ್ಲ. ಭಾರತದ ಸಂವಿಧಾನವು ಪ್ರತಿಯೊಬ್ಬ ಪ್ರಜೆಗೂ ಇಂತಹ ಅವಕಾಶವನ್ನು ನೀಡಿದೆ. ಆದರೆ ಟೈರ್ ಸುಡುವುದು, ವಾಹನಗಳಿಗೆ ಬೆಂಕಿ ಹಚ್ಚುವುದಕ್ಕೆ ಅವಕಾಶ ಇದೆಯೇ?

ವಾಹನಗಳಿಗೆ ಬೆಂಕಿ ಹಚ್ಚಿದರೆ ರಾಜ್ಯಕ್ಕೆ, ರಾಷ್ಟ್ರಕ್ಕೆ ಮಾತ್ರ ನಷ್ಟವಲ್ಲ, ಅದರ ಹೊರೆ ಪ್ರಜೆಗಳ ಮೇಲೆ ಬೀಳುತ್ತದೆ ಎಂಬ ಅರಿವು ಇರಬೇಕು. ಟೈರ್‌ಗೆ ಬೆಂಕಿ ಹಾಕಿದರೆ ವಾಯುಮಾಲಿನ್ಯ ಉಂಟಾಗಿ, ಅದರಿಂದ ಸಕಲ ಜೀವರಾಶಿಗೆ ಅಪಾಯವೇ ಹೆಚ್ಚು. ಈ ಸತ್ಯವನ್ನು ಪ್ರತಿಭಟನಕಾರರು ಅರಿಯಬೇಕು. ಇಂತಹ ಕೃತ್ಯ ಎಸಗುವವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದು ಸೂಕ್ತ.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

ಪ್ರಾಣಿ– ಪಕ್ಷಿ ಪ್ರತಿಭಟನೆ ನಡೆಸುವಂತಿದ್ದರೆ...

'ಸದ್ದು, ಸಂಭ್ರಮ, ಸಂಕಟ' ಎಂಬ ಲೇಖನದಲ್ಲಿ (ಸಂಗತ, ಜ. 3) ಡಾ. ಮುರಳೀಧರ ಕಿರಣಕೆರೆ ಅವರು ಸ್ಪಷ್ಟವಾಗಿ ತಿಳಿಸಿರುವಂತೆ, ಪಟಾಕಿ ಹಚ್ಚುವ ಸಂದರ್ಭದಲ್ಲಿ ಪ್ರಾಣಿ, ಪಕ್ಷಿಗಳು ಅನುಭವಿಸುವ ಸಂಕಟವು ಪದಗಳಿಗೆ ನಿಲುಕದು. ವಿಪರೀತ ಸದ್ದು ಮಾಡುವ, ಪರಿಸರಕ್ಕೂ ಮಾರಕವಾಗಿರುವ ಸಿಡಿಮದ್ದುಗಳನ್ನೇ ನಿಷೇಧ ಮಾಡುವಂತಹ ಕಠಿಣ ನಿರ್ಧಾರಕ್ಕೆ ಸರ್ಕಾರ ಎಂದಿಗೂ ಕೈ ಹಾಕಲಾರದು. ಇಂತಹ ಪಟಾಕಿಗಳನ್ನು ತಯಾರಿಸುವ ಕಂಪನಿಗಳಿಂದ ದೊರಕುವ ತೆರಿಗೆಯ ಮೇಲೇ ಸರ್ಕಾರಕ್ಕೆ ಕಣ್ಣಿರುತ್ತದೆ. ಅಲ್ಲಿ ಲಕ್ಷಾಂತರ ಮಂದಿಗೆ ಉದ್ಯೋಗವೂ ದೊರಕುವ ಕಾರಣ, ಪ್ರಾಣಿ, ಪಕ್ಷಿ, ಮರ ಗಿಡಗಳಿಗಾಗುವ ಅತೀವ ತೊಂದರೆ, ಪರಿಸರ ಮಾಲಿನ್ಯ ಇವೆಲ್ಲ ನಗಣ್ಯ. ಅಂದಹಾಗೆ, ತೊಂದರೆ ಅನುಭವಿಸುವ ಮುಗ್ಧ ಪ್ರಾಣಿ, ಪಕ್ಷಿ, ಮರ ಗಿಡಗಳು ಗುಂಪು ಕಟ್ಟಿಕೊಂಡು ಪ್ರತಿಭಟನೆ ನಡೆಸುವಂತಿದ್ದರೆ ಸರ್ಕಾರ ಏನು ಮಾಡುತ್ತಿತ್ತೋ ಏನೋ?

ಬಿ.ಎನ್.ಭರತ್, ಬೆಂಗಳೂರು

ಅರಿಯಬೇಕಿದೆ ಹೇಳಿಕೆಯ ಮರ್ಮ

ಅಯೋಧ್ಯೆಯ ರಾಮಮಂದಿರದ ಉದ್ಘಾಟನೆಗೆ ಸಿದ್ಧತೆ ನಡೆದಿರುವ ಸಂದರ್ಭದಲ್ಲೇ, ಮೂವತ್ತು ವರ್ಷ ಹಳೆಯದಾದ ಪ್ರಕರಣದಲ್ಲಿ ಕರಸೇವಕರ ಬಂಧನವಾಗಿರುವುದು ಕಾಕತಾಳೀಯ. ಆದರೆ ಇದು ಬಿಜೆಪಿಯ ಬಾಯಿಗೆ ಆಹಾರವಾಗಿದ್ದರೆ, ಕಾಂಗ್ರೆಸ್‌ಗೆ ನುಂಗಲಾರದ ತುತ್ತಾಗಿದೆ.

ರಾಜಕಾರಣಿಗಳು ಏನೇ ಹೇಳಿಕೊಂಡರೂ ಪ್ರಕರಣದ ಬಗೆಗಿನ ವಾಸ್ತವಾಂಶವನ್ನು ಜನ ಅರಿತರೆ ಒಳ್ಳೆಯದು. ಬಾಕಿ ಇರುವ ಪ್ರಕರಣಗಳ ಇತ್ಯರ್ಥಕ್ಕೆ ನ್ಯಾಯಾಲಯವು ಸರ್ಕಾರಕ್ಕೆ ಸೂಚನೆ ನೀಡಿದ್ದು, ಈ ವಿಚಾರವಾಗಿ ಅಧೀನ ಕಾರ್ಯದರ್ಶಿಯವರಿಗೂ ನೋಟಿಸ್ ಜಾರಿಯಾಗಿದೆ. ಅದರಂತೆ ಪೊಲೀಸ್ ಇಲಾಖೆ ಕ್ರಮ ಕೈಗೊಂಡಿದೆ ಅಷ್ಟೇ. ಆದರೆ, ಎಸ್‌ಡಿಪಿಐನಂತಹ ಸಂಘಟನೆಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ವಾಪಸ್ ಪಡೆದಿರುವ ಸರ್ಕಾರ, ರಾಮಭಕ್ತರನ್ನು ಮಾತ್ರ ಬಂಧಿಸುತ್ತಿದೆ ಎಂದು ಕೆಲವರು ಆರೋಪಿಸುತ್ತಿದ್ದಾರೆ. ಈಗ ಹೀಗೆ ಆರೋಪಿಸುವ ಬದಲು, ಬಿಜೆಪಿ ನೇತೃತ್ವದ ಸರ್ಕಾರದ ಆಡಳಿತದ ಅವಧಿಯಲ್ಲಿ ಈ ಪ್ರಕರಣಗಳನ್ನು ವಾಪಸ್ ಪಡೆಯಬಹುದಿತ್ತಲ್ಲವೇ? ಅದನ್ನು ಮಾಡದೆ ಈಗ ಎಲ್ಲಿಲ್ಲದ ಪ್ರೀತಿ ತೋರಿಸುತ್ತಿರುವುದರ ಮರ್ಮವನ್ನು ಜನ ಅರಿತರೆ, ರಾಜಕಾರಣಕ್ಕೆ ತಾವು ಬಳಕೆಯಾಗಿ ಕೋಮು ಸಂಘರ್ಷಕ್ಕೆ ಎಡೆ ಮಾಡುವುದನ್ನು ತಪ್ಪಿಸಬಹುದು.

ಜಾತಿ, ಧರ್ಮದ ಹೆಸರಿನಲ್ಲಿ ವಿಷಬೀಜ ಬಿತ್ತಿ, ವಿವಾದ ಸೃಷ್ಟಿಸಿ, ಚುನಾವಣೆಯಲ್ಲಿ ಗೆಲ್ಲುವುದೊಂದೇ ರಾಜಕಾರಣಿಗಳ ಗುರಿ. ಇದಕ್ಕೆ ಬಲಿಯಾಗುವುದು ಆಯಾ ಪಕ್ಷಗಳ ಕಾರ್ಯಕರ್ತರೇ ವಿನಾ ನಾಯಕರಲ್ಲ. ಎಲ್ಲ ಪಕ್ಷಗಳ ನಾಯಕರೂ ಅಭಿವೃದ್ಧಿಯ ವಿಚಾರಗಳನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸಬೇಕೇ ವಿನಾ ಜಾತಿ, ಧರ್ಮವನ್ನು ಆಧಾರವಾಗಿ ಇಟ್ಟುಕೊಂಡಲ್ಲ.

ದಡದಹಳ್ಳಿ ರಮೇಶ್, ಚಂದಕವಾಡಿ, ಚಾಮರಾಜನಗರ

ಕಹಿ ಸತ್ಯ ಸಾರುವ ಆ ಮಾತು

ಕಾಲಚಕ್ರ ಉರುಳಿದರೂ ಸಾಮಾಜಿಕ ವ್ಯಾಧಿಗಳು ಹಾಗೇ ಉಳಿದುಕೊಂಡಿವೆ ಎನ್ನುವುದನ್ನು ಮಾಜಿ ಮುಖ್ಯಮಂತ್ರಿ ಕಡಿದಾಳ್ ಮಂಜಪ್ಪ ಅವರು 50 ವರ್ಷಗಳ ಹಿಂದೆ ಪ್ರಗತಿಪರ ಸಮಾಜವಾದಿಗಳ ಸಮ್ಮೇಳನವನ್ನು ಉದ್ಘಾಟಿಸಿದ ಸಂದರ್ಭದಲ್ಲಿ ಆಡಿದ ಮಾತುಗಳು ನಮಗೆ ಕಟ್ಟಿಕೊಡುತ್ತವೆ (ಪ್ರ.ವಾ., 50 ವರ್ಷಗಳ ಹಿಂದೆ– ಜ. 2).

'ರಾಷ್ಟ್ರದಲ್ಲಿ ಇಂದು ವ್ಯಾಪಕವಾಗಿ ಹಬ್ಬಿರುವ ಅಶಾಂತಿ, ಭ್ರಷ್ಟಾಚಾರ, ಲಂಚಕೋರತನ, ಬೆಲೆಗಳ ಏರಿಕೆ, ಸರ್ವತೋಮುಖ ನೈತಿಕ ಅಧಃಪತನಕ್ಕೆ ಮೂರರಲ್ಲಿ ಎರಡು ಪಾಲು ರಾಜಕಾರಣಿಗಳು ಮತ್ತು ಸರ್ಕಾರಿ ಅಧಿಕಾರಿಗಳು ಕಾರಣರು. ಉಳಿದ ಒಂದು ಪಾಲಿಗೆ ಮಾತ್ರ ಜನರು ಮತ್ತು ಸನ್ನಿವೇಶಗಳು ಹೊಣೆ' ಎಂಬ ಅವರ ಮಾತು ಇಂದಿಗೂ ಪ್ರಸ್ತುತ ಎನಿಸುವಂತೆ ಇರುವುದು ವರ್ತಮಾನ ಮತ್ತು ಭವಿಷ್ಯದ ದುರಂತವೇ ಸರಿ.

ಆರ್.ಶಿವರಾಮ, ಸಂಡೂರು

ಲಭ್ಯವಾಗಲಿದೆ ಅಂಚೆ ಲೇಖನ ಸಾಮಗ್ರಿ

ಪೋಸ್ಟ್ ಕಾರ್ಡ್, ಇನ್‌ಲ್ಯಾಂಡ್ ಲೆಟರ್, ಸ್ಟ್ಯಾಂಪ್‌ನಂತಹ ಅಗತ್ಯ ವಸ್ತುಗಳ ಕೊರತೆ ಎದುರಿಸುತ್ತಿರುವ ಅಂಚೆ ಕಚೇರಿಗಳು ಗ್ರಾಹಕಸ್ನೇಹಿ ಆಗಲಿ ಎಂದು ಕೆ.ಸದಾನಂದ ಶಾಸ್ತ್ರಿ ಅಭಿಪ್ರಾಯಪಟ್ಟಿದ್ದಾರೆ (ವಾ.ವಾ., ಡಿ. 29). ತಾತ್ಕಾಲಿಕ ಅಭಾವದಿಂದಾಗಿ ಕೆಲವು ಅಂಚೆ ಕಚೇರಿಗಳಲ್ಲಿ ಇಂತಹ ವಸ್ತುಗಳ ಕೊರತೆ ಇತ್ತು. ಹೈದರಾಬಾದ್‌ನ ಸೆಕ್ಯೂರಿಟಿ ಪ್ರಿಂಟಿಂಗ್ ಪ್ರೆಸ್ (ಎಸ್‌ಪಿಪಿ) ಸದ್ಯದಲ್ಲೇ ಹುಬ್ಬಳ್ಳಿಯ ಪೋಸ್ಟಲ್ ಸ್ಟೋರ್ಸ್ ಡಿಪೋಗೆ ಈ ವಸ್ತುಗಳನ್ನು ರವಾನಿಸಲಿದೆ. ಅದರಂತೆ, ಅಂಚೆ ಲೇಖನ ಸಾಮಗ್ರಿಗಳ ದಾಸ್ತಾನು ಈ ತಿಂಗಳು ಸಾಕಷ್ಟು ಪ್ರಮಾಣದಲ್ಲಿ ಅಂಚೆ ಕಚೇರಿಗಳಲ್ಲಿ ಲಭ್ಯವಾಗಲಿದೆ.

ರಾಮ ಸುಧಾಕರ ರಾವ್, ಸಹಾಯಕ ನಿರ್ದೇಶಕ (ಸ್ಟಾಕ್), ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್, ಕರ್ನಾಟಕ ವೃತ್ತ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕೇಂದ್ರದ ತೆರಿಗೆ ಆದಾಯದಲ್ಲಿ ರಾಜ್ಯಗಳ ಪಾಲು

ಕರ್ನಾಟಕಕ್ಕೆ ಭಾರಿ ಅನ್ಯಾಯ ಗುಜರಾತಿಗೆ ವಿಪರೀತ ಏರಿಕೆ

15ನೇ ಹಣಕಾಸು ಆಯೋಗದ ಶಿಫಾರಸಿನಂತೆ ಎಲ್ಲಾ ರಾಜ್ಯಗಳಿಗೆ ನಿಗದಿಯಾದ ಕೇಂದ್ರದ ತೆರಿಗೆ ಪಾಲಿನಲ್ಲಿ ಆದ ಬದಲಾವಣೆಯು ಏಕಪ್ರಕಾರವಾಗಿಲ್ಲ. ಬಿಜೆಪಿ ತನ್ನ ನೆಲೆ ವಿಸ್ತರಿಸಿಕೊಳ್ಳಲು ಯತ್ನಿಸುತ್ತಿರುವ ದಕ್ಷಿಣ ಮತ್ತು ಪೂರ್ವ ಭಾರತದ ರಾಜ್ಯಗಳಿಗೆ ಹೆಚ್ಚು ಲಾಭವಾಗುವಂತೆ ಈ ಬದಲಾವಣೆ ಮಾಡಲಾಗಿದೆ. ಬಿಜೆಪಿಯೇ ಅಧಿಕಾರದಲ್ಲಿ ಇದ್ದರೂ ಕರ್ನಾಟಕದ ಪಾಲನ್ನು ಭಾರಿ ಪ್ರಮಾಣದಲ್ಲಿ ಇಳಿಸಲಾಗಿದೆ. ಪಾಲು ಹಂಚಿಕೆಯಲ್ಲಿ ಜನಸಂಖ್ಯೆಗೆ ನೀಡುತ್ತಿದ್ದ ಅಂಕವನ್ನು 10ರಿಂದ 12.5ಕ್ಕೆ ಏರಿಕೆ ಮಾಡಿದ್ದರಿಂದ ಹೀಗಾಗಿದೆ

• ಜಯಸಿಂಹ ಆರ್.

ರಾಜ್ಯಗಳಿಂದ ಕೇಂದ್ರ ಸರ್ಕಾರವು ಸಂಗ್ರಹಿಸುವ ನೇರ ತೆರಿಗೆ ಮತ್ತು ಪರೋಕ್ಷ ತೆರಿಗೆಗಳಲ್ಲಿ ರಾಜ್ಯಗಳ ಪಾಲನ್ನು ಹಣಕಾಸು ಆಯೋಗ ನಿಗದಿ ಮಾಡುತ್ತದೆ. ಹೀಗೆ 15ನೇ ಹಣಕಾಸು ಆಯೋಗವು ನಿಗದಿ ಮಾಡಿದ ಪಾಲಿನಲ್ಲಿ ದೇಶದ ಬೇರೆಲ್ಲಾ ರಾಜ್ಯಗಳಿಗೆ ಭಾರಿ ಪ್ರಮಾಣದ ಲಾಭವಾಗಿದೆ. ಆದರೆ ಕರ್ನಾಟಕಕ್ಕೆ ಭಾರಿ ಪ್ರಮಾಣದ ಅನ್ಯಾಯವಾಗಿದೆ.

ರಾಜ್ಯಗಳ ಜನಸಂಖ್ಯೆ, ತಲಾದಾಯ ಅಂತರ, ವಿಸ್ತೀರ್ಣ ಮತ್ತಿತರ ಮಾನದಂಡಗಳನ್ನು ಬಳಸಿಕೊಂಡು ಅವುಗಳಿಗೆ ಎಷ್ಟು ಪ್ರಮಾಣದ ತೆರಿಗೆ ಪಾಲನ್ನು ನೀಡಬೇಕು ಎಂದು ಹಣಕಾಸು ಆಯೋಗವು ನಿರ್ಧರಿಸುತ್ತದೆ. ಹೀಗಾಗಿ ಕಡಿಮೆ ತೆರಿಗೆ ಪಾವತಿಸುವಂತಹ ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ, ರಾಜಸ್ಥಾನದಂತಹ ದೊಡ್ಡ ಮತ್ತು ಭಾರಿ ಜನಸಂಖ್ಯೆಯ ರಾಜ್ಯಗಳಿಗೆ ಹೆಚ್ಚಿನ ತೆರಿಗೆ ಪಾಲು ಹಂಚಿಕೆಯಾಗುತ್ತದೆ. ಅತಿಹೆಚ್ಚು ತೆರಿಗೆ ಪಾವತಿಸುತ್ತಿದ್ದರೂ ಕರ್ನಾಟಕ, ತಮಿಳುನಾಡಿನಂತಹ ರಾಜ್ಯಗಳಿಗೆ ಕೇಂದ್ರದ ತೆರಿಗೆ ಆದಾಯದಲ್ಲಿ ದೊರೆಯುವ ಪಾಲು ಕಡಿಮೆ ಇರುತ್ತದೆ. 2020–21ನೇ ಆರ್ಥಿಕ ವರ್ಷದವರೆಗೂ ಇದೇ ರೀತಿಯ ಹಂಚಿಕೆ ನಡೆಯುತ್ತಿತ್ತು.

ಆದರೆ 15ನೇ ಹಣಕಾಸು ಆಯೋಗವು ನಡೆಸಿದ ಲೆಕ್ಕಾಚಾರದ ನಂತರ ಈ ಸ್ಥಿತಿಯಲ್ಲೂ ಬದಲಾಗಿದೆ. ಅತಿಹೆಚ್ಚು ತೆರಿಗೆ ಪಾವತಿಸುವ ಬೇರೆ ರಾಜ್ಯಗಳಿಗೆ ಕೇಂದ್ರದ ತೆರಿಗೆ ಪಾಲಿನ ಪ್ರಮಾಣ ಏರಿಕೆಯಾಗಿದೆ. ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ, ಒಡಿಶಾಗಳ ತೆರಿಗೆ ಪಾಲು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. 2018–19ರಲ್ಲಿ ಈ ರಾಜ್ಯಗಳಿಗೆ ದೊರೆತ್ತಿದ್ದ ತೆರಿಗೆ ಪಾಲಿನ ಮೊತ್ತಕ್ಕಿಂತ 2022–23ರಲ್ಲಿ ಪಡೆದ ಮೊತ್ತವು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿತ್ತು. ಆದರೆ ಅನ್ಯಾಯವಾಗಿದ್ದು ಕರ್ನಾಟಕಕ್ಕೆ ಮಾತ್ರ. 2018–19ರಲ್ಲಿ ಕರ್ನಾಟಕಕ್ಕೆ ಕೇಂದ್ರದ ತೆರಿಗೆ ಆದಾಯದ ಪಾಲಿನ ರೂಪದಲ್ಲಿ ₹35,894 ಕೋಟಿ ದೊರೆತಿತ್ತು. ಆದರೆ ಬದಲಾದ ಲೆಕ್ಕಾಚಾರದ ಪ್ರಕಾರ 2022–23ರಲ್ಲಿ ದೊರೆತ ಕೇಂದ್ರದ ತೆರಿಗೆ ಆದಾಯದ ಪಾಲಿನ ಮೊತ್ತ ₹34,496 ಕೋಟಿ ಮಾತ್ರ. ಅಂದರೆ ಐದು ವರ್ಷಗಳ ಹಿಂದೆ ದೊರೆತಿದ್ದಕ್ಕಿಂತ ಕಡಿಮೆ ಪಾಲು ಕರ್ನಾಟಕಕ್ಕೆ ದೊರೆತಿದೆ.

ಮೋದಿ ತವರು ರಾಜ್ಯಕ್ಕೆ ಶೇ 51ರಷ್ಟು ಏರಿಕೆ

ಈ ಅವಧಿಯಲ್ಲಿ ಅತಿಹೆಚ್ಚು ಏರಿಕೆಯಾಗಿದ್ದು ಗುಜರಾತಿಗೆ. 2018–19ರಲ್ಲಿ ₹23,489 ಕೋಟಿಯಷ್ಟು ತೆರಿಗೆ ಪಾಲು ಪಡೆದಿದ್ದ ಗುಜರಾತ್, 2023–24ರಲ್ಲಿ ₹35,525 ಕೋಟಿ ಪಡೆಯಲಿದೆ. ಗುಜರಾತಿನ ತೆರಿಗೆ ಪಾಲು ಈ ಅವಧಿಯಲ್ಲಿ ₹12,036 ಕೋಟಿಯಷ್ಟು, ಅಂದರೆ ಶೇ51ರಷ್ಟು ಏರಿಕೆಯಾಗಿದೆ. ದೇಶದ ಬೇರೆ ಯಾವುದೇ ರಾಜ್ಯದ ತೆರಿಗೆ ಪಾಲು ಇಷ್ಟೊಂದು ಪ್ರಮಾಣದ ಏರಿಕೆಯಾಗಿಲ್ಲ.

2018–19ರಿಂದ 2022–23ರ ಅವಧಿ

ಕರ್ನಾಟಕ

- ₹9.47 ಲಕ್ಷ ಕೋಟಿ — ಕೇಂದ್ರ ಸರ್ಕಾರ ಸಂಗ್ರಹಿಸಿದ ನೇರ ತೆರಿಗೆ ಮೊತ್ತ
- ₹14.04 ಲಕ್ಷ ಕೋಟಿ — ಕೇಂದ್ರ ಸರ್ಕಾರವು ಸಂಗ್ರಹಿಸಿದ ಒಟ್ಟು ತೆರಿಗೆಯ ಮೊತ್ತ
- ₹1.82 ಲಕ್ಷ ಕೋಟಿ — 15ನೇ ಹಣಕಾಸು ಆಯೋಗವು ಪಾಲು ಇಳಿಸದೇ ಇದ್ದಿದ್ದರೆ, ಕರ್ನಾಟಕಕ್ಕೆ ದೊರೆಯುತ್ತಿದ್ದ ಮೊತ್ತ
- ₹4.56 ಲಕ್ಷ ಕೋಟಿ — ಕೇಂದ್ರ ಸರ್ಕಾರವು ಸಂಗ್ರಹಿಸಿದ ಜಿಎಸ್‌ಟಿ ಮೊತ್ತ
- ₹1.56 ಲಕ್ಷ ಕೋಟಿ — ಈ ಅವಧಿಯಲ್ಲಿ ಕರ್ನಾಟಕಕ್ಕೆ ದೊರೆತ ಕೇಂದ್ರ ತೆರಿಗೆ ಆದಾಯದ ಪಾಲು


ಗುಜರಾತ್

- ₹3.01 ಲಕ್ಷ ಕೋಟಿ — ಕೇಂದ್ರ ಸರ್ಕಾರ ಸಂಗ್ರಹಿಸಿದ ನೇರ ತೆರಿಗೆ ಮೊತ್ತ
- ₹7.39 ಲಕ್ಷ ಕೋಟಿ — ಕೇಂದ್ರ ಸರ್ಕಾರವು ಸಂಗ್ರಹಿಸಿದ ಒಟ್ಟು ತೆರಿಗೆಯ ಮೊತ್ತ
- ₹1.18 ಲಕ್ಷ ಕೋಟಿ — 15ನೇ ಹಣಕಾಸು ಆಯೋಗವು ಪಾಲು ಹೆಚ್ಚಿಸದೇ ಇದ್ದಿದ್ದರೆ, ಗುಜರಾತಿಗೆ ದೊರೆಯುತ್ತಿದ್ದ ಮೊತ್ತ
- ₹4.38 ಲಕ್ಷ ಕೋಟಿ — ಕೇಂದ್ರ ಸರ್ಕಾರವು ಸಂಗ್ರಹಿಸಿದ ಜಿಎಸ್‌ಟಿ ಮೊತ್ತ
- ₹1.51 ಲಕ್ಷ ಕೋಟಿ — ಈ ಅವಧಿಯಲ್ಲಿ ಗುಜರಾತಿಗೆ ದೊರೆತ ಕೇಂದ್ರ ತೆರಿಗೆ ಆದಾಯದ ಪಾಲು

15ನೇ ಹಣಕಾಸು ಆಯೋಗದ ಲೆಕ್ಕಾಚಾರದ ಆಧಾರದಲ್ಲೇ ತೆರಿಗೆ ಆದಾಯವನ್ನು ಹಂಚಲಾಗುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಈಗಾಗಲೇ ಹಲವು ಬಾರಿ ಹೇಳಿದೆ. ಕೇಂದ್ರವು ರಾಜ್ಯಗಳೊಂದಿಗೆ ಹಂಚಿಕೊಳ್ಳುವ ತೆರಿಗೆ ಆದಾಯದಲ್ಲಿ ಕರ್ನಾಟಕಕ್ಕೆ ಶೇ 4.74ರಷ್ಟು ಪಾಲು ಸಂದಾಯವಾಗಬೇಕು ಎಂದು 14ನೇ ಹಣಕಾಸು ಆಯೋಗ ಹೇಳಿತ್ತು. ಅದರಂತೆ 2019–20ರವರೆಗೆ ಕರ್ನಾಟಕ್ಕೆ ಶೇ 4.74ರಷ್ಟು ತೆರಿಗೆ ಪಾಲು ದೊರೆಯುತ್ತಿತ್ತು. 15ನೇ ಹಣಕಾಸು ಆಯೋಗವು ಕರ್ನಾಟಕದ ಪಾಲನ್ನು ಶೇ 3.64ಕ್ಕೆ ಇಳಿಸಿತು. 15ನೇ ಹಣಕಾಸು ಆಯೋಗವು ಮಾಡಿದ ಲೆಕ್ಕಾಚಾರದಿಂದ ಕೇಂದ್ರದ ತೆರಿಗೆ ಆದಾಯದಲ್ಲಿ ಎಲ್ಲಾ ರಾಜ್ಯಗಳ ಪಾಲು ಮತ್ತು ಮೊತ್ತ ಏರಿಕೆಯಾಯಿತು. ಇಳಿಕೆಯಾಗಿದ್ದು ಕರ್ನಾಟಕ ಮತ್ತು ಕೇರಳಕ್ಕೆ ಮಾತ್ರ. ಆಯೋಗವು ಈ ನಿರ್ಧಾರಕ್ಕೆ ಹೇಗೆ ಬಂತು ಎಂಬುದರಲ್ಲಿ ಸ್ಪಷ್ಟತೆ ಇಲ್ಲ. ಏಕೆಂದರೆ ತೆರಿಗೆ ಪಾಲು ಲೆಕ್ಕಾಚಾರದಲ್ಲಿ ಎಲ್ಲಾ ರಾಜ್ಯಗಳಿಗೆ ಪ್ರತ್ಯೇಕ ವಿಧಾನಗಳನ್ನು ಅನುಸರಿಸಿದೆ. ಈ ಹಿಂದೆ ಹೆಚ್ಚು ಪಾಲು ಪಡೆಯುತ್ತಿದ್ದ ಉತ್ತರ ಮತ್ತು ಮಧ್ಯ ಭಾರತದ ರಾಜ್ಯಗಳಿಗೆ 15ನೇ ಹಣಕಾಸು ಆಯೋಗದಿಂದ ಹೆಚ್ಚಿನ ಲಾಭವೇನೂ ಆಗಿಲ್ಲ. ಅಂದರೆ ಅವು ಪಡೆಯುತ್ತಿದ್ದ ತೆರಿಗೆ ಪಾಲಿನಲ್ಲಿ ಹೆಚ್ಚಿನ ಬದಲಾವಣೆ ಏನೂ ಆಗಿಲ್ಲ. ಆದರೆ ಬಿಜೆಪಿ ಅಧಿಕಾರದಲ್ಲಿ ಇರದ ಮತ್ತು ಪ್ರಾದೇಶಿಕ ಪಕ್ಷಗಳು ಅಧಿಕಾರದಲ್ಲಿ ಇರುವ ತಮಿಳುನಾಡು, ಆಂಧ್ರ ಪ್ರದೇಶ, ಒಡಿಶಾಗಳ ತೆರಿಗೆ ಪಾಲು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. 15ನೇ ಹಣಕಾಸು ಆಯೋಗವು ಶಿಫಾರಸು ಮಾಡುವಾಗ ಈ ಮೂರೂ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ಅಧಿಕಾರದಲ್ಲಿದ್ದವು. ಈಗಲೂ ಅಧಿಕಾರದಲ್ಲಿ ಇವೆ. ಇಲ್ಲಿ ಬಿಜೆಪಿಗೆ ನೆಲೆ ಇಲ್ಲ. ಈ ರಾಜ್ಯಗಳಲ್ಲಿ ನೆಲೆ ಗಟ್ಟಿ ಮಾಡಿಕೊಳ್ಳುವ ಉದ್ದೇಶದಿಂದ ಹಣಕಾಸು ಆಯೋಗವನ್ನು ಕೇಂದ್ರ ಸರ್ಕಾರವು ಬಳಸಿಕೊಂಡಿತೇ ಎಂಬ ಪ್ರಶ್ನೆಯನ್ನು ಇದು ಹುಟ್ಟುಹಾಕಿದೆ.

ಒಡಿಶಾವು 2018–19ರಲ್ಲಿ ಪಡೆಯುತ್ತಿದ್ದ ತೆರಿಗೆ ಪಾಲಿನ ಮೊತ್ತವನ್ನು ಪರಿಗಣಿಸಿದರೆ, 2023–24ರಲ್ಲಿ ಪಡೆದುಕೊಳ್ಳಲಿರುವ ತೆರಿಗೆ ಪಾಲಿನ ಮೊತ್ತದಲ್ಲಿ ₹10,000 ಕೋಟಿಗಿಂತಲೂ ಹೆಚ್ಚು ಏರಿಕೆಯಾಗಿದೆ. ಆಂಧ್ರ ಪ್ರದೇಶದ ತೆರಿಗೆ ಪಾಲು ಈ ಅವಧಿಯಲ್ಲಿ ₹8,551 ಕೋಟಿ, ತಮಿಳುನಾಡಿನದ್ದು ₹11,026 ಕೋಟಿಯಷ್ಟು ಏರಿಕೆಯಾಗಿದೆ. ಆದರೆ ಈ ಅವಧಿಯಲ್ಲಿ ಕರ್ನಾಟಕದ ತೆರಿಗೆ ಪಾಲಿನಲ್ಲಿ ಏರಿಕೆಯಾದ ಮೊತ್ತ ₹1,358 ಕೋಟಿ ಮಾತ್ರ. ಇದು ಕೇವಲ ಶೇ 3.8ರಷ್ಟು.

2018–19ರಲ್ಲಿ ಮೇಲಿನ ಎಲ್ಲಾ ರಾಜ್ಯಗಳಿಗಿಂತ ಹೆಚ್ಚು ಅನುದಾನವು ಕರ್ನಾಟಕಕ್ಕೆ ದೊರೆಯುತ್ತಿತ್ತು. ಆದರೆ 15ನೇ ಹಣಕಾಸು ಆಯೋಗದ ಶಿಫಾರಸಿನ ನಂತರ ಕರ್ನಾಟಕಕ್ಕೆ ದೊರೆಯುತ್ತಿರುವ ಪಾಲು ಈ ಎಲ್ಲಾ ರಾಜ್ಯಗಳಿಗಿಂತ ಕಡಿಮೆ. 14ನೇ ಹಣಕಾಸು ಆಯೋಗವು ನಿಗದಿ ಮಾಡಿದ್ದ ಪಾಲಿನಷ್ಟೇ ಮೊತ್ತ ಕರ್ನಾಟಕಕ್ಕೆ ದೊರೆಯುವಂತಿದ್ದರೆ, 2023–24ರಲ್ಲಿ ಕೇಂದ್ರದ ತೆರಿಗೆ ಆದಾಯದಲ್ಲಿ ರಾಜ್ಯಕ್ಕೆ ₹48,517 ಕೋಟಿ ಬರಬೇಕಿತ್ತು. ಆದರೆ ಈ ಸಾಲಿಗೆ ನಿಗದಿ ಮಾಡಿರುವುದು ₹37,252 ಕೋಟಿ. 15ನೇ ಹಣಕಾಸು ಆಯೋಗದ ನೀತಿಯಿಂದಾಗಿ 2023–24ರ ಆರ್ಥಿಕ ವರ್ಷವೊಂದರಲ್ಲೇ ಕರ್ನಾಟಕಕ್ಕೆ ₹11,265 ಕೋಟಿಯಷ್ಟು ಖೋತಾ ಆಗಿದೆ. ಹೀಗೆ ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ಮಾಡಿದ ಅನ್ಯಾಯವಿದು.



₹36,945 ಕೋಟಿ

15ನೇ ಹಣಕಾಸು ಆಯೋಗವು ಪಾಲು ಕಡಿತ ಮಾಡಿದ್ದರಿಂದ 2018–19ರಿಂದ 2023–24ರ ಅವಧಿಯಲ್ಲಿ ಕರ್ನಾಟಕಕ್ಕೆ ಆದ ನಷ್ಟ

ಆಧಾರ: ಲೋಕಸಭೆ ಮತ್ತು ರಾಜ್ಯಸಭೆಗಳಿಗೆ ಹಣಕಾಸು ಸಚಿವಾಲಯವು ನೀಡಿದ ಲಿಖಿತ ಉತ್ತರಗಳು ಪ್ರಜಾವಾಣಿ ಗ್ರಾಫಿಕ್ಸ್: ಶಶಿಧರ ಹಳೇಮನಿ

ಸಿನಿ ಬಿಟ್ಸ್



'ಮ್ಯಾಕ್ಸ್' ಶೂಟಿಂಗ್ ಪುನರಾರಂಭ

ನಟ ಸುದೀಪ್ ನಟನೆಯ 46ನೇ ಸಿನಿಮಾ 'ಮ್ಯಾಕ್ಸ್' ಅಂತಿಮ ಹಂತದ ಶೂಟಿಂಗ್‌ಗೆ ಕಾಲಿಟ್ಟಿದೆ. ಚೆನ್ನೈನಲ್ಲಿ ಚಿತ್ರದ ಕ್ಲೈಮ್ಯಾಕ್ಸ್ ಚಿತ್ರೀಕರಣ ಆರಂಭವಾಗಿದ್ದು, ಇದೇ ತಿಂಗಳ ಅಂತ್ಯಕ್ಕೆ ಶೂಟಿಂಗ್ ಪೂರ್ಣಗೊಳ್ಳಲಿದೆ.

ವಿಜಯ್ ಕಾರ್ತಿಕೇಯ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾದ ಚಿತ್ರೀಕರಣ ತಮಿಳುನಾಡಿನ ಮಹಾಬಲಿಪುರಂನಲ್ಲಿ ಹಾಕಿರುವ ಸೆಟ್‌ನಲ್ಲಿ ನಡೆಯುತ್ತಿದೆ. ಡಿಸೆಂಬರ್‌ನಲ್ಲಿ ಚಿತ್ರದ ಚಿತ್ರೀಕರಣ ಏಕಾಏಕಿ ಸ್ಥಗಿತಗೊಂಡಿತ್ತು. ಚೆನ್ನೈನಲ್ಲಿ ಸುರಿದಿದ್ದ ಭಾರಿ ಮಳೆಯಿಂದಾಗಿ ಚಿತ್ರದ ಸೆಟ್‌ಗಳಿಗೆ ಹಾನಿಯಾಗಿತ್ತು. ಈ ಕಾರಣದಿಂದ ಜನವರಿಗೆ ಚಿತ್ರೀಕರಣವನ್ನು ಮುಂದೂಡಲಾಗಿತ್ತು. ಈ ನಡುವೆ ಕನ್ನಡ ಚಲನಚಿತ್ರ ಕಪ್(ಕೆಸಿಸಿ) ಕ್ರಿಕೆಟ್ ಆಯೋಜನೆಯಲ್ಲಿ ತೊಡಗಿಸಿಕೊಂಡಿದ್ದ ಸುದೀಪ್, ಇದೀಗ ಸೆಟ್‌ಗೆ ಮರಳಿದ್ದಾರೆ. ಶೂಟಿಂಗ್ ಪುನರಾರಂಭವಾಗಿದ್ದು, ಸಾಹಸ ದೃಶ್ಯಗಳನ್ನು ಚಿತ್ರೀಕರಿಸಲಾಗುತ್ತಿದೆ ಎಂಬ ಮಾಹಿತಿ ದೊರಕಿದೆ. ಈ ಚಿತ್ರದಲ್ಲಿ ಮಲಯಾಳಂನ ಖ್ಯಾತ ನಟ ಫಹಾದ್ ಫಾಸಿಲ್ ನಟಿಸುತ್ತಿರುವ ಮಾತು ಕೇಳಿಬರುತ್ತಿದ್ದು, ಚಿತ್ರತಂಡದಿಂದ ಅಧಿಕೃತವಾದ ಮಾಹಿತಿ ಇಲ್ಲ.

ನಟಿ ಸಂಯುಕ್ತ ಹೊರನಾಡು 'ಮ್ಯಾಕ್ಸ್'ನಲ್ಲಿ ನಟಿಸುತ್ತಿದ್ದು, ವಿ ಕ್ರಿಯೇಷನ್ಸ್ ಈ ಸಿನಿಮಾವನ್ನು ನಿರ್ಮಾಣ ಮಾಡುತ್ತಿದೆ. ಶಿವಕುಮಾರ್ ಕಲಾನಿರ್ದೇಶನ, ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. 2023ರಲ್ಲೇ ಈ ಸಿನಿಮಾವನ್ನು ತೆರೆಗೆ ತರುವ ಹಠ ಸುದೀಪ್ ಅವರಿಗಿತ್ತು. ಇದೀಗ ಸಿನಿಮಾ ಇದೇ ವರ್ಷದ ಮೊದಲಾರ್ಧದಲ್ಲಿ ಬಿಡುಗಡೆಯಾಗುವ ನಿರೀಕ್ಷೆ ಇದೆ. ❖

'ಕೆಎ-07' ಎಂದ ಹೊಸಬರು



ಬಹುತೇಕ ಹೊಸಬರಿಂದಲೇ ಕೂಡಿರುವ 'ಭೈರ್ಯ ಕೆಎ-07' ಎಂಬ ವಿಭಿನ್ನ ಶೀರ್ಷಿಕೆಯ ಸಿನಿಮಾವೊಂದು ಇತ್ತೀಚೆಗಷ್ಟೇ ಸೆಟ್ಟೇರಿದೆ. ಗೌರಿಬಿದನೂರಿನ ರೋಷನ್ ಕಥೆ,ಚಿತ್ರಕಥೆ ಬರೆದು ಮೊದಲ ಬಾರಿ ನಾಯಕನಾಗಿ ನಟಿಸುತ್ತಿದ್ದಾರೆ. ರಾಜೀವ್ ಚಂದ್ರಕಾಂತ್ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

'ಮುಂಬೈನಲ್ಲಿ ನಟನೆ ತರಬೇತಿ ಪಡೆದುಕೊಂಡು ಬಂದಿರುವೆ. ನಾಯಕನಾಗಬೇಕೆಂದುಕೊಂಡು ಬಂದರೂ ಹಲವು ಚಿತ್ರಗಳಿಗೆ ಸೆಟ್ ಕೆಲಸ ಮಾಡಿರುವೆ. ಇದು ಭೂಗತ ಲೋಕದ ಕಥೆ. ಕೆಜಿಎಫ್‌ನಲ್ಲಿರುವ ಚಿನ್ನದ ಗಣಿಯನ್ನು ರಕ್ಷಣೆ ಮಾಡಿದವರು ಯಾರು? ಅಂದು ಅಧ್ಯಕ್ಷರಾಗಿದ್ದವರು ಯಾರು? ಇವತ್ತಿನವರೆಗೂ ಅದು ಯಾಕೆ ಸರ್ಕಾರದ ಅಧೀನದಲ್ಲಿಲ್ಲ? ಇಂತಹ ಎಲ್ಲಾ ರೀತಿಯ ಅಂಶಗಳನ್ನು ತೋರಿಸುವ ಪ್ರಯತ್ನ ಮಾಡಲಾಗಿದೆ. 1970ರಿಂದ 1985ರ ನಡುವೆ ನಡೆಯುವ ಕಥೆ' ಎಂದರು ನಾಯಕ ರೋಷನ್.

ಬಾಗಲಕೋಟೆಯ ಷರೀಫ ಬೇಗಂ ನಡಾಫ್ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಶೀಘ್ರದಲ್ಲಿ ತಾಂತ್ರಿಕ ತಂಡ ಮತ್ತು ತಾರಾಬಳಗದ ಮಾಹಿತಿ ನೀಡುವುದಾಗಿ ಚಿತ್ರತಂಡ ಹೇಳಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ನಟ ಶಾರುಕ್ ಖಾನ್ ನಟಿಸಿರುವ 'ಡಂಕಿ' ಚಿತ್ರದ ವಿಮರ್ಶೆ ಹಾಗೂ ಸಿನಿಮಾಗೆ ನೀಡಿದ ರೇಟಿಂಗ್ ಕುರಿತ ಪೋಸ್ಟ್‌ವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಜೊತೆಗೆ, ಚಿತ್ರಮಂದಿರಗಳಿಂದ ಈ ಚಿತ್ರವನ್ನು ವೀಕ್ಷಿಸಿ ಬಂದ ಪ್ರೇಕ್ಷಕರು ಚಿತ್ರದ ಬಗ್ಗೆ ನಕಾರಾತ್ಮಕವಾಗಿ ಮಾತನಾಡಿರುವ ವಿಡಿಯೊಗಳೂ ಹರಿದಾಡುತ್ತಿವೆ. ಖ್ಯಾತ ಸಿನಿಮಾ ವಿಮರ್ಶಕ ತರಣ್ ಆದರ್ಶ್ ಅವರು ತಮ್ಮ 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿದ್ದಾರೆ ಎನ್ನಲಾದ ಪೋಸ್ಟ್‌ವೊಂದು ಹರಿದಾಡುತ್ತಿದ್ದು, 'ಡಂಕಿ'ಯೂ ತೀವ್ರ ನಿರಾಸೆ ಮೂಡಿಸಿದೆ' ಎಂದಿರುವ ಬರಹ ಇದ್ದು, ಚಿತ್ರಕ್ಕೆ ಒಂದೂವರೆ ಸ್ಟಾರ್ ರೇಟಿಂಗ್ ನೀಡಲಾಗಿದೆ. ಗುಲಾಬಿ ಬಣ್ಣದ ಅಂಗಿ ಧರಿಸಿ ಚಿತ್ರದ ಬಗ್ಗೆ ಮಾತನಾಡುತ್ತಿರುವ ವ್ಯಕ್ತಿಯು, 'ಶಾರುಕ್ ಖಾನ್ ಅವರು ಜನರಿಗೆ ನಿರಾಶೆ ಮೂಡಿಸಿದರು' ಎನ್ನುವ ಹಾಗೂ ಇನ್ನೊಬ್ಬ ವ್ಯಕ್ತಿಯು, 'ವಿಶ್ವ ಪರ್ಯಟನೆಯನ್ನು ಬಾಲಿವುಡ್ ಚಿತ್ರವಾಗಿಸಲಾಗಿದೆ' ಎಂದಿರುವ ವಿಡಿಯೊಗಳು ಕೂಡ ಹರಿದಾಡುತ್ತಿವೆ. ಆದರೆ, ಇವುಗಳು ಸುಳ್ಳು ಸುದ್ದಿಗಳಾಗಿವೆ.

ತರಣ್ ಆದರ್ಶ್ ಅವರು ಪ್ರಭಾಸ್ ನಟನೆಯ 'ಆದಿಪುರುಷ' ಚಿತ್ರದ ಕುರಿತು ತಮ್ಮ 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿದ್ದನ್ನೇ ತಿರುಚಿ, 'ಡಂಕಿ' ಚಿತ್ರಕ್ಕೆ ನೀಡಿದ ವಿಮರ್ಶೆ ಎಂದು ಹಂಚಿ ಕೊಳ್ಳಲಾಗುತ್ತಿದೆ. ಇಂಥ ಪೋಸ್ಟ್‌ಗಳು ಹರಿದಾಡಲು ಆರಂಭಿಸಿದ ಹೊತ್ತಿಗೆ (ಈಗಲೂ ಪೋಸ್ಟ್ ಹರಿದಾಡುತ್ತಿದೆ) ತರಣ್ ಅವರು 'ಡಂಕಿ' ಚಿತ್ರವನ್ನೇ ವೀಕ್ಷಿಸಿರಲಿಲ್ಲ. ಈ ಬಗ್ಗೆ ಅವರೇ ಪೋಸ್ಟ್ ಹಂಚಿಕೊಂಡಿದ್ದಾರೆ. ಇನ್ನು ಪ್ರೇಕ್ಷಕರು ಚಿತ್ರದ ಕುರಿತು ಮಾತನಾಡುತ್ತಿರುವ ವಿಡಿಯೊಗಳು 2017ರ ಹೊತ್ತಿನವು. ಶಾರುಕ್ ಅವರೇ ನಟಿಸಿರುವ 'ಹ್ಯಾರಿ ಮೆಟ್ಸ್ ಸೇಜಲ್' ಚಿತ್ರದ ಕುರಿತು ಪ್ರೇಕ್ಷಕರು ಮಾತನಾಡಿದ್ದ ಮಾತುಗಳವು ಎಂದು 'ಇಂಡಿಯಾ ಟುಡೆ' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನುಡಿ ಬೆಳಗು

ಬದಲಾವಣೆಯತ್ತ ಪುಟ್ಟ ಹೆಜ್ಜೆ



ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಡಾ ಶಿಗಾಕಿ ಹಿನೋಹರಾ ಜಪಾನಿನ ಅತ್ಯಂತ ಪ್ರಸಿದ್ಧ ವೈದ್ಯರು. ನೂರಾ ಐದು ವರ್ಷ ಬದುಕಿದ್ದ ಅವರು ಕೊನೆಯವರೆಗೂ ನಿವೃತ್ತರಾಗದೇ ಚಟುವಟಿಕೆಯಿಂದಿದ್ದರು. ಅವರ ಬಳಿ ಒಬ್ಬ ಮಹಿಳೆ ಸಲಹೆಗಾಗಿ ಬಂದರು. ಹೆಚ್ಚುತ್ತಿರುವ ತೂಕದಿಂದ ಆಕೆಗೆ ಹತ್ತಾರು ಆರೋಗ್ಯ ಸಮಸ್ಯೆಗಳು ಕಾಣಿಸಿಕೊಂಡಿದ್ದವು. ಆದರೆ, ಬಹಳ ಒತ್ತಡದ ಜೀವನಶೈಲಿಯ ಆಕೆಯ ದಿನಚರಿಯಲ್ಲಿ ವ್ಯಾಯಾಮಕ್ಕಾಗಲೀ ನಡಿಗೆಗಾಗಲೀ ಸಮಯವೇ ಇರಲಿಲ್ಲ. ಇದು ಒಂದೇ ಸಲಕ್ಕೆ ಪರಿಹಾರವಾಗುವ ಸಮಸ್ಯೆಯಲ್ಲ ಎಂದು ಡಾ ಶಿಗಾಕಿಯವರಿಗೆ ಅರ್ಥವಾಯಿತು. ಆಗ ಅವರು 'ನೀವು ಹಾಡು ಕೇಳುತ್ತೀರಲ್ಲ, ಒಂದು ವಾರ ಯಾವುದಾದರೂ ಹಾಡಿಗೆ ದಿನಕ್ಕೊಂದು ನಿಮಿಷ ನೃತ್ಯ ಮಾಡಬಹುದೇ?' ಎಂದು ಕೇಳಿದರು. ಆಕೆ ಮುಗುಳ್ನಕ್ಕು 'ಓಹ್ ಒಂದು ನಿಮಿಷ ಸಮಯ ಇಲ್ಲದೇ ಏನು?' ಎಂದು ಒಪ್ಪಿಕೊಂಡರು. ಒಂದು ವಾರ ಬಿಟ್ಟು ಆಕೆ ಬಂದಾಗ 'ಇಡೀ ಹಾಡಿಗೆ ದಿನವೂ ನೃತ್ಯ ಮಾಡಬಹುದೇ' ಎಂದು ಕೇಳಿದರು. ಅದಕ್ಕೂ ಆಕೆ ಒಪ್ಪಿದರು. ಮುಂದಿನ ಬಾರಿ ಬಂದಾಗ ಎರಡು ಹಾಡುಗಳಿಗೆ ಡಾನ್ಸ್ ಮಾಡಲು ಹೇಳಿದರು. ಅದಾದ ಮೇಲೆ ನೃತ್ಯದ ಜತೆಗೆ ಕೆಲವು ವ್ಯಾಯಾಮ ಸೇರಿಸಿಕೊಳ್ಳಲು ಹೇಳಿದರು. ಹೀಗೆಯೇ ನಿಧಾನಕ್ಕೆ ವ್ಯಾಯಾಮದ ಅವಧಿಯನ್ನು ಹೆಚ್ಚಿಸುತ್ತ ಒಂದು ವರ್ಷ ಕಳೆಯುವಷ್ಟರಲ್ಲಿ ದಿನವೂ ಒಂದರಿಂದ ಒಂದೂವರೆ ಗಂಟೆಯನ್ನು ದೈಹಿಕ ಕಸರತ್ತಿಗೆ ಮೀಸಲಿಟ್ಟ ಆಕೆ ಇಪ್ಪತ್ತು ಕೆ.ಜಿಗಳಷ್ಟು ತೂಕವನ್ನೂ ಇಳಿಸಿಕೊಂಡರು. ಆರೋಗ್ಯವೂ ಸುಧಾರಿಸಿತು.

ಮನುಷ್ಯನ ಮಿದುಳು ಎಷ್ಟು ಅದ್ಭುತವಾದದ್ದೋ ಅಷ್ಟೇ ಹಟಮಾರಿಯೂ ಹೌದು. ತಕ್ಷಣದ ಬದಲಾವಣೆಗಳನ್ನು ಅದು ಒಪ್ಪಿಕೊಳ್ಳುವುದಿಲ್ಲ. ಒಂದು ವೇಳೆ ವೈದ್ಯರು ಆ ಮಹಿಳೆಗೆ ಮರುದಿನದಿಂದ ದಿನವೂ ನೀವು ಒಂದು ಗಂಟೆ ವ್ಯಾಯಾಮ ಮಾಡಬೇಕು ಎಂದಿದ್ದರೆ ಆಕೆ ಯಾವ ಕಾರಣಕ್ಕೂ ಅದನ್ನು ಪಾಲಿಸುತ್ತಿರಲಿಲ್ಲ. ಅದು ಸಾಧ್ಯವೂ ಇಲ್ಲ. ಜೀವನದಲ್ಲಿ ಬದಲಾವಣೆಗಳನ್ನು ನಿಧಾನವಾಗಿ ತರಬೇಕು. ಏನೂ ಓದದ ವಿದ್ಯಾರ್ಥಿಗೆ ದಿನವೂ ಆರು ಗಂಟೆ ಓದಬೇಕು ಎಂದರೆ ಆಗದು. ಒಂದೊಂದು ವಿಷಯವನ್ನು ಹದಿನೈದು ನಿಮಿಷ ಓದಲು ಹೇಳಬೇಕು. ಐದು ದೋಸೆ ತಿನ್ನುವವರು ಒಂದು ದೋಸೆ ಕಡಿಮೆ ಮಾಡಬೇಕು. ದಿನಕ್ಕೊಂದು ಪ್ಯಾಕ್ ಸಿಗರೇಟು ಸೇದುವವರು ಮೊದಲು ಒಂದು ಸಿಗರೇಟು ಕಡಿಮೆ ಸೇದಬೇಕು. ಸಣ್ಣ ಸಣ್ಣ ಕೆಲಸಗಳು ನಮ್ಮ ಅರಿವಿಗೇ ಬಾರದಂತೆ ದೊಡ್ಡ ಪರಿಣಾಮವನ್ನು ಉಂಟು ಮಾಡುತ್ತವೆ ಎಂಬುದೊಂದು ಅಚ್ಚರಿ. ನಿಜ, ಸಾವಿರ ಮೈಲಿಗಳ ಪಯಣವೂ ಶುರುವಾಗುವುದು ಮೊದಲ ಹೆಜ್ಜೆಯಿಂದ. ಈ ಹೊಸ ವರ್ಷದಲ್ಲಿ ಬದಲಾವಣೆಯೆಡೆಗೆ ಪುಟ್ಟ ಹೆಜ್ಜೆ ಇಡುವ ತೀರ್ಮಾನ ನಮ್ಮದಾಗಲಿ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜನವರಿ 4, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಅಷ್ಟಮಿ ಗಂ. 22-05 ನಕ್ಷತ್ರ: ಹಸ್ತ ಗಂ. 17-34 ಯೋಗ: ಅತಿಗಂಡ ಅಹೋರಾತ್ರ ಕರಣ: ಬಾಲವ ಗಂ. 09-00, ಧನು ಮಾಸದ 19 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 2.

ರಾಹುಕಾಲ : ಮಧ್ಯಾಹ್ನ 01-30 – 03-00

ಸೂರ್ಯೋದಯ : 06-58 ಸೂರ್ಯಾಸ್ತ : 06-13

ಮುಸ್ಲಿಂ ದಿನಾಂಕ : 21 ಜುಮಾದುಸ್ಸಾನಿ

ಅದೃಷ್ಟ ಸಂಖ್ಯೆ : 4, 11

ಮೇಷ: ಜವಾಬ್ದಾರಿಯನ್ನು ಸ್ವೀಕರಿಸುವ ಮೊದಲು ಅದನ್ನು ನಿಭಾಯಿಸುವ ಬಗ್ಗೆ ಯೋಚಿಸಿ. ಪ್ರಭಾವಿ ವ್ಯಕ್ತಿಗಳ ಜತೆಗಿನ ಒಡನಾಟ ಮತ್ತು ಓಡಾಟ ಹೆಚ್ಚಿನ ಸ್ಥಾನಮಾನ ತಂದು ಕೊಡಲಿದೆ.

ವೃಷಭ: ಈ ದಿನ ಎಂಥ ಅನಿವಾರ್ಯ ಪರಿಸ್ಥಿತಿಗೂ ಯಾರಿಗೂ ಸಾಲ ಕೊಡದಿರಲು ನಿಶ್ಚಯಿಸುವುದು ಉತ್ತಮ. ನಿಮ್ಮ ಕೆಲಸಕ್ಕೆ ಸೋಮಾರಿತನ ಅಥವಾ ಸಮಯದ ಅಭಾವ ಎದುರಾಗುತ್ತದೆ.

ಮಿಥುನ: ಆಸ್ತಿಯ ವಿಷಯಕ್ಕೆ ಸಂಬಂಧಿಸಿದಂತೆ ತಾಳ್ಮೆಯಿಂದ ಕೆಲಸ ನಿರ್ವಹಿಸಬೇಕಾಗುವುದು. ಧೈರ್ಯಮಾಡಿ ಕಾರ್ಯೋನ್ಮುಖರಾದರೆ ಅಭಿವೃದ್ಧಿ ಹೊಂದುವಿರಿ. ಪ್ರಯತ್ನಕ್ಕಿಂತ ಮಿಗಿಲಾದ ಧನಾದಾಯ ಇರಲಿದೆ.

ಕರ್ಕಾಟಕ: ಸಂತೋಷಕ್ಕೆ ನಿಮ್ಮ ಹತ್ತಿರದವರಿಂದ ತಡೆ ಉಂಟಾಗಬಹುದು. ಹೊಸ ಜನರ ಸಂಪರ್ಕವನ್ನು ಮಾಡಿಕೊಳ್ಳುವ ಅಭ್ಯಾಸ ರೂಢಿಸಿಕೊಳ್ಳಿರಿ. ಶ್ರೀರಾಮನಾಮ ಭಜನೆಯಿಂದ ಕಾರ್ಯಗಳ ಅಭಿವೃದ್ಧಿಯಾಗುವುದು.

ಸಿಂಹ: ದುರಭ್ಯಾಸಗಳಿಗೆ ಒಳಗಾಗದಂತೆ ಮನಸ್ಸನ್ನು ಸ್ಥಿಮಿತದಲ್ಲಿ ಇಟ್ಟುಕೊಳ್ಳಿ. ಉಳಿತಾಯದ ಹಣದ ಹೊಂದಾಣಿಕೆಯಿಂದ ಸಾಲ ಮಾಡುವ ಪರಿಸ್ಥಿತಿ ದೂರಾಗುವುದು. ವ್ಯವಹಾರದಲ್ಲಿ ಪೈಪೋಟಿ ಹೆಚ್ಚಲಿದೆ.

ಕನ್ಯಾ: ದಾಂಪತ್ಯದಲ್ಲಿ ಸಣ್ಣ ಪುಟ್ಟ ವಿಚಾರಗಳಿಂದ ಮಾನಸಿಕ ಅಸಮಾಧಾನ ಕಾಡಲಿದೆ. ಒಳಾಂಗಣ ವಿನ್ಯಾಸಕಾರರಿಗೆ ಬೇಡಿಕೆ ಇರುವುದು. ಎಲೆಕ್ಟ್ರಾನಿಕ್ ಉಪಕರಣಗಳ ಮೇಲೆ ಹೆಚ್ಚಿನ ಬಂಡವಾಳ ಹೂಡಬಹುದು.

ತುಲಾ: ಪರಿಶ್ರಮವಿಲ್ಲದೇ ಕೆಲಸ ದೊರೆತಿದ್ದಕ್ಕೆ ಸಂತಸವಿದ್ದು ಹೊಸ ಸಂಸ್ಥೆಯಲ್ಲಿನ ಕೆಲಸಗಳು ಸುಲಭ ಮತ್ತು ಸಂತೋಷಮಯ ಎನಿಸುವುದು. ಕೆಲವೊಂದು ಬದಲಾವಣೆಯನ್ನು ರೂಢಿಸಿಕೊಳ್ಳಬೇಕಾಗುವುದು.

ವೃಶ್ಚಿಕ: ಕಷ್ಟ ಪರಿಸ್ಥಿತಿಯಲ್ಲಿ ಜನಬಲದ ಕೊರತೆಯಾದರೂ ಸಕಾಲಕ್ಕೆ ಸ್ನೇಹಿತರಿಂದ ಹಣದ ಸಹಾಯ ಸಿಗಲಿದೆ. ಸರ್ಕಾರದ ಕಂಟ್ರಾಕ್ಟ್ ಕೆಲಸ ದೊರೆತು ಸಂತೋಷವಾಗುವುದು. ಫಲಿತಾಂಶವು ಬರಲಿದೆ.

ಧನು: ಇನ್ನೊಬ್ಬರ ಮಾತುಗಳನ್ನು ಆಲಿಸಿಕೊಂಡು ವಿಚಾರಗಳನ್ನು ತೀರ್ಮಾನಿಸುವುದಕ್ಕಿಂತ ಸ್ವತಃ ಪರೀಕ್ಷೆ ನಡೆಸಿ ತೀರ್ಮಾನಕ್ಕೆ ಬರುವುದು ಸರಿಯಾದ ಮಾರ್ಗವೆನಿಸುತ್ತದೆ. ಸೌಜನ್ಯ, ಸರಳತೆಯಿಂದ ಹುದ್ದೆಗೆ ಮೆರುಗು.

ಮಕರ: ಕೇವಲ ವ್ಯಾವಹಾರಿಕವಾಗಿ ಅಲ್ಲದೆ ಪಾರಮಾರ್ಥಿಕ ದೃಷ್ಟಿಯಲ್ಲಿಯೂ ವಿಷಯಗಳನ್ನು ಯೋಚನೆ ಮಾಡುವುದು ಉತ್ತಮ. ವೃತ್ತಿಗೆ ಹೊರತಾದ ಕೆಲಸ ಮಾಡುವುದರಲ್ಲಿ ಆಸಕ್ತಿ ಹೆಚ್ಚಲಿದೆ. ಹಣಕಾಸಿನಲ್ಲಿ ಹಿಡಿತವಿರಲಿ.

ಕುಂಭ: ಗುರಿ ಸಾಧನೆಯತ್ತ ಆಸಕ್ತಿಯಿಂದ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವಿರಿ. ಹೆಚ್ಚಿನ ಪ್ರಯತ್ನಗಳಿಂದ ಉತ್ತಮ ಉದ್ಯೋಗವನ್ನು ಗಳಿಸಿಕೊಳ್ಳಬಹುದು. ಕಿರು ಪ್ರವಾಸದ ಮಾತು ಬರಲಿದೆ.

ಮೀನ: ಲೆಕ್ಕಚಾರದ ಜವಾಬ್ದಾರಿಯನ್ನು ಹೊತ್ತಿರುವವರು ಈ ದಿನ ಹೆಚ್ಚಿನ ಗಮನದಿಂದ ಕೆಲಸ ನಿರ್ವಹಿಸಿ. ಇಲ್ಲವಾದಲ್ಲಿ ಸಮಸ್ಯೆಗೆ ಸಿಲುಕುವಂತಾಗುವುದು. ಕಬ್ಬಿಣದ ವ್ಯವಹಾರದ ನಿರ್ವಹಣೆಗೆ ಸಾಲ ಮಾಡಬೇಕಾಗುವುದು.


ಪದಬಂಧ 5550 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಗತಿಸಿದ ಮಹಾ ಪುರುಷರ ಹುಟ್ಟುಹಬ್ಬ (3)
4.ಮನದೊಳಗೆ ಮಾಡಿರುವ ಕೂಲಂಕಷ ವಿಚಾರ (3)
5.ದೋಸ್ತಿಗೆ ಮಾಡಿರುವ ಒತ್ತಾಯ! (4)
6.ನಾಮ ಹಚ್ಚಿಕೊಂಡವನ ಹೆಸರು (4)
7.ಕರ್ತಾರನಿಗೆ ವಂದಿಸುತ್ತಿರುವ ಕೈ (2)
9.ನಾಗರಿಕತೆ ಕಲಿತ ಸ್ತ್ರೀ ತಿರುಗಿದ್ದಾಳಲ್ಲಾ? (2)
13.ಹಾದಿಯಲ್ಲಿ ಹೋಗುವವನು (4)
14.ಕರಾರಿಲ್ಲದೆ ಉಪಕಾರ ಮಾಡುವವನು (4)
15.ತಿರುವು ಮುರುವಾಗಿ ಕಾಣಿಸುತ್ತಿರುವ ಪಚನಾಂಗ (3)
16.ಅಗಿದು ಅಗಿದು ತಿನ್ನುವುದು (3)

ಮೇಲಿಂದ ಕೆಳಕ್ಕೆ

1.ಹಳ್ಳಿಯ ಅಧಿದೇವತೆ (5)
2.ಈತ ಮಂದಿಗೆಲ್ಲಾ ಯಜಮಾನ (5)
3.ಮನದೊಳಗೆ ನೀವುವಿಕೆ (3)
5.ಗೆಲುವನ್ನು ಸಾರುವ ಭೇರಿಯಿದು (4)
8.ದಾರಿಯಲ್ಲಿ ಕೊನೆಗೊಂಡಿರುವ ರಾಜಮಾರ್ಗ (4)
10.ಹೆಸರಿಡುವ ಶಾಸ್ತ್ರ (5)
11.ಹಲ್ಲುಗಳನ್ನು ತೊಳೆಯುವುದು (5)
12.ತೊಂದರೆ ಹೀಗೆ ಬಂದಿದೆ (3)



5549ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಂವಾದ 5.ಗಬ್ಬುನಾತ 6.ರಸಾಯನ 8.ಜಿಬರು 11.ಮುದುಕ 13.ವನರಾಜ 17.ತಡಗುಣಿ 18.ಕಕವ

ಮೇಲಿಂದ ಕೆಳಕ್ಕೆ:
1.ಸಂತ್ರಸ್ತ 2.ದಗಲ್ಬಾಜಿ 3.ಅಂತರ 4.ವಿಷಯ 7.ನಸುಕು 9.ರುಸುಮು 10.ಬಡವ 12.ಕರಣಿಕ 14.ನಕ್ಷತ್ರ 15.ಜತನ 16.ಗಡವ

ಸುಡೊಕು 5935

4				2		6		1
		2			5		9	
	7							
	4		3		1		7	
1	3	7		8		4	6	5
			4		7		1	
	2		5				3	
6		9				5		4
	5				2		8	7

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5934 ಸುಡೊಕು

3	2	6	5	8	4	9	7	1
7	9	8	1	2	3	5	6	4
5	4	1	9	7	6	3	2	8
6	7	3	8	1	5	2	4	9
4	5	2	7	6	9	1	8	3
8	1	9	3	4	2	6	5	7
9	3	4	2	5	8	7	1	6
1	6	5	4	9	7	8	3	2
2	8	7	6	3	1	4	9	5

ಭಾರತೀಯ ವಿಜ್ಞಾನ ಕಾಂಗ್ರೆಸ್‌ಗೆ ನೆರವು ಸ್ಥಗಿತ

ನವದೆಹಲಿ (ಪಿಟಿಐ): ಈ ಸಾಲಿನ 'ಭಾರತೀಯ ವಿಜ್ಞಾನ ಕಾಂಗ್ರೆಸ್' (ಐಎಸ್‌ಸಿ) ಅಧಿವೇಶನ ಆಯೋಜನೆ ಮಾಡಲು ಭಾರತೀಯ ವಿಜ್ಞಾನ ಕಾಂಗ್ರೆಸ್ ಅಸೋಸಿಯೇಶನ್‌ಗೆ (ಐಎಸ್‌ಸಿಎ) ಸರ್ಕಾರವು ಈ ಬಾರಿ ಹಣಕಾಸಿನ ನೆರವು ನೀಡಿಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ಅಧಿವೇಶನದ ವಸ್ತು ವಿಷಯ ಕುರಿತು ಐಎಸ್‌ಸಿಎ ಮತ್ತು ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ (ಡಿಎಸ್‌ಟಿ) ನಡುವೆ ಒಮ್ಮತ ಮೂಡದ ಕಾರಣ ಈ ಬಾರಿ ನೆರವು ನೀಡಲು ಡಿಎಸ್‌ಟಿ ನಿರಾಕರಿಸಿದೆ. '2024ರ ಐಎಸ್‌ಸಿಗೆ ನೆರವು ನೀಡುವುದನ್ನು ಸ್ಥಗಿತಗೊಳಿಸಲಾಗಿದೆ' ಎಂದು ಡಿಎಸ್‌ಟಿ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಘೋಷಿಸಿತ್ತು.

ಇದೇ ವೇಳೆ, ತನ್ನ ಕಾರ್ಯವ್ಯಾಪ್ತಿಯಲ್ಲಿ ಸರ್ಕಾರವು ಮೂಗು ತೂರಿಸುತ್ತಿದೆ ಎಂದು ಆರೋಪಿಸಿ ಐಎಸ್‌ಸಿಎ ಕೋರ್ಟ್ ಮೆಟ್ಟಿಲೇರಿದೆ.

ಐಎಸ್‌ಸಿಎ ತನ್ನ ಕಾರ್ಯವಿಧಾನವನ್ನು ಬದಲಾಯಿಸಿಕೊಂಡಿರುವ ಕಾರಣ, ಮುಂದಿನ ವರ್ಷಗಳಲ್ಲೂ ಕೇಂದ್ರ ಸರ್ಕಾರವು ವಿಜ್ಞಾನ ಕಾಂಗ್ರೆಸ್‌ಗೆ ಆರ್ಥಿಕ ಬೆಂಬಲ ನೀಡುವುದು ಅಸಂಭವನೀಯ ಎಂದು ಮೂಲಗಳು ತಿಳಿಸಿವೆ.

ಐಎಸ್‌ಸಿಎಯು ಸರ್ಕಾರದ ಸಮ್ಮತಿ ಪಡೆಯದೇ ಏಕಪಕ್ಷೀಯವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ. 2024ರ ಐಎಸ್‌ಸಿಯ ಆತಿಥ್ಯವನ್ನು ಲಖನೌ ವಿಶ್ವವಿದ್ಯಾಲಯ ವಹಿಸಿಕೊಳ್ಳಬೇಕಿತ್ತು. ಆದರೆ ಐಎಸ್‌ಸಿಎ ಅದನ್ನು ಜಲಂಧರ್‌ನ ಲವ್ಲಿ ಪ್ರೊಫೆಷನಲ್ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಿತು ಎಂದು ಡಿಎಸ್‌ಟಿ ಆರೋಪಿಸಿದೆ.

ಭಾರತೀಯ ವಿಜ್ಞಾನ ಕಾಂಗ್ರೆಸ್ ಅನ್ನು ಐಎಸ್‌ಸಿಎ ಪ್ರತಿವರ್ಷ ಆಯೋಜಿಸುತ್ತದೆ. ಇದು ಐದು ದಿನಗಳ ಕಾರ್ಯಕ್ರಮವಾಗಿದ್ದು, ಪ್ರತಿವರ್ಷ ಜನವರಿ 3ರಂದು ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ನಡೆಯುತ್ತಿತ್ತು. ಇದಕ್ಕೆ ಡಿಎಸ್‌ಟಿ ₹5 ಕೋಟಿ ಹಣಕಾಸಿನ ನೆರವು ನೀಡುತ್ತಿತ್ತು. ಈ ನೆರವಿನಲ್ಲಿ ಹೆಚ್ಚಿನ ಭಾಗವು ಕಾರ್ಯಕ್ರಮದ ಆತಿಥ್ಯ ವಹಿಸಿಕೊಳ್ಳುವ ಶಿಕ್ಷಣ ಸಂಸ್ಥೆಗೆ ಸಂದಾಯವಾಗುತ್ತಿತ್ತು.

ಡಿಎಸ್‌ಟಿ ನೆರವು ನೀಡಲು ನಿರಾಕರಿಸಿದ ಹಿನ್ನೆಲೆಯಲ್ಲಿ ಲವ್ಲಿ ಪ್ರೊಫೆಷನಲ್ ವಿ.ವಿಯು ಭಾರತೀಯ ವಿಜ್ಞಾನ ಕಾಂಗ್ರೆಸ್ ಆಯೋಜನೆಯಿಂದ ಹಿಂದೆ ಸರಿದಿದೆ. ಹೀಗಾಗಿ, ಫೆಬ್ರುವರಿಯಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲು ವಿ.ವಿಗಳಿಗೆ ಐಎಸ್‌ಸಿಎ ವೆಬ್‌ಸೈಟ್ ಮೂಲಕ ಆಹ್ವಾನ ನೀಡಲು ನಿರ್ಧರಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷರು ತಿಳಿಸಿದ್ದಾರೆ. 1914ರಿಂದಲೂ ಪ್ರತಿವರ್ಷ ಐಎಸ್‌ಸಿಯನ್ನು ಆಯೋಜಿಸಲಾಗುತ್ತಿದೆ.

ಎಸ್‌ಒಪಿ ಪರಿಗಣಿಸಿ ಹೈಕೋರ್ಟ್‌ಗಳು ನಿಯಮಾವಳಿ ರೂಪಿಸುವ ಬಗ್ಗೆ ಪರಿಶೀಲಿಸಲು ಸೂಚನೆ

ಅಧಿಕಾರಿಗೆ ಸಮನ್ಸ್: 'ಸುಪ್ರೀಂ' ನಿಯಮ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಎಸ್‌ಒಪಿ ರೂಪದಲ್ಲಿ ಮಾರ್ಗಸೂಚಿಗಳು
- ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾತಿಗೆ ಆದ್ಯತೆ
- ಅಸಾಮಾನ್ಯ ಸಂದರ್ಭದಲ್ಲಿ ಮಾತ್ರ ಅಧಿಕಾರಿಯ ಖುದ್ದು ಹಾಜರಿ

ನವದೆಹಲಿ: ನ್ಯಾಯಾಲಯದಲ್ಲಿ ಖುದ್ದಾಗಿ ಹಾಜರಿರುವಂತೆ ಸರ್ಕಾರಿ ಅಧಿಕಾರಿಗಳಿಗೆ ಸೂಚಿಸುವಾಗ ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಸುಪ್ರೀಂ ಕೋರ್ಟ್ ಬುಧವಾರ ರೂಪಿಸಿದೆ.

ಈ ಮಾರ್ಗಸೂಚಿಗಳು ಎಸ್‌ಒಪಿ (ಪ್ರಮಾಣಿತ ಕಾರ್ಯಾಚರಣೆ ವಿಧಾನ) ರೂಪದಲ್ಲಿವೆ. ಅಧಿಕಾರಿಯನ್ನು ಕರೆಸಿ, ನ್ಯಾಯಾಂಗ ನಿಂದನೆಯ ಹೆಸರಿನಲ್ಲಿ ಸರ್ಕಾರದ ಮೇಲೆ ಒತ್ತಡ ತರುವುದಕ್ಕೆ ಅವಕಾಶ ಇಲ್ಲ ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ತ್ರಿಸದಸ್ಯ ಪೀಠವು, ಅಸಾಮಾನ್ಯ ಸಂದರ್ಭಗಳಲ್ಲಿ ಮಾತ್ರ ನ್ಯಾಯಾಲಯವು ಸರ್ಕಾರಿ ಅಧಿಕಾರಿಯ ಖುದ್ದು ಹಾಜರಾತಿಗೆ ಸೂಚಿಸಬೇಕು ಎಂದು ಹೇಳಿದೆ. ಆದರೆ ಅದಕ್ಕೂ ಮೊದಲು, ಪ್ರಥಮ ಆಯ್ಕೆಯಾಗಿ ಆ ಅಧಿಕಾರಿಗಳಿಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾಗಲು ಅವಕಾಶ ನೀಡಬೇಕು ಎಂದು ಹೇಳಿದೆ.

'ನ್ಯಾಯಾಲಯದ ದೃಷ್ಟಿಕೋನಕ್ಕೂ, ಪ್ರಮಾಣಪತ್ರದಲ್ಲಿ ಅಧಿಕಾರಿ ಹೇಳಿರುವ ನಿಲುವಿಗೂ ಸಾಮ್ಯತೆ ಇಲ್ಲ ಎಂಬ ಒಂದೇ ಕಾರಣಕ್ಕೆ ಅಧಿಕಾರಿಯ ಖುದ್ದು ಹಾಜರಿಗೆ ಸೂಚಿಸುವಂತಿಲ್ಲ. ಇಂತಹ ಸಂದರ್ಭಗಳಲ್ಲಿ ಲಭ್ಯವಿರುವ ದಾಖಲೆಗಳನ್ನು ಬಳಸಿ ವಿಷಯ ಬಗೆಹರಿಸಿಕೊಳ್ಳುವ ಅವಕಾಶ ಇದ್ದರೆ, ಅವುಗಳ ಸತ್ಯಾಸತ್ಯತೆಯನ್ನು ಆಧರಿಸಿ ಆ ಕೆಲಸ ಮಾಡಬೇಕು' ಎಂದು ಕೋರ್ಟ್ ಹೇಳಿದೆ.

ಸರ್ಕಾರಿ ಅಧಿಕಾರಿಯ ದಿರಿಸು, ಶೈಕ್ಷಣಿಕ ಅರ್ಹತೆ ಆಧರಿಸಿ ಅವರನ್ನು ಅವಮಾನಿಸುವ ರೀತಿಯಲ್ಲಿ ಕೋರ್ಟ್‌ಗಳು ಮಾತನಾಡಬಾರದು. ಅಧಿಕಾರಿಯು ವಿಚಾರಣೆಯ ಉದ್ದಕ್ಕೂ ಎದ್ದುನಿಂತಿರುವ ಅಗತ್ಯ ಇಲ್ಲ ಎಂದು ತಿಳಿಸಿದೆ. 'ಸರ್ಕಾರವನ್ನು ಪ್ರತಿನಿಧಿಸುವ ವಕೀಲರನ್ನು ಅವಲಂಬಿಸುವ ಬದಲು, ಸರ್ಕಾರಿ ಅಧಿಕಾರಿಗಳನ್ನು ಮತ್ತೆ ಮತ್ತೆ ಕರೆಸಿಕೊಳ್ಳುವುದು ಸಂವಿಧಾನವು ಹೇಳಿರುವುದಕ್ಕೆ ವಿರುದ್ಧ' ಎಂದು ಕೂಡ ಸುಪ್ರೀಂ ಕೋರ್ಟ್ ಹೇಳಿದೆ.

ತಾನು ರೂಪಿಸಿರುವ ಎಸ್‌ಒಪಿ ಪರಿಗಣಿಸಿ ಎಲ್ಲ ಹೈಕೋರ್ಟ್‌ಗಳು ಸರ್ಕಾರಿ ಅಧಿಕಾರಿಗಳ ಹಾಜರಿ ಕುರಿತು ನಿಯಮ ರೂಪಿಸುವ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದೆ.

ನಿವೃತ್ತ ನ್ಯಾಯಮೂರ್ತಿಗಳಿಗೆ ಕೆಲವು ಸೌಲಭ್ಯಗಳನ್ನು ನೀಡುವಂತೆ ತಾನು ನೀಡಿದ್ದ ಸೂಚನೆಯನ್ನು ಪಾಲಿಸದೆ ಇದ್ದುದಕ್ಕಾಗಿ ಉತ್ತರ ಪ್ರದೇಶ ಸರ್ಕಾರದ ಹಿರಿಯ ಅಧಿಕಾರಿಗಳ ವಿರುದ್ಧ ಅಲಹಾಬಾದ್ ಹೈಕೋರ್ಟ್ ಆರಂಭಿಸಿದ ನ್ಯಾಯಾಂಗ ನಿಂದನೆ ಕ್ರಮವನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದೆ.

ಘಟನೋತ್ತರ ಪರಿಸರ ಅನುಮತಿಗೆ ತಡೆ

ನವದೆಹಲಿ (ಪಿಟಿಐ): ಪರಿಸರ ಅನುಮತಿಯನ್ನು ಘಟನೋತ್ತರವಾಗಿ ನೀಡಲು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಹೊರಡಿಸಿದ್ದ ಜ್ಞಾಪನಾಪತ್ರಕ್ಕೆ ಸುಪ್ರೀಂ ಕೋರ್ಟ್ ಬುಧವಾರ ತಡೆಯಾಜ್ಞೆ ನೀಡಿದೆ.

ಸ್ವಯಂಸೇವಾ ಸಂಘಟನೆ 'ವನಶಕ್ತಿ' ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಸಂದೀಪ್ ಮೆಹ್ತಾ ಅವರಿದ್ದ ವಿಭಾಗೀಯ ಪೀಠವು, ಸಚಿವಾಲಯಕ್ಕೆ ನೋಟಿಸ್ ನೀಡಲು ಆದೇಶಿಸಿದೆ.

ಯಾವುದೇ ಚಟುವಟಿಕೆ ಆರಂಭಿಸುವ ಮೊದಲು ಪರಿಸರ ಅನುಮತಿ ಪಡೆಯುವುದು ಕಡ್ಡಾಯ. ಆದರೆ, ಘಟನೋತ್ತರ ಪರಿಸರ ಅನುಮತಿ ನೀಡುವುದು ಪರಿಸರ ಸಂರಕ್ಷಣಾ ಕಾಯ್ದೆಯ ಆಶಯಗಳಿಗೆ ವಿರುದ್ಧವಾಗಿದೆ ಎಂದು ಸಂಘಟನೆಯ ಪರವಾಗಿ ವಾದಿಸಿದ ಹಿರಿಯ ವಕೀಲ ಗೋಪಾಲ್ ಶಂಕರನಾರಾಯಣನ್ ಹೇಳಿದರು.

2006ರಲ್ಲಿ ಹೊರಡಿಸಿದ ಪರಿಸರದ ಮೇಲಿನ ಪರಿಣಾಮಗಳ ಅಧ್ಯಯನ ಅಧಿಸೂಚನೆಯು, ಯಾವುದೇ ಯೋಜನೆಯ ಅನುಷ್ಠಾನಕ್ಕೂ ಮೊದಲು ಪರಿಸರ ಅನುಮತಿ ಪಡೆಯುವುದನ್ನು ಕಡ್ಡಾಯ ಮಾಡಿದೆ. ಆದರೆ 2017ರಲ್ಲಿ ಹೊರಡಿಸಿದ ಜ್ಞಾಪನಾ ಪತ್ರವೊಂದು, ಕಾನೂನು ಉಲ್ಲಂಘಿಸಿ ಕೆಲಸ ಆರಂಭಿಸಿದವರು ಕೆಲಸ ಆರಂಭಿಸಿದ ಆರು ತಿಂಗಳವರೆಗೂ ಘಟನೋತ್ತರ ಅನುಮತಿ ಪಡೆಯಬಹುದು ಎಂದು ಹೇಳಿತು. ಇದು ಸಮಸ್ಯೆ ಸೃಷ್ಟಿಸಿತು ಎಂದು ಶಂಕರನಾರಾಯಣನ್ ಹೇಳಿದರು.

ಯಾವುದೇ ಯೋಜನೆಯ ಆರಂಭಕ್ಕೂ ಮೊದಲು ಪರಿಸರದ ಮೇಲಿನ ಪರಿಣಾಮಗಳ ಅಧ್ಯಯನ ನಡೆಯಬೇಕೇ ವಿನಾ, ಯೋಜನೆಯ ಆರಂಭದ ನಂತರದಲ್ಲಿ ಅಲ್ಲ ಎಂದು ಸಂಘಟನೆಯು ಅರ್ಜಿಯಲ್ಲಿ ಹೇಳಿದೆ. ಪರಿಸರ ಅನುಮತಿಯನ್ನು ಘಟನೋತ್ತರವಾಗಿ ನೀಡುವಂತೆ ಕೋರುವ ಯಾವುದೇ ಅರ್ಜಿಗಳನ್ನು ಮಾನ್ಯ ಮಾಡಬಾರದು ಎಂದು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯಕ್ಕೆ ಸೂಚಿಸಬೇಕು ಎಂದು ಕೋರಿದೆ.



ಮಹುವಾ ಮೊಯಿತ್ರಾ ಅರ್ಜಿ: ಪ್ರತಿಕ್ರಿಯೆಗೆ ಸೂಚನೆ



ಮಹುವಾ ಮೊಯಿತ್ರಾ

ನವದೆಹಲಿ (ಪಿಟಿಐ): ಟಿಎಂಸಿ ನಾಯಕಿ ಮಹುವಾ ಮೊಯಿತ್ರಾ ಅವರು ತಮ್ಮನ್ನು ಲೋಕಸಭೆಯಿಂದ ಉಚ್ಚಾಟಿಸಿದ್ದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡುವಂತೆ ಸುಪ್ರೀಂ ಕೋರ್ಟ್, ಲೋಕಸಭೆಯ ಪ್ರಧಾನ ಕಾರ್ಯದರ್ಶಿಗೆ ಸೂಚಿಸಿದೆ.

ಆದರೆ, ಅರ್ಜಿ ಇತ್ಯರ್ಥವಾಗುವವರೆಗೆ ತಮಗೆ ಲೋಕಸಭೆಯ ಕಲಾಪಗಳಿಗೆ ಹಾಜರಾಗಲು ಅವಕಾಶ ಕಲ್ಪಿಸಬೇಕು ಎಂದು ಮಹುವಾ ಅವರು ಕೋರಿರುವುದನ್ನು ಮಾನ್ಯ ಮಾಡಲು ಕೋರ್ಟ್ ನಿರಾಕರಿಸಿದೆ.

ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಹಾಗೂ ಲೋಕಸಭೆಯ ನೀತಿ ಸಮಿತಿಗೆ ನೋಟಿಸ್ ನೀಡಲು ಕೋರ್ಟ್ ಒಪ್ಪಿಲ್ಲ. ಮುಂದಿನ ವಿಚಾರಣೆಯನ್ನು ಮಾರ್ಚ್ 11ಕ್ಕೆ ನಿಗದಿ ಮಾಡಲಾಗಿದೆ.

ಲೋಕಸಭೆಯ ಪ್ರಧಾನ ಕಾರ್ಯದರ್ಶಿ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, 'ಪ್ರಭುತ್ವದ ಇನ್ನೊಂದು ಸಾರ್ವಭೌಮ ಅಂಗವಾದ ಸಂಸತ್ತಿನ ಆಂತರಿಕ ವಿಚಾರದಲ್ಲಿ ಕೋರ್ಟ್ ಹಸ್ತಕ್ಷೇಪ ಮಾಡಬಾರದು' ಎಂದು ಮನವಿ ಮಾಡಿದರು.

'ನ್ಯಾಯಾಂಗವು ಸಂಸತ್ತಿನ ಕಾರ್ಯಗಳಲ್ಲಿ ಹಸ್ತಕ್ಷೇಪ ನಡೆಸುವುದು ಸಂವಿಧಾನಕ್ಕೆ ವಿರುದ್ಧವಾಗುತ್ತದೆ' ಎಂದು ಅವರು ಹೇಳಿದರು. ಲೋಕಸಭೆಯ ನೀತಿ ಸಮಿತಿಯ ವರದಿಯನ್ನು ಆಧರಿಸಿ ಮಹುವಾ ಅವರನ್ನು ಲೋಕಸಭೆಯಿಂದ ಉಚ್ಚಾಟಿಸಲಾಗಿದೆ.

ಜನರಲ್ ಸುಲೇಮಾನಿ 4ನೇ ಸಂಸ್ಮರಣೆ ಕಾರ್ಯಕ್ರಮದಲ್ಲಿ ದುರಂತ

ಇರಾನ್‌ನಲ್ಲಿ ಸ್ಫೋಟ: 103 ಮಂದಿ ಸಾವು



ಇರಾನ್‌ನ ಕೆರ್ಮಾನ್ ನಗರದಲ್ಲಿ ಬುಧವಾರ ಸಂಭವಿಸಿದ ಸ್ಫೋಟದಲ್ಲಿ ಕಾರುಗಳು ಹಾಗೂ ಆಂಬುಲೆನ್ಸ್‌ಗಳು ಹಾನಿಗೊಳಗಾಗಿವೆ —ಎಎಫ್‌ಪಿ ಚಿತ್ರ

ದುಬೈ(ಎಪಿ): ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್‌ನ ಕಮಾಂಡರ್ ಮೇಜರ್ ಜನರಲ್ ಖಾಸಿಂ ಸುಲೇಮಾನಿ ಹತ್ಯೆಯ ನಾಲ್ಕನೇ ವರ್ಷದ ಸ್ಮರಣೆ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದ ವೇಳೆ ಬುಧವಾರ ಸಂಭವಿಸಿದ ಎರಡು ಸ್ಫೋಟಗಳಲ್ಲಿ ಕನಿಷ್ಠ 103 ಮಂದಿ ಮೃತಪಟ್ಟಿದ್ದು, ಇತರ 188 ಜನರು ಗಾಯಗೊಂಡಿದ್ದಾರೆ.

ಇರಾನ್ ರಾಜಧಾನಿ ತೆಹರಾನ್‌ನಿಂದ 820 ಕಿ.ಮೀ. ದೂರ, ಆಗ್ನೇಯ ದಿಕ್ಕಿನಲ್ಲಿರುವ ಕೆರ್ಮಾನ್ ನಗರದಲ್ಲಿ ಈ ಸ್ಫೋಟಗಳು ಸಂಭವಿಸಿವೆ.

2020ರ ಜನವರಿಯಲ್ಲಿ ಇರಾಕ್ ರಾಜಧಾನಿ ಬಾಗ್ದಾದ್‌ನ ವಿಮಾನ ನಿಲ್ದಾಣದ ಹೊರಭಾಗದಲ್ಲಿ, ಅಮೆರಿಕ ಡ್ರೋನ್ ಬಳಸಿ ನಡೆಸಿದ್ದ ದಾಳಿಯಲ್ಲಿ ಸುಲೇಮಾನಿಯನ್ನು ಹತ್ಯೆ ಮಾಡಿತ್ತು. ಸುಲೇಮಾನಿ ಸಮಾಧಿ ಇರುವ ಕೆರ್ಮಾನ್ ನಗರದ ಸ್ಮಶಾನದಲ್ಲಿ ಸಂಸ್ಮರಣೆ ಕಾರ್ಯಕ್ರಮ ನಡೆಯುತ್ತಿದ್ದ ಸ್ಥಳದ ಸಮೀಪ ಈ ಸ್ಫೋಟಗಳು ಸಂಭವಿಸಿವೆ.

ಇರಾನ್ ಸರ್ಕಾರಿ ಸ್ವಾಮ್ಯದ ಮಾಧ್ಯಮಗಳು ಇದನ್ನು 'ಭಯೋತ್ಪಾದಕ ದಾಳಿ' ಎಂದು ಕರೆದಿವೆ. ದಾಳಿ ಹೊಣೆಯನ್ನು ಈ ವರೆಗೆ ಯಾವುದೇ ಸಂಘಟನೆ ಹೊತ್ತುಕೊಂಡಿಲ್ಲ. ಕೆರ್ಮಾನ್ ಡೆಪ್ಯುಟಿ ಗವರ್ನರ್ ರಹಮಾನ್ ಜಲಾಲಿ ಅವರು ಸಹ ಈ ಕೃತ್ಯವನ್ನು 'ಭಯೋತ್ಪಾದಕ ದಾಳಿ' ಎಂದು ಹೇಳಿದ್ದಾರೆ.

ಮೊದಲ ಸ್ಫೋಟ ಸಂಭವಿಸಿದ 15 ನಿಮಿಷಗಳ ನಂತರ ಎರಡನೇ ಸ್ಫೋಟ ಸಂಭವಿಸಿರುವ ದೃಶ್ಯಗಳು ವಿಡಿಯೊದಲ್ಲಿ ಸೆರೆಯಾಗಿವೆ. ಮೊದಲ ಸ್ಫೋಟದಲ್ಲಿ ಗಾಯಗೊಂಡವರ ರಕ್ಷಣಾ ಕಾರ್ಯದಲ್ಲಿ ನಿರತರಾಗಿದ್ದ ತುರ್ತು ಸೇವೆಗಳ ಸಿಬ್ಬಂದಿಯನ್ನು ಗುರಿಯಾಗಿಸಿ ಉಗ್ರರು ಎರಡನೇ ದಾಳಿ ನಡೆಸಿದ್ದಾರೆ. ಜನರ ಚೀರಾಟವೂ ವಿಡಿಯೊದಲ್ಲಿ ಸೆರೆಯಾಗಿದೆ.

ಮಧ್ಯಪ್ರಾಚ್ಯ ಮತ್ತಷ್ಟು ಉದ್ವಿಗ್ನ: ಇಸ್ರೇಲ್ ಹಾಗೂ ಹಮಾಸ್ ಬಂಡುಕೋರರ ನಡುವಿನ ಸಂಘರ್ಷದಿಂದ ಈಗಾಗಲೇ ಮಧ್ಯಪ್ರಾಚ್ಯ ಕಾದ ಕುಲುಮೆಯಂತಾಗಿದ್ದರೆ, ಈಗ ಇರಾನ್‌ನಲ್ಲಿ ಸಂಭವಿಸಿರುವ 'ಭಯೋತ್ಪಾದಕ ದಾಳಿ'ಯು ಪ್ರದೇಶದಲ್ಲಿ ಮತ್ತಷ್ಟು ಉದ್ವಿಗ್ನತೆ ಮನೆ ಮಾಡುವಂತೆ ಮಾಡಿದೆ.

ಇರಾನ್, ಶಿಯಾ ಬಾಹುಳ್ಯವಿರುವ ದೇಶ. ಸುನ್ನಿ ಉಗ್ರ ಸಂಘಟನೆಗಳು ಈ ಹಿಂದೆ ಹಲವು ಬಾರಿ ಇರಾನ್ ಮೇಲೆ ಭೀಕರ ದಾಳಿಗಳನ್ನು ನಡೆಸಿ, ಅಪಾರ ಸಾವು–ನೋವಿಗೆ ಕಾರಣವಾಗಿವೆ.

ಪ್ರತಿರೋಧ: 2022ರಲ್ಲಿ 22 ವರ್ಷದ ಮಹ್ಸಾ ಅಮಿನಿ ಎಂಬ ಯುವತಿ, ಪೊಲೀಸ್ ದೌರ್ಜನ್ಯದಿಂದಾಗಿ ಮೃತಪಟ್ಟ ನಂತರ ಇರಾನ್‌ನಲ್ಲಿ ಭಾರಿ ಪ್ರತಿಭಟನೆಗಳು ನಡೆದಿದ್ದವು.

ಸುಲೇಮಾನಿ ಯಾರು?

ಖಾಸಿಂ ಸುಲೇಮಾನಿ, ರೆವಲ್ಯೂಷನರಿ ಗಾರ್ಡ್ಸ್‌ನ ಪ್ರಧಾನ ಅಂಗವಾದ ಕುದ್ಸ್ ಪಡೆಯ ಮುಖ್ಯಸ್ಥನಾಗಿದ್ದ. 2011ರಲ್ಲಿ ಅರಬ್ ಸ್ಪ್ರಿಂಗ್ ಪ್ರತಿಭಟನೆ ಶುರುವಾಗಿದ್ದಾಗ, ಸಿರಿಯಾ ಅಧ್ಯಕ್ಷ ಬಶರ್ ಅಸ್ಸಾದ್ ನೇತೃತ್ವದ ಸರ್ಕಾರ ಉಳಿಸುವಲ್ಲಿ ಸುಲೇಮಾನಿ ಪ್ರಮುಖ ಪಾತ್ರ ವಹಿಸಿದ್ದ.

2003ರಲ್ಲಿ ಇರಾಕ್ ಮೇಲೆ ಅಮೆರಿಕ ಆಕ್ರಮಣ ಮಾಡುವವರೆಗೂ ಸುಲೇಮಾನಿ ಅಷ್ಟಾಗಿ ಜನಪ್ರಿಯ ವ್ಯಕ್ತಿಯಾಗಿರಲಿಲ್ಲ. ಇರಾಕ್‌ನಲ್ಲಿದ್ದ ಅಮೆರಿಕ ಪ್ರಜೆಗಳು ಹಾಗೂ ಯೋಧರನ್ನು ಗುರಿಯಾಗಿಸಿ ಬಾಂಬ್ ದಾಳಿಗಳು ನಡೆದು, ನೂರಾರು ಮಂದಿ ಮೃತಪಟ್ಟರು. ಆಗ, ಸುಲೇಮಾನಿ ಹತ್ಯೆಗೆ ಅಮೆರಿಕ ಅಧಿಕಾರಿಗಳು ಶಪಥ ಮಾಡಿದ್ದರು.

ನಂತರ, 2020ರಲ್ಲಿ , ಬಾಗ್ದಾದ್‌ನ ವಿಮಾನ ನಿಲ್ದಾಣದ ಹೊರಭಾಗದಲ್ಲಿ ಡ್ರೋನ್ ಬಳಸಿ ದಾಳಿ ನಡೆಸಿದ ಅಮೆರಿಕ ಪಡೆಗಳು, ಸುಲೇಮಾನಿ ಹತ್ಯೆ ಮಾಡಿದವು. ಕೆರ್ಮಾನ್‌ನಲ್ಲಿ ಸುಲೇಮಾನಿ ಅಂತ್ಯಕ್ರಿಯೆ ವೇಳೆ ಭಾರಿ ಜನ ಸೇರಿದ್ದರು. ಆಗ ಸಂಭವಿಸಿದ್ದ ಕಾಲ್ತುಳಿತದಲ್ಲಿ ಕನಿಷ್ಠ 56 ಮಂದಿ ಮೃತಪಟ್ಟಿದ್ದರಲ್ಲದೇ, 200ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು. ಸುಲೇಮಾನಿ ಹತ್ಯೆಗೆ ಪ್ರತೀಕಾರ ತೆಗೆದುಕೊಳ್ಳುವುದಾಗಿ ಇರಾನ್ ಆಗ ಹೇಳಿತ್ತು.

'ಸೊರೇನ್ ಅವರೇ ಮುಖ್ಯಮಂತ್ರಿ'

ರಾಂಚಿ (ಪಿಟಿಐ): ಎಂಥದ್ದೇ ಪರಿಸ್ಥಿತಿಯಲ್ಲೂ ತಾವು ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ಜೊತೆ ನಿಲ್ಲುವುದಾಗಿ ಜಾರ್ಖಂಡ್‌ನ ಆಡಳಿತಾರೂಢ ಮೈತ್ರಿಕೂಟದ ಶಾಸಕರು ಬುಧವಾರ ಹೇಳಿದ್ದಾರೆ. ಜೊತೆಗೆ, ಸೊರೇನ್ ಅವರೇ ಮುಖ್ಯಮಂತ್ರಿ ಆಗಿ ಮುಂದುವರೆಯಲಿದ್ದಾರೆ ಎಂದು ಕೂಡಾ ಅವರು ತಿಳಿಸಿದ್ದಾರೆ.

ಸೊರೇನ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಸಮನ್ಸ್ ನೀಡಿರುವ ಹಿನ್ನೆಲೆಯಲ್ಲಿ ಸೃಷ್ಟಿಯಾಗಿರುವ ರಾಜಕೀಯ ಸನ್ನಿವೇಶ ಕುರಿತು ಚರ್ಚಿಸುವ ಸಲುವಾಗಿ ರಾಂಚಿಯಲ್ಲಿ ಸಭೆ ನಡೆಸಲಾಯಿತು. ಸೊರೇನ್ ಅವರೇ ಸಭೆಯ ನೇತೃತ್ವ ವಹಿಸಿದ್ದರು.

ಈ ಸನ್ನಿವೇಶವನ್ನು ಒಗ್ಗಟ್ಟಿನಿಂದ ಎದುರಿಸುವುದಾಗಿ ಮತ್ತು ರಾಜ್ಯ ಸರ್ಕಾರಕ್ಕೆ ಯಾವುದೇ ಬೆದರಿಕೆಯೂ ಇಲ್ಲ ಎಂದು ಸಭೆ ಬಳಿಕ ಶಾಸಕರು ಹೇಳಿದ್ದಾರೆ.

ಸೊರೇನ್ ಅವರ ನೇತೃತ್ವದಲ್ಲೇ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ಪಕ್ಷವು ಲೋಕಸಭೆ ಚುನಾವಣೆ ಎದುರಿಸಲಿದೆ ಎಂದು ಪಕ್ಷದ ಹಿರಿಯ ನಾಯಕ ಮಿಥಿಲೇಶ್ ಠಾಕೂರ್ ಅವರು ಹೇಳಿದ್ದಾರೆ.



'ಮಹಿಳಾ ಸಬಲೀಕರಣಕ್ಕೆ ಬಿಜೆಪಿ ಒತ್ತು'



ನರೇಂದ್ರ ಮೋದಿ

ತ್ರಿಶ್ಶೂರ್ (ಪಿಟಿಐ): ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ಉದ್ದೇಶದ ಮಹಿಳಾ ಮೀಸಲಾತಿ ಮಸೂದೆ ಜಾರಿ ಮಾಡುವುದನ್ನು ಕಾಂಗ್ರೆಸ್ ಮತ್ತು ಎಡ ಪಕ್ಷಗಳು ವಿಳಂಬ ಮಾಡಿದವು.

ಆದರೆ, ಈ ಮಸೂದೆ ಜಾರಿಗೆ ಕ್ರಮ ಕೈಗೊಳ್ಳುವ ಮೂಲಕ ಬಿಜೆಪಿಯು ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಇಲ್ಲಿ ಹೇಳಿದರು.

ಇಲ್ಲಿ ನಡೆದ ಮಹಿಳೆಯರ ಸಮಾವೇಶ ಉದ್ದೇಶಿಸಿ ಮಾತನಾಡಿದ ಅವರು, ನಾರಿ ಶಕ್ತಿ ವಂದನೆ ಅಧಿನಿಯಮ (ಮಹಿಳಾ ಮೀಸಲಾತಿ) ಈಗ ಕಾನೂನಾಗಿದೆ. ಮಹಿಳಾ ಸಬಲೀಕರಣದ ಬಗ್ಗೆ ತಮಗಿರುವ ಬದ್ಧತೆಯನ್ನು ಈ ರೀತಿ ಸಾಬೀತುಪಡಿಸಿರುವುದಾಗಿ ಹೇಳಿದರು.

ಜೊತೆಗೆ, 'ತ್ರಿವಳಿ ತಲಾಖ್‌ನಿಂದ ಮುಕ್ತಿ ದೊರಕಿಸಿಕೊಡುವುದಾಗಿ ನಾನು ಮುಸ್ಲಿಂ ಮಹಿಳೆಯರಿಗೆ ಭರವಸೆ ನೀಡಿದ್ದೆ. ಅದನ್ನೂ ಈಡೇರಿಸಿದ್ದೇನೆ' ಎಂದರು.

ದೇಶಕ್ಕೆ ಸ್ವಾತಂತ್ರ್ಯ ಬಂದ ಬಳಿಕ ಕಾಂಗ್ರೆಸ್ ಮತ್ತು ಎಡಪಕ್ಷಗಳು ಮಹಿಳೆಯರ ಶಕ್ತಿಗುಂದಿಸಿದ್ದು ದುರದೃಷ್ಟಕರ ಎಂದರು.

ಲಕ್ಷದ್ವೀಪ: ಯೋಜನೆಗಳಿಗೆ ಶಂಕುಸ್ಥಾಪನೆ

ಕವರಟ್ಟಿ, ಲಕ್ಷದ್ವೀಪ (ಪಿಟಿಐ): ಕೇಂದ್ರಾಡಳಿತ ಪ್ರದೇಶ ಲಕ್ಷದ್ವೀಪದಲ್ಲಿ ಪ್ರಧಾನಿ ಮೋದಿ ಅವರು ಬುಧವಾರ ₹ 1,150 ಕೋಟಿ ಮೊತ್ತದ ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಿದರು.

ಕೇಂದ್ರದಲ್ಲಿದ್ದ ಬಿಜೆಪಿಯೇತರ ಸರ್ಕಾರಗಳು ತಮ್ಮ ಪಕ್ಷಗಳ ಅಭಿವೃದ್ಧಿಗೆ ಮಾತ್ರ ದಶಕಗಳವರೆಗೆ ಆದ್ಯತೆ ನೀಡಿದರು. ಗಡಿ ಪ್ರದೇಶ, ಸಾಗರದ ಮಧ್ಯೆ ಇರುವ ಪ್ರದೇಶಗಳತ್ತ ಗಮನ ಹರಿಸಲಿಲ್ಲ ಎಂದರು.

'ಮುಂದಿನ 1000 ದಿನಗಳೊಳಗೆ ನೀವು ವೇಗದ ಇಂಟರ್‌ನೆಟ್ ಸೌಲಭ್ಯ ಹೊಂದುವಿರಿ ಎಂದು 2020ರಲ್ಲಿ ನಾನು ಭರವಸೆ ನೀಡಿದ್ದೆ. ಇಂದು ಕೊಚ್ಚಿ– ಲಕ್ಷದ್ವೀಪ ಸಬ್‌ಮೆರಿನ್ ಆಪ್ಟಿಕಲ್ ಫೈಬರ್ ಯೋಜನೆ ಉದ್ಘಾಟಿಸಲಾಗಿದೆ. ಈಗ ಲಕ್ಷದ್ವೀಪದಲ್ಲಿ ಇಂಟರ್‌ನೆಟ್ 100 ಪಟ್ಟು ಹೆಚ್ಚಿನ ವೇಗದಲ್ಲಿ ದೊರೆಯುತ್ತದೆ' ಎಂದು ಹೇಳಿದರು.

ಸಚಿವೆ ನಿರ್ಮಲಾ ವಜಾಕ್ಕೆ ಐಆರ್‌ಎಸ್ ಅಧಿಕಾರಿ ಆಗ್ರಹ

ಪ್ರಜಾವಾಣಿ ವಾರ್ತೆ

ಚೆನ್ನೈ: ಜಿಎಸ್‌ಟಿ ಮತ್ತು ಸೆಂಟ್ರಲ್ ಎಕ್ಸೈಸ್‌ನ ಡೆಪ್ಯುಟಿ ಕಮಿಷನರ್ (ಚೆನ್ನೈ ಉತ್ತರ) ಬಿ.ಬಾಲಮುರುಗನ್ ಅವರು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಸಂಪುಟದಿಂದ ವಜಾಗೊಳಿಸುವಂತೆ ಒತ್ತಾಯಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದಿದ್ದಾರೆ.

ಬಾಲಮುರುಗನ್ ಅವರು ಇದೇ 31ರಂದು ನಿವೃತ್ತರಾಗಲಿದ್ದಾರೆ.

ಸೇಲಂ ಜಿಲ್ಲೆಯ ಆತ್ತೂರು ಬಳಿ 6.5 ಎಕರೆ ಜಮೀನು ಹೊಂದಿರುವ ದಲಿತ ಸಮುದಾಯದ ಇಬ್ಬರು ರೈತರಿಗೆ ಸೂಕ್ತ ಕಾರಣ ನೀಡದೆ ಜಾರಿ ನಿರ್ದೇಶನಾಲಯ (ಇ.ಡಿ) ನೋಟಿಸ್ ನೀಡಿತ್ತು. ಇ.ಡಿ ಕ್ರಮಕ್ಕೆ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ನಂತರ, ಸಾಕ್ಷ್ಯಾಧಾರಗಳ ಕೊರತೆ ಕಾರಣ ನೀಡಿ, ಆತ್ತೂರು ನ್ಯಾಯಾಲಯವು ಈ ಇಬ್ಬರು ರೈತರನ್ನು ಖುಲಾಸೆಗೊಳಿಸಿತ್ತು.

ರಾಷ್ಟ್ರಪತಿ ಅವರಿಗೆ ಬರೆದಿರುವ ಪತ್ರದಲ್ಲಿ, ಇಬ್ಬರು ರೈತರಿಗೆ ಇ.ಡಿ ನೋಟಿಸ್ ನೀಡಿದ್ದ ಪ್ರಕರಣ ಉಲ್ಲೇಖಿಸಿರುವ ಬಾಲಮುರುಗನ್, 'ಇ.ಡಿ, ಬಿಜೆಪಿಯ ಕೈಗೊಂಬೆಯಾಗಿರುವುದನ್ನು ಈ ಪ್ರಕರಣ ತೋರಿಸಿದೆ. ನಿರ್ಮಲಾ ಸೀತಾರಾಮನ್ ಅವರು ಹಣಕಾಸು ಸಚಿವೆಯಾಗಿ ಅಧಿಕಾರ ವಹಿಸಿಕೊಂಡ ನಂತರ ಇ.ಡಿ ಯನ್ನು ಬಿಜೆಪಿ ನೀತಿ ಜಾರಿ ನಿರ್ದೇಶನಾಲಯವನ್ನಾಗಿ ಪರಿವರ್ತಿಸಿದ್ದಾರೆ' ಎಂದು ಆರೋಪಿಸಿದ್ದಾರೆ.

ಅಯೋಧ್ಯೆ ನಗರದ ಹೃದಯಭಾಗದಲ್ಲಿರುವ ಚೌಕ

ಲತಾ ಮಂಗೇಶ್ಕರ್ ಚೌಕ ಈಗ 'ಸೆಲ್ಫಿ ಪಾಯಿಂಟ್'



ಅಯೋಧ್ಯೆಯ ಲತಾ ಮಂಗೇಶ್ಕರ್ ಚೌಕದ ಎದುರು ದಂಪತಿ ಸೆಲ್ಫಿ ತೆಗೆದುಕೊಂಡರು —ಪಿಟಿಐ ಚಿತ್ರ

ಅಯೋಧ್ಯೆ (ಪಿಟಿಐ): ಅಯೋಧ್ಯೆ ನಗರದ ಹೃದಯಭಾಗದಲ್ಲಿರುವ ಲತಾ ಮಂಗೇಶ್ಕರ್ ಚೌಕವು ಈಗ ಪ್ರಮುಖ ಸೆಲ್ಫಿ ಪಾಯಿಂಟ್ ಆಗಿ ಮಾರ್ಪಾಡಾಗಿದೆ. ಸ್ಥಳೀಯರು ಮತ್ತು ನಗರಕ್ಕೆ ಆಗಮಿಸುತ್ತಿರುವ ಪ್ರವಾಸಿಗರು ಈ ಸ್ಥಳಕ್ಕೆ ಭೇಟಿ ನೀಡಿ, ಸೆಲ್ಫಿ ತೆಗೆದುಕೊಂಡು ಸಂಭ್ರಮಿಸುತ್ತಿದ್ದಾರೆ.

ಸುಪ್ರಸಿದ್ಧ ಗಾಯಕಿ ಲತಾ ಮಂಗೇಶ್ಕರ್ ಅವರ ಸ್ಮರಣಾರ್ಥವಾಗಿ ನಿರ್ಮಿಸಿರುವ ಈ ಚೌಕದಲ್ಲಿ 14 ಟನ್ ತೂಕದ ವೀಣೆಯ ಕಲಾಕೃತಿಯನ್ನು ನಿರ್ಮಿಸಲಾಗಿದೆ. ಇದು ಇಲ್ಲಿಯ ಪ್ರಮುಖ ಆಕರ್ಷಣೆಯಾಗಿದೆ. ಈ ಚೌಕವು ರಾಮಪಥ ಮತ್ತು ಧರ್ಮಪಥವನ್ನು ವಿಭಾಗಿಸುತ್ತದೆ. ಜನವರಿ 22ರಂದು ರಾಮಮಂದಿರದಲ್ಲಿ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮ ನಡೆಯುವ ಹಿನ್ನೆಲೆಯಲ್ಲಿ ಚೌಕವನ್ನು ಹೂವು ಮತ್ತು ದೀಪಗಳಿಂದ ಅಲಂಕರಿಸಲಾಗಿದೆ. ರಾಮಪಥ ಮತ್ತು ಧರ್ಮಪಥ ರಸ್ತೆಗಳಿಗೂ ದೀಪಾಲಂಕಾರ ಮಾಡಲಾಗಿದೆ.

ಹೊಸ ವರ್ಷಾಚರಣೆ: ಸ್ಥಳೀಯರು ಮತ್ತು ಹತ್ತಿರದ ಪಟ್ಟಣಗಳ ನಿವಾಸಿಗಳು ಡಿಸೆಂಬರ್ 31ರಂದು ಲತಾ ಮಂಗೇಶ್ಕರ್ ಚೌಕದ ಬಳಿ ಸೇರಿ ಹೊಸ ವರ್ಷವನ್ನು ಸ್ವಾಗತಿಸಿದರು. ಆ ದಿನ ರಾತ್ರಿ 10 ಗಂಟೆಯಿಂದಲೇ ಜನರು ಚೌಕಕ್ಕೆ ಆಗಮಿಸಿ ಸೆಲ್ಫಿಗಳನ್ನು ತೆಗೆದುಕೊಳ್ಳಲು ಆರಂಭಿಸಿದ್ದರು.

'ಹೊಸ ವರ್ಷ ಸಂಭ್ರಮಾಚರಣೆಗಾಗಿ ನಾವು ಲಖನೌಗೆ ಹೋಗುತ್ತಿದ್ದೆವು ಅಥವಾ ಮನೆಯಲ್ಲೇ ಆಚರಿಸುತ್ತಿದ್ದೆವು. ಈಗ ನಮ್ಮ ನಗರವೇ ಅಭಿವೃದ್ಧಿಗೊಂಡಿದೆ. ಇಲ್ಲಿ ಲತಾ ಮಂಗೇಶ್ಕರ್ ಚೌಕದಂಥ ಸ್ಥಳಗಳು ಇವೆ. ಹೊಸ ವರ್ಷ ಸಂಭ್ರಮಾಚರಣೆಗಾಗಿ ಹತ್ತಿರದ ಪಟ್ಟಣಗಳಿಂದಲೂ ಜನರು ಈ ಬಾರಿ ಅಯೋಧ್ಯೆಗೆ ಬಂದಿದ್ದಾರೆ' ಎಂದು ಸ್ಥಳೀಯರಾದ ಅಖಿಲೇಶ್ ಪಾಂಡೆ ಹೇಳಿದ್ದಾರೆ.

ಮೋದಿ ರೋಡ್ ಶೋ ಪ್ರಭಾವ: ಈ ಚೌಕಕ್ಕೆ ದಿಢೀರ್ ಖ್ಯಾತಿ ಬಂದಿದ್ದಕ್ಕೆ ಮತ್ತು ಇದು ಸೆಲ್ಫಿ ಪಾಯಿಂಟ್ ಆಗಿ ಬದಲಾಗಿದ್ದಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಡಿಸೆಂಬರ್ 30ರಂದು ನಡೆಸಿದ ರೋಡ್ ಶೋ ಕಾರಣ ಎಂದು ಇಲ್ಲಿಯ ಸ್ಥಳೀಯರು ಹೇಳುತ್ತಾರೆ.

ರೋಡ್ ಶೋ ವೇಳೆ ಮೋದಿ ಅವರು ಈ ಚೌಕದ ಬಳಿ ನಿಂತು ಚಿತ್ರ ತೆಗೆಸಿಕೊಂಡಿದ್ದರು. ಅದರ ಹಿಂದಿನ ದಿನವಷ್ಟೇ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಚೌಕದಲ್ಲಿ ಸೆಲ್ಫಿ ತೆಗೆದುಕೊಂಡಿದ್ದರು. ಇದು ಸ್ಥಳೀಯರಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸಂಚಲನ ಮೂಡಿಸಿತ್ತು ಎನ್ನಲಾಗಿದೆ.

ಲತಾ ಮಂಗೇಶ್ಕರ್ ಚೌಕವು ಅಯೋಧ್ಯೆಯ ನಯಾ ಘಾಟ್ ಬಳಿ ಇದೆ. 2022ರ ಸೆಪ್ಟೆಂಬರ್ 28ರಂದು ಲತಾ ಅವರ 93ನೇ ಜಯಂತಿ ದಿನ ಇದನ್ನು ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ಆಗಿ ಉದ್ಘಾಟಿಸಿದ್ದರು.

ಕಾರ್ಯಕ್ರಮದಲ್ಲಿ 'ಕೈ' ನಾಯಕರು ಭಾಗವಹಿಸಲಿ'

ಮುಂಬೈ (ಪಿಟಿಐ): ವಿಶೇಷ ಆಹ್ವಾನ ದೊರಕಿದರೆ, ಕಾಂಗ್ರೆಸ್ ನಾಯಕರು ಅಯೋಧ್ಯೆಯ ರಾಮಮಂದಿರದಲ್ಲಿ ರಾಮ ಮೂರ್ತಿಯ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು ಎಂದು ಶಿವಸೇನಾ (ಯುಬಿಟಿ) ಹೇಳಿದೆ.

ಬಾಬರಿ ಮಸೀದಿ ಧ್ವಂಸವಾದ ಸಂದರ್ಭದಲ್ಲಿ ಬಿಜೆಪಿ ನಾಯಕರೇನಾದರೂ ಪ್ರಧಾನಿ ಆಗಿದ್ದರೆ ಅವರು ಮಸೀದಿ ಕೆಡವಲು ಅವಕಾಶ ನೀಡುತ್ತಿರಲಿಲ್ಲ ಎಂದು ಪಕ್ಷದ ಮುಖವಾಣಿ 'ಸಾಮ್ನಾ'ದ ಸಂಪಾದಕೀಯದಲ್ಲಿ ಪಕ್ಷವು ಬಿಜೆಪಿಯನ್ನು ಕೆಣಕಿದೆ.

'ಜ. 22ರ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಕಾಂಗ್ರೆಸ್‌ಗೆ ವಿಶೇಷ ಆಹ್ವಾನ ಬಂದರೆ ಪಕ್ಷದ ನಾಯಕರು ಅಯೋಧ್ಯೆಗೆ ಹೋಗಬೇಕು. ಅದರಲ್ಲಿ ತಪ್ಪೇನಿದೆ? ಕಾಂಗ್ರೆಸ್‌ನ ಆತ್ಮ ಹಿಂದೂ. ಅದರಲ್ಲಿ ಮುಚ್ಚಿಡುವಂಥದ್ದೇನೂ ಇಲ್ಲ. ಹಿಂದೂ ಸಂಸ್ಕೃತಿಯ ಬೆಳವಣಿಗೆಗೆ ಕಾಂಗ್ರೆಸ್ ಕೊಡುಗೆಯೂ ಇದೆ' ಎಂದು ಸಂಪಾದಕೀಯ ತಿಳಿಸಿದೆ.


ಛತ್ತೀಸಗಢ: ಜ.22 'ಪಾನಮುಕ್ತ' ದಿನ

ರಾಯಪುರ (ಪಿಟಿಐ): ಜನವರಿ 22ರಂದು ಅಯೋಧ್ಯೆ ರಾಮಮಂದಿರದಲ್ಲಿ ರಾಮ ಮೂರ್ತಿ ಪ್ರತಿಷ್ಠಾಪನೆ ಮಾಡಲಿರುವ ಕಾರಣ, ರಾಜ್ಯದಲ್ಲಿ ಆ ದಿನವನ್ನು 'ಪಾನಮುಕ್ತ' ದಿನ ಎಂದು ಘೋಷಿಸಲು ತಮ್ಮ ಸರ್ಕಾರ ನಿರ್ಧರಿಸಿದೆ ಎಂದು ಛತ್ತೀಸಗಢ ಮುಖ್ಯಮಂತ್ರಿ ವಿಷ್ಣುದೇವ್ ಸಾಯ್ ಅವರು ಹೇಳಿದ್ದಾರೆ.

'ಡಿಸೆಂಬರ್ 25ರಿಂದ ಜನವರಿ 2ರ ವರೆಗೆ ನಾವು ಉತ್ತಮ ಆಡಳಿತ ದಿನವನ್ನು ಆಚರಿಸಿದೆವು. ರಾಮರಾಜ್ಯವು ಉತ್ತಮ ಆಡಳಿತಕ್ಕೆ ಮಾದರಿಯಾಗಿದೆ' ಎಂದು ಅವರು ಹೇಳಿದರು.

'ಛತ್ತೀಸಗಢವು ಶ್ರೀರಾಮನ ತಾಯಿಯ ತವರು ಆಗಿರುವುದು ನಮ್ಮ ಅದೃಷ್ಟ. ಜ.22ರಂದು ರಾಜ್ಯದ ಎಲ್ಲೆಡೆ ಹಬ್ಬದ ಸಂಭ್ರಮ ಮನೆಮಾಡಲಿದೆ. ಆ ದಿವಸ ಎಲ್ಲೆಡೆ ಹಣತೆಗಳನ್ನು ಬೆಳಗಿಸಲಾಗುತ್ತದೆ. ರಾಜ್ಯದ ಅಕ್ಕಿ ಗಿರಣಿ ಸಂಘವು ಈಗಾಗಲೇ 300 ಟನ್ ಸುವಾಸನೆಯುಕ್ತ ಅಕ್ಕಿಯನ್ನು ಅಯೋಧ್ಯೆಗೆ ಕಳಿಸಿದೆ. ತರಕಾರಿ ಬೆಳೆಗಾರರು ತರಕಾರಿಯನ್ನು ಕಳಿಸಲಿದ್ದಾರೆ' ಎಂದು ವಿಷ್ಣುದೇವ್ ಹೇಳಿದರು.

ಷೇರುಪೇಟೆ ವಹಿವಾಟು 535



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,665
ಇಂದಿನ ಅಂತ್ಯ	21,517
▼	148
ದಿನದ ಕನಿಷ್ಠ	21,500

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹615
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹615

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1620)
ಸೋಯಾ (ರಿಫೈನ್ಡ್)	₹870 (870)
ಸೂರ್ಯಕಾಂತಿ (ರಿಫೈನ್ಡ್)	₹885 (885)
ಪಾಮೋಲಿನ್	₹819 (823)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹350-490
ದ್ವಿತಳಿ (ಬಿ.ವಿ)	₹309-575

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹152.50
ಆರ್‌ಎಸ್‌ಎಸ್-5	₹148.50
ಗುಡ್ ಲಾಟ್	₹131.50

ವಿನಿಮಯ ದರ

$ ಡಾಲರ್	83.30
£ ಪೌಂಡ್	105.22
€ ಯುರೊ	91.14
¥ ಯೆನ್ (100ಕ್ಕೆ)	59

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ತಿಪಟೂರು	₹8500-9720
ತುರುವೇಕೆರೆ	₹9700-9700

ಮುಂಬೈ ಧಾರಣೆ

ಶೇಂಗಾ

03-01-2024

ಜಾವಾ 70/80(ಹೊಸ)	12200-12300
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1630)
ಒಂದು ವಾರದ ಡೆಲಿವರಿ	1615 (1625)
ಸೋಯಾ ಕಚ್ಚಾ	820 (830)
ಪಾಮ್ ವಾರದ ಡೆಲಿವರಿ	821 (825)
ಸೂರ್ಯಕಾಂತಿ ಎಣ್ಣೆ ಕಚ್ಚಾ	810 (810)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
62,750 (63,300)
ಬೆಳ್ಳಿ ಕೆ.ಜಿ 72,650 (74,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹2000-2400
ಮಧ್ಯಮ	₹1500-2000
ಸಣ್ಣ	₹1000-1500

ಸೆನ್ಸೆಕ್ಸ್ 535, ನಿಫ್ಟಿ 148 ಅಂಶ ಕುಸಿತ; ಸ್ಮಾಲ್– ಮಿಡ್ ಕ್ಯಾಪ್ ಸೂಚ್ಯಂಕ ಏರಿಕೆ

2ನೇ ದಿನವೂ ಷೇರುಪೇಟೆ ಇಳಿಕೆ

ಮುಂಬೈ (ಪಿಟಿಐ): ಸತತ ಎರಡನೇ ದಿನವಾದ ಬುಧವಾರವೂ ಷೇರುಪೇಟೆಯು ಇಳಿಕೆ ದಾಖಲಿಸಿತು.

ಎಚ್‌ಡಿಎಫ್‌ಸಿ ಬ್ಯಾಂಕ್, ಐ.ಟಿ ಷೇರುಗಳ ಮಾರಾಟದ ಒತ್ತಡ ಹಾಗೂ ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಕಡಿತಗೊಳಿಸಬಹುದು ಎಂಬ ಸುಳಿವು ಇಳಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 535 ಅಂಶ ಇಳಿಕೆಯಾಗಿ, 71,356ರಲ್ಲಿ ಸ್ಥಿರಗೊಂಡಿತು. ದಿನದ ವಹಿವಾಟಿನಲ್ಲಿ 588 ಅಂಶ ಕಡಿಮೆಯಾಗಿ, 71,303ಕ್ಕೆ ತಲುಪಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 148 ಅಂಶ ಇಳಿಕೆಯಾಗಿ 21,517ಕ್ಕೆ ಮುಟ್ಟಿತು.

ಜೆಎಸ್‌ಡಬ್ಲ್ಯು ಸ್ಟೀಲ್, ಟಾಟಾ ಸ್ಟೀಲ್, ಟೆಕ್ ಮಹೀಂದ್ರ, ಇನ್ಫೊಸಿಸ್, ವಿಪ್ರೊ, ಟಾಟಾ ಕನ್ಸಲ್ಟೆನ್ಸಿ ಸರ್ವಿಸ್, ನೆಸ್ಲೆ, ಎಚ್‌ಸಿಎಲ್ ಟೆಕ್ನಾಲಜೀಸ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಮಾರುತಿ ಕಂಪನಿಯ ಷೇರುಗಳು ಇಳಿಕೆ ಕಂಡಿವೆ.

ಇಂಡಸ್‌ಇಂಡ್ ಬ್ಯಾಂಕ್, ಐಟಿಸಿ, ಭಾರ್ತಿ ಏರ್‌ಟೆಲ್ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗಳಿಕೆ ಕಂಡಿವೆ.

ಬಿಎಸ್‌ಇ ಸ್ಮಾಲ್ ಕ್ಯಾಪ್ ಮತ್ತು ಮಿಡ್ ಕ್ಯಾಪ್ ಸೂಚ್ಯಂಕಗಳು ಏರಿಕೆಯಾಗಿವೆ. ಲೋಹ, ಐಟಿ, ಟೆಕ್, ಸರಕು ಮತ್ತು ಹಣಕಾಸು ಸೇವೆ ಷೇರುಗಳು ಇಳಿಕೆಯಾಗಿವೆ. ಯುಟಿಲಿಟಿ, ಸೇವೆ, ರಿಯಾಲ್ಟಿ, ಇಂಧನ ಮತ್ತು ಆರೋಗ್ಯ ಕ್ಷೇತ್ರದ ಷೇರುಗಳು ಏರಿಕೆ ಕಂಡಿವೆ.

ಬ್ರೆಂಟ್ ಕಚ್ಚಾ ತೈಲ ಶೇ 0.55ರಷ್ಟು ಇಳಿಕೆಯಾಗಿ ಬ್ಯಾರೆಲ್ 75.47 ಡಾಲರ್‌ಗೆ ತಲುಪಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಮಂಗಳವಾರ ₹1,602 ಕೋಟಿ ಮೌಲ್ಯದ ಈಕ್ವಿಟಿಗಳನ್ನು ಖರೀದಿಸಿದ್ದಾರೆ ಎಂದು ಷೇರುಪೇಟೆ ತಿಳಿಸಿದೆ.

ಲಾಭ ಕಂಡ ಕಂಪನಿಗಳು (ಶೇಕಡವಾರು)

4.82	ಬಜಾಜ್ ಆಟೊ
2.41	ಅದಾನಿ ಎಂಟರ್‌ಪ್ರೈಸಸ್
1.62	ಇಂಡಸ್‌ಇಂಡ್ ಬ್ಯಾಂಕ್
1.47	ಅದಾನಿ ಪೋರ್ಟ್ಸ್
1.47	ಐಟಿಸಿ

ನಷ್ಟ ಕಂಡ ಕಂಪನಿಗಳು

-3.88	ಹಿಂಡಾಲ್ಕೋ
-3.74	ಜೆಎಸ್‌ಡಬ್ಲ್ಯು ಸ್ಟೀಲ್
-3.04	ಟಾಟಾ ಸ್ಟೀಲ್
-2.98	ಎಲ್‌ಟಿಐಮೈಂಡ್‌ಟ್ರೀ
-2.89	ಇನ್ಫೊಸಿಸ್

ಚಿನ್ನದ ದರ ₹230, ಬೆಳ್ಳಿ ₹400 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನ ಮತ್ತು ಬೆಳ್ಳಿ ದರ ಇಳಿಕೆ ಆಗಿದೆ. ಚಿನ್ನದ ದರ 10 ಗ್ರಾಂ.ಗೆ ₹230 ಇಳಿಕೆಯಾಗಿ, ₹63,970ರಂತೆ ಮಾರಾಟವಾಯಿತು.

ಬೆಳ್ಳಿ ಧಾರಣೆ ಕೆ.ಜಿಗೆ ₹400 ಕಡಿಮೆಯಾಗಿ, ₹78,400ಕ್ಕೆ ತಲುಪಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿದ್ದು, ದೇಶೀಯ ಮಾರುಕಟ್ಟೆಯ ಮೇಲೂ ಪರಿಣಾಮ ಬೀರಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,059 ಡಾಲರ್ ಮತ್ತು 23.60 ಡಾಲರ್‌ನಂತೆ ಮಾರಾಟವಾಗಿದೆ.

ತಗ್ಗಿದ ತಯಾರಿಕಾ ಚಟುವಟಿಕೆ

18 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ: ವರದಿ ಬಿಡುಗಡೆ

ನವದೆಹಲಿ (ಪಿಟಿಐ): ದೇಶದಲ್ಲಿ ತಯಾರಿಕಾ ವಲಯದ ಬೆಳವಣಿಗೆಯು ಡಿಸೆಂಬರ್‌ನಲ್ಲಿ 18 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆ ಹೇಳಿದೆ.

ಕನಿಷ್ಠ ಹಣದುಬ್ಬರದ ಹೊರತಾಗಿಯೂ ಕಾರ್ಖಾನೆಯ ಆರ್ಡರ್‌ಗಳು ಮತ್ತು ತಯಾರಿಕೆಯ ಬೆಳವಣಿಗೆಯು ಮಂದಗತಿಯಲ್ಲಿ ಇರುವುದೇ ಇಳಿಕೆಗೆ ಕಾರಣವಾಗಿದೆ ಎಂದು ಸಂಸ್ಥೆಯ ವರದಿ ತಿಳಿಸಿದೆ.

ಸುಮಾರು 400 ತಯಾರಕರಿಗೆ ಕಳುಹಿಸಲಾದ ಪ್ರಶ್ನಾವಳಿಗಳಲ್ಲಿ ನಮೂದಾಗಿರುವ ಪ್ರತಿಕ್ರಿಯೆ ಆಧರಿಸಿ ಈ ವರದಿ ಸಿದ್ಧಪಡಿಸಲಾಗಿದೆ.

ತಯಾರಿಕಾ ವಲಯದ ಬೆಳವಣಿಗೆ ಬಗ್ಗೆ ತಿಳಿಸುವ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ನವೆಂಬರ್‌ನಲ್ಲಿ 56 ಇತ್ತು. ಡಿಸೆಂಬರ್‌ನಲ್ಲಿ 54.9ಕ್ಕೆ ಇಳಿಕೆ ಕಂಡಿದೆ.



ಈ ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಸಕಾರಾತ್ಮಕ ಬೆಳವಣಿಗೆ ಎಂದು ಕರೆಯಲಾಗುತ್ತದೆ. 50ಕ್ಕಿಂತಲೂ ಕೆಳಗಿನ ಮಟ್ಟದಲ್ಲಿ ಇದ್ದರೆ ನಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ.

ಸತತ ಹದಿನೆಂಟು ತಿಂಗಳಿನಿಂದಲೂ ಒಟ್ಟಾರೆ ಸಕಾರಾತ್ಮಕವಾಗಿಯೇ ಮುಂದುವರಿದಿದ್ದ ತಯಾರಿಕಾ ಬೆಳವಣಿಗೆಯು ಡಿಸೆಂಬರ್‌ನಲ್ಲಿ ಇಳಿಕೆ ಕಂಡಿದೆ.

ಬೆಳವಣಿಗೆಯ ವೇಗದಲ್ಲಿ ನಷ್ಟವಾದರೂ ತಯಾರಿಕಾ ಕ್ಷೇತ್ರದ ವಿಸ್ತರಣೆ ದೃಢವಾಗಿದೆ. ಏಷ್ಯಾ, ಯುರೋಪ್, ಮಧ್ಯಪ್ರಾಚ್ಯ ಮತ್ತು ಉತ್ತರ ಅಮೆರಿಕದಲ್ಲಿನ ಕಂಪನಿಗಳು ಉತ್ತಮ ಗಳಿಕೆ ಕಂಡಿವೆ ಎಂದು ವರದಿ ವಿವರಿಸಿದೆ.

ತಯಾರಿಕಾ ವಲಯದ ಬೆಳವಣಿಗೆ ಸೂಚ್ಯಂಕ

2023	ಡಿ.	54.9
	ನ.	56.0
	ಅ.	55.5
	ಸೆ.	57.5
	ಆ.	58.6
	ಜು.	57.7
	ಜೂ.	57.8
	ಮೇ	58.7
	ಏ.	57.2
	ಮಾ.	56.4
	ಫೆ.	55.3
	ಜ.	55.4
2022	ಡಿ.	57.8

‘ಅದಾನಿ’ ವಿರುದ್ಧ ಎಸ್‌ಐಟಿಗೆ ನಕಾರ

ಒಂದನೇ ಪುಟದಿಂದ

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರೂ ಈ ಪೀಠದಲ್ಲಿ ಇದ್ದರು.ಅದಾನಿ ಸಮೂಹದ ವಿರುದ್ಧದ 24 ಪ್ರಕರಣಗಳ ಪೈಕಿ 22ರಲ್ಲಿ ತನಿಖೆಯನ್ನು ಸೆಬಿ ಪೂರ್ಣಗೊಳಿಸಿದೆ. ಇನ್ನುಳಿದ ಎರಡು ಪ್ರಕರಣಗಳ ತನಿಖೆ ಪೂರ್ಣಗೊಳ್ಳಬೇಕಿದೆ.

ಸೆಬಿ ನಡೆಸುತ್ತಿರುವ ತನಿಖೆಯನ್ನು ಪ್ರಶ್ನಿಸಲು ಅರ್ಜಿದಾರರು ಕೆಲವು ಪತ್ರಿಕಾ ವರದಿಗಳನ್ನು ಆಧಾರವಾಗಿ ಇರಿಸಿಕೊಂಡಿರುವುದು, ಸಂಘಟಿತ ಅಪರಾಧ ಮತ್ತು ಭ್ರಷ್ಟಾಚಾರ ವರದಿಗಾರಿಕೆ ಯೋಜನೆಯ (ಒಸಿಸಿಆರ್‌ಪಿ) ವರದಿಯೊಂದನ್ನು ಆಧರಿಸಿರುವುದು ವಿಶ್ವಾಸ ಮೂಡಿಸುವಂತೆ ಇಲ್ಲ ಎಂದು ಕೋರ್ಟ್ ಹೇಳಿದೆ.

‘ಮೂರನೆಯ ಸಂಸ್ಥೆಯೊಂದರ ವರದಿಯಲ್ಲಿನ ಆರೋಪಗಳ ಸತ್ಯಾಸತ್ಯತೆಯನ್ನು ಪರಾಮರ್ಶಿಸುವ ಪ್ರಯತ್ನ ನಡೆಸದೆಯೇ, ಅದನ್ನು ನಿರ್ಣಾಯಕ ಆಧಾರ ಎಂದು ಪರಿಗಣಿಸಲು ಆಗದು’ ಎಂದು ಕೋರ್ಟ್ ಹೇಳಿದೆ.

ಅದಾನಿ–ಹಿಂಡನ್‌ಬರ್ಗ್ ವಿವಾದ ಕುರಿತ ಅರ್ಜಿಗಳ ವಿಚಾರಣೆ ನಡೆಸಿದ ಪೀಠವು ಈ ತೀರ್ಪು ನೀಡಿದೆ. ವಕೀಲರಾದ ವಿಶಾಲ್ ತಿವಾರಿ, ಎಂ.ಎಲ್. ಶರ್ಮ, ಕಾಂಗ್ರೆಸ್ ನಾಯಕಿ ಜಯಾ ಠಾಕೂರ್, ಅನಾಮಿಕಾ ಜೈಸ್ವಾಲ್ ಅವರು ಈ ಅರ್ಜಿಗಳನ್ನು ಸಲ್ಲಿಸಿದ್ದರು. ಅದಾನಿ ಸಮೂಹವು ತನ್ನ ಕಂಪನಿಗಳ ಷೇರು ಮೌಲ್ಯದ ಮೇಲೆ ಕೃತಕವಾಗಿ ಪ್ರಭಾವ ಬೀರುವ ಕೆಲಸ ಮಾಡಿದೆ ಎಂದು ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಆರೋಪಿಸಿತ್ತು. ಸಂಸ್ಥೆಯು ಈ ಆರೋಪ ಮಾಡಿದ ನಂತರದಲ್ಲಿ, ಅದಾನಿ ಸಮೂಹದ ಷೇರುಪೇಟೆ ನೋಂದಾಯಿತ ಕಂಪನಿಗಳ ಷೇರು ಮೌಲ್ಯದಲ್ಲಿ ಭಾರಿ ಕುಸಿತ ಕಂಡುಬಂದಿತ್ತು. ಆರೋಪಗಳನ್ನು ಅದಾನಿ ಸಮೂಹ ಅಲ್ಲಗಳೆದಿತ್ತು.

ಸೆಬಿ ಸಂಸ್ಥೆಯು ಕಾನೂನಿಗೆ ಅನುಗುಣವಾಗಿ ತನಿಖೆ ನಡೆಸಿ, ಅದನ್ನು ತಾರ್ಕಿಕ ಅಂತ್ಯಕ್ಕೆ ಒಯ್ಯಬೇಕು ಎಂದು ಸಿಜೆಐ ಅವರು ತೀರ್ಪಿನಲ್ಲಿ ಹೇಳಿದ್ದಾರೆ. ಸುಪ್ರೀಂ ಕೋರ್ಟ್ ನೇಮಕ ಮಾಡಿದ್ದ ಸಮಿತಿಯ ಕೆಲವು ಸದಸ್ಯರು ಹಿತಾಸಕ್ತಿ ಸಂಘರ್ಷ ಎದುರಿಸುತ್ತಿದ್ದಾರೆ ಎಂಬ ಆರೋಪಗಳಿಗೆ ಆಧಾರವಿಲ್ಲ ಎಂದು ಕೋರ್ಟ್ ಹೇಳಿದೆ.

‘ಹಿಂಡನ್‌ಬರ್ಗ್ ರಿಸರ್ಚ್‌ನ ನಡೆ ಅಥವಾ ಇತರ ಯಾವುದೇ ಸಂಸ್ಥೆಯು ಶಾರ್ಟಿಂಗ್ ಮಾಡಿದ ಕಾರಣದಿಂದಾಗಿ (ಷೇರುಬೆಲೆ ಕುಸಿಯುತ್ತಿರುವ ಸಂದರ್ಭದಲ್ಲಿ ಹಣ ಮಾಡಿಕೊಳ್ಳುವುದು) ದೇಶದ ಹೂಡಿಕೆದಾರರು ನಷ್ಟ ಮಾಡಿಕೊಂಡಿದ್ದರ ಹಿಂದೆ ಕಾನೂನಿನ ಉಲ್ಲಂಘನೆ ಆಗಿದೆಯೇ ಎಂಬ ಬಗ್ಗೆ ಸೆಬಿ ಹಾಗೂ ಕೇಂದ್ರ ಸರ್ಕಾರದ ಸಂಸ್ಥೆಗಳು ತನಿಖೆ ನಡೆಸಬೇಕು. ಕಾನೂನಿನ ಉಲ್ಲಂಘನೆ ಆಗಿದ್ದಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಪೀಠವು ತಾಕೀತು ಮಾಡಿದೆ.

ತಜ್ಞರ ಸಮಿತಿಯು ತನ್ನ ವರದಿಯಲ್ಲಿ ನೀಡುವ ಯಾವುದೇ ಸಲಹೆಯನ್ನು ಕೇಂದ್ರ ಸರ್ಕಾರ ಮತ್ತು ಸೆಬಿ ರಚನಾತ್ಮಕವಾಗಿ ಪರಿಗಣಿಸಿ, ಹೂಡಿಕೆದಾರರ ಹಿತ ಕಾಯಲು, ನಿಯಂತ್ರಣ ಕ್ರಮಗಳನ್ನು ಬಲಗೊಳಿಸಲು ಯಾವುದೇ ತೀರ್ಮಾನ ಕೈಗೊಳ್ಳಬಹುದು ಎಂದು ಕೋರ್ಟ್ ಹೇಳಿದೆ.

> ‘ಸೂಕ್ತ ಪ್ರಕರಣದಲ್ಲಿ ಈ ನ್ಯಾಯಾಲಯವು ತನಿಖೆಯನ್ನು ಎಸ್‌ಐಟಿ ಅಥವಾ ಸಿಬಿಐಗೆ ವರ್ಗಾಯಿಸುವ ಅಧಿಕಾರ ಹೊಂದಿದೆ. ಆದರೆ, ಇಂತಹ ಅಧಿಕಾರವನ್ನು ಅಸಾಮಾನ್ಯ ಸಂದರ್ಭಗಳಲ್ಲಿ ಮಾತ್ರ, ಸಂಬಂಧಪಟ್ಟ ತನಿಖಾ ಸಂಸ್ಥೆಯು ತನಿಖೆ ನಡೆಸುವಲ್ಲಿ ಎದ್ದು ಕಾಣುವಂತಹ ಉದ್ದೇಶಪೂರ್ವಕ ನಿಷ್ಕ್ರಿಯತೆಯನ್ನು ಪ್ರದರ್ಶಿಸಿದಾಗ ಬಳಸಬೇಕು’
> – ಸುಪ್ರೀಂ ಕೋರ್ಟ್

ಹೊಸ ಹುಂಡೈ ಕ್ರೆಟಾದ ಬುಕಿಂಗ್ ಆರಂಭ

ಬೆಂಗಳೂರು: ಹುಂಡೈ ಮೋಟರ್ ಇಂಡಿಯಾ ಲಿಮಿಟೆಡ್ ತನ್ನ ಹೊಸ ಹುಂಡೈ ಕ್ರೆಟಾದ ಬುಕಿಂಗ್ ಆರಂಭಿಸಿದೆ. ಗ್ರಾಹಕರು ದೇಶದ ಯಾವುದೇ ಹುಂಡೈ ವಿತರಕರ ಬಳಿ ₹25 ಸಾವಿರ ಆರಂಭಿಕ ಬುಕಿಂಗ್ ಮೊತ್ತ ಪಾವತಿಸಿ ನೋಂದಾಯಿಸಿಕೊಳ್ಳಬಹುದು ಎಂದು ಹುಂಡೈ ಕಂಪನಿ ತಿಳಿಸಿದೆ.

ಎಲ್‌ಇಡಿ ಹೆಡ್‌ಲ್ಯಾಪ್ ಹೊಂದಿರುವ ಈ ವಾಹನವು, ಮೂರು ಎಂಜಿನ್ ಆಯ್ಕೆಗಳನ್ನು ಹೊಂದಿದೆ. ಇಂಟಿಗ್ರೇಟೆಡ್ ಇನ್ಫೋಟೈನ್‌ಮೆಂಟ್ ಸ್ಕ್ರೀನ್ ಮತ್ತು ಡಿಜಿಟಲ್ ಕ್ಲಸ್ಟರ್ ವಿವಿಧ ಮಾಹಿತಿಯ ಪ್ರದರ್ಶನ ನೀಡುತ್ತದೆ.

ಈ ವಾಹನವು ಏಳು ವಿವಿಧ ಬಣ್ಣದಲ್ಲಿ (ರೋಬಸ್ಟ್ ಎಮರಾಲ್ಡ್ ಪರ್ಲ್, ಫಿಯರಿ ರೆಡ್, ರೇಂಜರ್ ಖಾಕಿ, ಅಬಿಸ್ ಬ್ಲ್ಯಾಕ್, ಅಟ್ಲಾಸ್ ವೈಟ್ ಮತ್ತು ಟೈಟಾನ್ ಗ್ರೇ ಮತ್ತು 6 ಮೊನೊ-ಟೋನ್ ಹಾಗೂ 1 ಅಟ್ಲಾಸ್ ವೈಟ್ ಜೊತೆ ಬ್ಲಾಕ್ ಡ್ಯುಯಲ್ ಟೋನ್) ಲಭ್ಯವಿದೆ ಎಂದು ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	600

ಅಡಿಕೆ	
ಬಂಟ್ವಾಳ	
ಕೋಕ	15000-27500
ಹೊಸತು	27500-36000
ಹಳತು	41000-43000
ಕುಮಟ	
ಬೆಟ್ಟೆ	34200-45615
ಚಿಪ್ಪು	26899-32899
ಕೋಕ	20109-31019
ಫ್ಯಾಕ್ಟರಿ	11569-23299
ಹಳೆಚಾಲಿ	37489-38699
ಹೊಸಚಾಲಿ	33099-35111

ಶಿವಮೊಗ್ಗ	
ಬೆಟ್ಟೆ	26069-54359
ಗೊರಬಲು	18001-36751
ಹೊಸತು	43009-47659
ರಾಶಿ	36050-48999
ಸರಕು	45009-83800
ಶಿರಸಿ	
ಬೆಟ್ಟೆ	38099-45169
ಬಿಳಿಗೋಟು	27899-34809
ಚಾಲಿ	37750-39301
ಕೆಂಪುಗೋಟು	30699-31699
ರಾಶಿ	44799-47409

ಪೆಟ್ರೋಲ್, ಡೀಸೆಲ್ ದರ ಇಳಿಕೆ ಇಲ್ಲ: ಕೇಂದ್ರ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಪ್ರಸ್ತುತ ಜಾಗತಿಕ ತೈಲ ಮಾರುಕಟ್ಟೆಯು ಬಿಕ್ಕಟ್ಟಿಗೆ ಸಿಲುಕಿದೆ. ಹಾಗಾಗಿ, ಪೆಟ್ರೋಲ್ ಮತ್ತು ಡೀಸೆಲ್ ಕಡಿತಗೊಳಿಸುವ ಯಾವುದೇ ಪ್ರಸ್ತಾವವು ಕೇಂದ್ರ ಸರ್ಕಾರದ ಮುಂದಿಲ್ಲ’ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಹೇಳಿದ್ದಾರೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಚ್ಚಾ ತೈಲ ದರಕ್ಕೆ ಸಂಬಂಧಿಸಿದಂತೆ ನಾವು ಪ್ರಕ್ಷುಬ್ಧ ಪರಿಸ್ಥಿತಿ ಎದುರಿಸುತ್ತಿದ್ದೇವೆ. ಹಾಗಾಗಿ, ಇಂಧನ ಬೆಲೆ ಇಳಿಕೆಗೆ ಸಂಬಂಧಿಸಿದಂತೆ ತೈಲ ಮಾರಾಟ ಕಂಪನಿಗಳ ಜೊತೆಗೆ ಸರ್ಕಾರ ಯಾವುದೇ ಚರ್ಚೆ ನಡೆಸಿಲ್ಲ’ ಎಂದು ಸ್ಪಷ್ಟಪಡಿಸಿದರು.

ಷೇರು ಮಾರುಕಟ್ಟೆಯಲ್ಲಿ ಹಿಂದೂಸ್ತಾನ್ ಪೆಟ್ರೋಲಿಯಂ ಕಂಪನಿಯ ಷೇರು ಶೇ 3.24, ಇಂಡಿಯನ್ ಆಯಿಲ್ ಕಾರ್ಪೊರೇಷನ್ ಶೇ 1.8 ಹಾಗೂ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಷೇರಿನ ಮೌಲ್ಯ ಶೇ 1.07ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದರು.

ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಕಡಿತವಾಗಲಿದೆ ಎಂದು ವದಂತಿಯಿಂದಾಗಿ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳ ಷೇರುಗಳು ಕೆಲವು ದಿನಗಳಿಂದ ಒತ್ತಡಕ್ಕೆ ಸಿಲುಕಿವೆ. ದೈನಂದಿನ ಲೆಕ್ಕಾಚಾರದಲ್ಲಿ ಇಂಧನದ ಬೆಲೆ ಇಳಿಸುವ ಅವಕಾಶವನ್ನು ಕಂಪನಿಗಳಿಗೆ ನೀಡಲಾಗಿದೆ. ಕಳೆದ 21 ತಿಂಗಳಿನಿಂದಲೂ ಬೆಲೆಯಲ್ಲಿ ಬದಲಾವಣೆಯಾಗಿಲ್ಲ ಎಂದರು.

ಸಾಕ್ಷಿ, ಬಜರಂಗ್, ವಿನೇಶಾ ವಿರುದ್ಧ ಪ್ರತಿಭಟನೆ

ಕ್ರೀಡಾ ಬದುಕು ಹಾಳಾಗುತ್ತಿದೆ ಎಂದು ನವದೆಹಲಿಯಲ್ಲಿ ಜೂನಿಯರ್ ಕುಸ್ತಿಪಟುಗಳ ಆಕ್ರೋಶ

ನವದೆಹಲಿ (ಪಿಟಿಐ): ದೇಶದ ಕುಸ್ತಿ ಕ್ಷೇತ್ರ ಎದುರಿಸುತ್ತಿರುವ ಬಿಕ್ಕಟ್ಟು ಮತ್ತೊಂದು ತಿರುವು ಪಡೆದಿದೆ. ಬಜರಂಗ್ ಪೂನಿಯಾ, ಸಾಕ್ಷಿ ಮಲಿಕ್ ಮತ್ತು ವಿನೇಶಾ ಫೋಗಾಟ್ ಅವರ ಧರಣಿಯಿಂದಾಗಿ ತಮ್ಮ ಒಂದು ವರ್ಷದ ನಿರ್ಣಾಯಕ ಅವಧಿ ವ್ಯರ್ಥವಾಗಿದೆ ಎಂದು ದೂರಿ ನೂರಾರು ಜೂನಿಯರ್ ಕುಸ್ತಿಪಟುಗಳು ದೆಹಲಿಯ ಜಂತರ್‌ಮಂತರ್‌ನಲ್ಲಿ ಬುಧವಾರ ಜಮಾಯಿಸಿ ಪ್ರತಿಭಟನೆ ನಡೆಸಿದರು.

ಉತ್ತರ ಪ್ರದೇಶ, ಹರಿಯಾಣ ಮತ್ತು ದೆಹಲಿಯ ವಿವಿಧ ಪ್ರದೇಶಗಳಿಂದ ಪೈಲ್ವಾನರು ಪ್ರತಿಭಟನಾ ಸ್ಥಳಕ್ಕೆ ಬಂದಿಳಿದರು. ಪೊಲೀಸರೂ ಈ ಅನಿರೀಕ್ಷಿತ ಪ್ರತಿಭಟನೆಯನ್ನು ನಿರೀಕ್ಷಿಸಿರಲಿಲ್ಲ.

ಭಾಗಪತ್‌ನ ಛಪ್ರೌಲಿಯ ಆರ್ಯ ಸಮಾಜ ಅಖಾಡದಿಂದಲೇ ಸುಮಾರು 300 ಮಂದಿ ಪ್ರತಿಭಟನೆಯಲ್ಲಿದ್ದರು. ನರೇಲಾದ ವಿರೇಂದರ್ ಕುಸ್ತಿ ಅಕಾಡೆಮಿಯಿಂದಲೂ ಸಾಕಷ್ಟು ಮಂದಿ ಬಂದಿದ್ದರು. ಭದ್ರತಾ ಸಿಬ್ಬಂದಿ ಅವರನ್ನು ನಿಭಾಯಿಸಲು ಹರಸಾಹಸಪಡಬೇಕಾಯಿತು.

‘ವಿಶ್ವ ಕುಸ್ತಿ ಸಂಸ್ಥೆಯು (ಯುಡಬ್ಲ್ಯು-ಡಬ್ಲ್ಯು), ಈ ಮೂವರಿಂದ ನಮ್ಮ ಕುಸ್ತಿಪಟುಗಳನ್ನು ರಕ್ಷಿಸಲಿ’ ಎಂಬ ಬ್ಯಾನರ್‌ಗಳನ್ನು ಪ್ರತಿಭಟನಕಾರರು ಹಿಡಿದಿದ್ದರು.

ಕಳೆದ ಸಾಲಿನಲ್ಲಿ ಯಾವುದೇ ಚಾಂಪಿಯನ್‌ಷಿಪ್ ನಡೆದಿರಲಿಲ್ಲ. ಹೀಗಾಗಿ ವಿವಿಧ ವಯೋವರ್ಗದ ಅಂಚಿನಲ್ಲಿದ್ದ ಹಲವು ಕುಸ್ತಿಪಟುಗಳು ತಮ್ಮ ವಯೋಮಿತಿಯಲ್ಲಿ ಸ್ಪರ್ಧಿಸುವ ಅವಕಾಶ ಕಳೆದುಕೊಂಡಿದ್ದಾರೆ.

‘ಉತ್ತರ ಪ್ರದೇಶದ ಶೇ 90ರಷ್ಟು ಅಖಾಡಗಳು ಈ ಪ್ರತಿಭಟನೆಯಲ್ಲಿ ನಮ್ಮ ಜೊತೆ ನಿಂತಿವೆ. ಅವರು ಮೂವರು (ಸಾಕ್ಷಿ, ವಿನೇಶಾ ಮತ್ತು ಬಜರಂಗ್) ಮಾತ್ರ ಒಂದು ಕಡೆಯಿದ್ದಾರೆ. ಲಕ್ಷಾಂತರ ಕುಸ್ತಿಪಟುಗಳು ಇನ್ನೊಂದು ಕಡೆಯಿದ್ದಾರೆ. ಆ ಮೂವರಿಂದಾಗಿ ದೇಶದ ಲಕ್ಷಾಂತರ ಕುಸ್ತಿಪಟುಗಳ ವೃತ್ತಿಜೀವನ ವ್ಯರ್ಥವಾಗಿದೆ’ ಎಂದು ಮುಜಾಫರನಗರ ಸ್ಟೇಡಿಯಮ್‌ನ ಕೋಚ್ ಪ್ರದೀಪ್ ಕುಮಾರ್ ತಿಳಿಸಿದರು.

‘ಅವರಿಗೆ ರಾಷ್ಟ್ರೀಯ ಪ್ರಶಸ್ತಿಗಳ ಬಗ್ಗೆ ಗೌರವವಿಲ್ಲ. ಅವುಗಳನ್ನು ರಸ್ತೆಯಲ್ಲೇ ಇಟ್ಟುಹೋಗುತ್ತಿದ್ದಾರೆ’ ಎಂದು ಪೂನಿಯಾ ಮತ್ತು ಫೋಗಾಟ್ ಅವರನ್ನು ಉದ್ದೇಶಿಸಿ ಹೇಳಿದರು.

‘ಮಹಿಳೆಯರು ಮತ್ತು ಕಿರಿಯ ಕುಸ್ತಿಪಟುಗಳಿಗಾಗಿ ಈ ಪ್ರತಿಭಟನೆ ನಡೆಸುತ್ತಿದ್ದೇವೆ ಎಂದು ಅವರು ಹೇಳುತ್ತಿದ್ದಾರೆ. ಆದರೆ ಅವರು ಲಕ್ಷಾಂತರ ಮಂದಿಯ ವೃತ್ತಿಜೀವನ ಹಾಳು ಮಾಡುತ್ತಿದ್ದಾರೆ. ಕುಸ್ತಿ ಸಂಸ್ಥೆಯ ಉನ್ನತ ಹುದ್ದೆಗಳನ್ನು ಪಡೆಯಲು ಅವರ ಪ್ರತಿಭಟನೆ ನಡೆದಿದೆ. ಅದು ಈಡೇರಿದಲ್ಲಿ ಅವರು ಎಲ್ಲ ಪ್ರತಿಭಟನೆ ಕೊನೆಗೊಳಿಸುತ್ತಾರೆ’ ಎಂದು ಆರೋಪಿಸಿದರು.

ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಸುಮಾರು ಒಂದು ವರ್ಷ ಹಿಂದೆ ಇದೇ ಸ್ಥಳದಲ್ಲಿ ವಿನೇಶಾ ಫೋಗಾಟ್, ಬಜರಂಗ್ ಮತ್ತು ಸಾಕ್ಷಿ ಅವರು ಧರಣಿ ಆರಂಭಿಸಿದ್ದರು. ಆ ಪ್ರತಿಭಟನೆಗೆ ರೈತರಿಂದ ಹಿಡಿದು ವಿವಿಧ ವಲಯಗಳಿಂದ ಬೆಂಬಲ ವ್ಯಕ್ತವಾಗಿತ್ತು. ಅಂದಿನಿಂದ ದೇಶದಲ್ಲಿ ಯಾವುದೇ ಪ್ರಮುಖ ಚಾಂಪಿಯನ್‌ಷಿಪ್ ನಡೆದಿಲ್ಲ.

‘ಅಮಾನತುಗೊಂಡಿರುವ ಕುಸ್ತಿ ಫೆಡರೇಷನ್ ಆಡಳಿತ ವರ್ಗಕ್ಕೆ ಮರಳಿ ಅಧಿಕಾರ ನೀಡಬೇಕು. ಕ್ರೀಡಾ ಸಚಿವಾಲಯ ನೇಮಕ ಮಾಡಿರುವ ಅಡ್‌ಹಾಕ್ ಸಮಿತಿಯನ್ನು ವಿಸರ್ಜಿಸಬೇಕು’ ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪೂನಿಯಾ, ಮಲಿಕ್ ಮತ್ತು ಫೋಗಾಟ್ ಅವರ ಮುಖ ವಿರೂಪಗಳಿಸಿದ ಚಿತ್ರಗಳನ್ನು ಹಿಡಿದಿದ್ದ ಪ್ರತಿಭಟನಾಕಾರರು ಅವುಗಳನ್ನು ತುಳಿದುಹಾಕಿದರು.

ಸಾಂಕೇತಿಕ ಮಾತ್ರ: ‘ಇದು ಸಾಂಕೇತಿಕ ಪ್ರತಿಭಟನೆ ಮಾತ್ರ. ಕುಸ್ತಿ ಸಂಸ್ಥೆ ಹೊಸ ಆಡಳಿತದ ಮೇಲಿನ ಅಮಾನತು ಹಿಂಪಡೆಯಲು ನಾವು ಸರ್ಕಾರಕ್ಕೆ ಹತ್ತು ದಿನಗಳ ಅವಕಾಶ ಕೊಡುತ್ತೇವೆ. ಅವರು ಹೊಸ ರಾಷ್ಟ್ರೀಯ ವಯೋವರ್ಗ ಕುಸ್ತಿ ಕೂಟ ನಡೆಸಲಿ. ಒಂದು ವೇಳೆ ಇದು ಆಗದೇ ಹೋದಲ್ಲಿ ನಾವೂ ಬಜರಂಗ್, ವಿನೇಶಾ ರೀತಿ ಅರ್ಜುನ ಮತ್ತು ಇತರ ಪ್ರಶಸ್ತಿಗಳನ್ನು ಸರ್ಕಾರಕ್ಕೆ ಮರಳಿಸುತ್ತೇವೆ’ ಎಂದು ಗ್ರಿಕೊ ರೋಮನ್ ಕುಸ್ತಿಪಟು ಸುನೀಲ್ ರಾಣಾ ಹೇಳಿದರು. 2023ರ ಏಷ್ಯನ್ ಗೇಮ್ಸ್‌ನಲ್ಲಿ ಅವರು ಕಂಚಿನ ಪದಕ ಪಡೆದಿದ್ದರು.



ದೆಹಲಿಯ ಜಂತರ್‌ಮಂತರ್‌ನಲ್ಲಿ ಜೂನಿಯರ್ ಕುಸ್ತಿಪಟುಗಳು ಬುಧವಾರ ಜಮಾಯಿಸಿ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ವಯೋವರ್ಗ ಕುಸ್ತಿ ಕೂಟ ಘೋಷಿಸಿದ ಸಮಿತಿ

ನವದೆಹಲಿ (ಪಿಟಿಐ): ಜೂನಿಯರ್ ಕುಸ್ತಿಪಟುಗಳ ಪ್ರತಿಭಟನೆ ನಡೆಸಿದ ಸ್ವಲ್ಪ ಹೊತ್ತಿನಲ್ಲೇ, ಭಾರತ ಒಲಿಂಪಿಕ್ ಸಂಸ್ಥೆಯ ಅಡ್‌ಹಾಕ್ ಸಮಿತಿಯು ಆರು ವಾರಗಳ ಒಳಗೆ 15 ಮತ್ತು 20 ವರ್ಷದೊಳಗಿನವರ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಡೆಸುವುದಾಗಿ ಘೋಷಿಸಿದೆ.

ಯುವ ಕುಸ್ತಿಪಟುಗಳ ಆತಂಕ ಒಪ್ಪಿಕೊಂಡ ಸಮಿತಿ ಅಧ್ಯಕ್ಷ ಭೂಪಿಂದರ್ ಸಿಂಗ್ ಬಾಜ್ವಾ ಅವರು, ಗ್ವಾಲಿಯರ್‌ನಲ್ಲಿ ಮೇಲಿನ ಎರಡು ಕೂಟಗಳನ್ನು ನಡೆಸುವುದಾಗಿ ಹೇಳಿಕೆಯಲ್ಲಿ ಭರವಸೆ ನೀಡಿದರು.

ಸಂಜಯ್ ಸಿಂಗ್ ಅಧ್ಯಕ್ಷರಾಗಿರುವ ಕುಸ್ತಿ ನೂತನ ಆಡಳಿತ ಸಮಿತಿಯನ್ನು ಕ್ರೀಡಾ ಸಚಿವಾಲಯ ಅಮಾನತುಗೊಳಿಸಿದ ನಂತರ ಮೂವರು ಸದಸ್ಯರ ಅಡ್‌ಹಾಕ್ ಸಮಿತಿಯನ್ನು ಡಿಸೆಂಬರ್ 27ರಂದು ನೇಮಕ ಮಾಡಲಾಗಿದ್ದು, ಇದು ದೇಶದ ಕುಸ್ತಿ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದೆ.

‘ಸಂಜಯ್ ಇಲ್ಲದ ಫೆಡರೇಷನ್‌ಗೆ ಸಮ್ಮತಿ’



ಸಾಕ್ಷಿ ಮಲಿಕ್

ನವದೆಹಲಿ (ಪಿಟಿಐ): ಬ್ರಿಜ್ ಭೂಷಣ್ ಶರಣ್ ಸಿಂಗ್ ಆಪ್ತರಾದ ಸಂಜಯ್ ಸಿಂಗ್ ಅವರನ್ನು ಹೊರಗಿಡಬೇಕು. ಉಳಿದಂತೆ ನೂತನ ಆಡಳಿತ ಸಮಿತಿಯ ಬಗ್ಗೆ ತಮ್ಮದೇನೂ ತಕರಾರು ಇಲ್ಲ ಎಂದು ಮಹಿಳಾ ಕುಸ್ತಿಪಟು ಸಾಕ್ಷಿ ಮಲಿಕ್ ಬುಧವಾರ ತಿಳಿಸಿದರು.

ಭಾರತ ಕುಸ್ತಿ ಫೆಡರೇಷನ್‌ಗೆ (ಡಬ್ಲ್ಯುಎಫ್‌ಐ) ಅಧ್ಯಕ್ಷರಾಗಿ ಸಂಜಯ್ ಆಯ್ಕೆ ಪ್ರತಿಭಟಿಸಿ ಕಳೆದ ತಿಂಗಳು 31 ವರ್ಷದ ಸಾಕ್ಷಿ ಅವರು ಕುಸ್ತಿಗೆ ವಿದಾಯ ಹೇಳಿದ್ದರು. 2016ರ ರಿಯೊ ಒಲಿಂಪಿಕ್ಸ್ ನಲ್ಲಿ ಸಾಕ್ಷಿ ಕಂಚಿನ ಪದಕ ಗೆದ್ದುಕೊಂಡಿದ್ದರು.

‘ಸರ್ಕಾರ ನಮಗೆ ಪೋಷಕರಿದ್ದಂತೆ. ಮುಂಬರುವ ಕುಸ್ತಿಪಟುಗಳಿಗೆ ಫೆಡರೇಷನ್ ಸುರಕ್ಷಾ ಭಾವ ಮೂಡಿಸಬೇಕು. ಸಂಜಯ್ ಸಿಂಗ್ ವರ್ತನೆ ನೀವೆಲ್ಲಾ ನೋಡಿದ್ದೀರಿ. ಫೆಡರೇಷನ್‌ನಲ್ಲಿ ಅವರ ಹಸ್ತಕ್ಷೇಪ ಇರಬಾರದು’ ಎಂದರು. ಸಂಜಯ್, ಚುನಾವಣೆಯಲ್ಲಿ 40–7 ಮತಗಳ ದೊಡ್ಡ ಅಂತರದಿಂದ ಅನಿತಾ ಶೆವೊರಾನ್ ಅವರನ್ನು ಸೋಲಿಸಿದ್ದರು.

ಜೂನಿಯರ್ ಕುಸ್ತಿಪಟುಗಳ ಪ್ರತಿಭಟನೆ ಬಗ್ಗೆ ಕೇಳಿದಾಗ, ‘ನಾನು ಕುಸ್ತಿಗಾಗಿ 18–20 ವರ್ಷ ತ್ಯಾಗ ಮಾಡಿದ್ದೇನೆ. ಕಳೆದ ಕೆಲವು ತಿಂಗಳನ್ನು ಹೇಗೆ ಕಳೆದಿದ್ದೇನೆ ಎಂಬುದು ನನಗಷ್ಟೇ ಗೊತ್ತು’ ಎಂದು ಸಾಕ್ಷಿ ಪ್ರತಿಕ್ರಿಯಿಸಿದರು.

ಒಲಿಂಪಿಕ್ಸ್ ಅರ್ಹತಾ ಟೂರ್ನಿಗೆ ವಂದನಾ ಅಲಭ್ಯ

ರಾಂಚಿ (ಪಿಟಿಐ): ಭಾರತ ಹಾಕಿ ತಂಡದ ಮುನ್ನಡೆ ಆಟಗಾರ್ತಿ ವಂದನಾ ಕಟಾರಿಯಾ ಅವರಿಗೆ ತರಬೇತಿ ವೇಳೆ ಕೆನ್ನೆಯ ಎಲುಬು ಮುರಿದಿದೆ. ಹೀಗಾಗಿ, ಅವರು ಇದೇ 13 ರಿಂದ 19ರ ವರೆಗೆ ನಿಗದಿಯಾಗಿರುವ ಒಲಿಂಪಿಕ್ ಅರ್ಹತಾ ಟೂರ್ನಿಗೆ ಅಲಭ್ಯರಾಗಿದ್ದು ತಂಡಕ್ಕೆ ದೊಡ್ಡ ಹಿನ್ನಡೆಯಾಗಿದೆ.

ಅವರ ಸ್ಥಾನಕ್ಕೆ ಯುವ ಆಟಗಾರ್ತಿ ಬಲ್ಜೀತ್ ಕೌರ್ ವಹಿಸಲಿದ್ದಾರೆ. ಅನುಭವಿ ವಂದನಾ ಅವರು ಉಪನಾಯಕಿಯೂ ಆಗಿದ್ದು, ಈಗ ಈ ಸ್ಥಾನವನ್ನು ನಿಕಿ ಪ್ರಧಾನ್ ವಹಿಸುವರು. ಒಲಿಂಪಿಕ್ಸ್ ಹಾಕಿಯಲ್ಲಿ ಆಡಿದ ಜಾರ್ಖಂಡ್‌ನ ಮೊದಲ ಆಟಗಾರ್ತಿ ಅವರು.



‘ವಂದನಾ ಟೂರ್ನಿಯ ಭಾಗವಾಗದಿರುವುದು ದುರದೃಷ್ಟಕರ. ತರಬೇತಿ ಅವಧಿಯಲ್ಲಿ ಅವರ ಗಲ್ಲದ ಎಲುಬಿಗೆ ಹಾನಿಯಾಗಿದೆ. ಅವರಿಗೆ ವಿಶ್ರಾಂತಿ ಪಡೆಯುವಂತೆ ಸಲಹೆ ನೀಡಲಾಗಿದೆ’ ಎಂದು ಮುಖ್ಯ ಕೋಚ್ ಯಾನೆಕ್ ಶೋಪ್‌ಮನ್ ತಿಳಿಸಿದರು.

ಒಲಿಂಪಿಕ್ ಅರ್ಹತಾ ಟೂರ್ನಿಯಲ್ಲಿ ಮೊದಲ 3 ಸ್ಥಾನ ಪಡೆಯುವ ತಂಡಗಳು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲಿವೆ. ಭಾರತ ತಂಡ ಬಿ ಗುಂಪಿನಲ್ಲಿದ್ದು, ಅಮೆರಿಕ, ನ್ಯೂಜಿಲೆಂಡ್, ಇಟಲಿ ತಂಡಗಳನ್ನು ಎದುರಿಸಲಿದೆ.

ಹುಬ್ಬಳ್ಳಿ ಅಂಗಳದಲ್ಲಿ ರಣಜಿ ಆಟಗಾರರ ತಾಲೀಮು

• ಸತೀಶ ಬಿ.

ಹುಬ್ಬಳ್ಳಿ: ಪ್ರಸಕ್ತ ಋತುವಿನ ಮೊದಲ ರಣಜಿ ಪಂದ್ಯ ಆಡುತ್ತಿರುವ ಕರ್ನಾಟಕ ತಂಡ ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಬುಧವಾರ ಅಭ್ಯಾಸ ನಡೆಸಿತು. ಜನವರಿ 5ರಿಂದ ನಡೆಯುವ ಪಂದ್ಯದಲ್ಲಿ ಕರ್ನಾಟಕವು ಪಂಜಾಬ್ ತಂಡವನ್ನು ಎದುರಿಸಲಿದೆ.

ಮಧ್ಯಾಹ್ನ 2 ಗಂಟೆಗೆ ಕ್ರೀಡಾಂಗಣಕ್ಕೆ ಬಂದ ಕರ್ನಾಟಕದ ಆಟಗಾರರು ಕೆಲ ಸಮಯ ಫುಟ್‌ಬಾಲ್ ಆಡಿದರು. ನಂತರ ನೆಟ್ಸ್‌ನಲ್ಲಿ ಬೆವರು ಸುರಿಸಿದರು. ನಾಯಕ ಮಯಂಕ್ ಅಗರವಾಲ್ ಅರ್ಧ ಗಂಟೆಗೂ ಹೆಚ್ಚು ಸಮಯ ನೆಟ್ಸ್‌ನಲ್ಲಿ ಕಳೆದರು. ಅವರು ವಿಶೇಷವಾಗಿ ಎಡಗೈ ಸ್ಪಿನ್ನರ್‌ಗಳಾದ ಶುಭಾಂಗ್ ಹೆಗಡೆ, ಎ.ಸಿ. ರೋಹಿತ್ ಕುಮಾರ್ ಮತ್ತು ಆಫ್‌ಸ್ಪಿನ್ನರ್ ಕೆ. ಶಶಿಕುಮಾರ್ ಅವರನ್ನು ಎದುರಿಸಿದರು. ನಂತರ ಥ್ರೋಡೌನ್ ಎಸೆತಗಳನ್ನು ಆಡಿದರು.

ಬಳಿಕ ತಂಡದ ಕೋಚ್ ಪಿ.ವಿ.ಶಶಿಕಾಂತ್ ಅವರೊಂದಿಗೆ ಮಯಂಕ್ ಸಮಾಲೋಚನೆ ನಡೆಸಿದರು. ಆರಂಭಿಕ ಆಟಗಾರ ಆರ್.ಸಮರ್ಥ್ ವೇಗಿಗಳಾದ ವಿದ್ವತ್ ಕಾವೇರಪ್ಪ, ವೈಶಾಖ ವಿಜಯಕುಮಾರ್ ಅವರ ಎಸೆತಗಳನ್ನು ಎದುರಿಸಿದರು. ಮನೀಷ್ ಪಾಂಡೆ, ನಿಕಿನ್ ಜೋಸ್, ದೇವದತ್ತ ಪಡಿಕ್ಕಲ್ ಬ್ಯಾಟಿಂಗ್ ಅಭ್ಯಾಸ ಮಾಡಿದರು. ಯುವಪ್ರತಿಭೆ ಧಾರವಾಡ ವಲಯದ ಸುಜಯ್ ಸಾತೇರಿ ವಿಕೆಟ್ ಕೀಪಿಂಗ್ ಅಭ್ಯಾಸ ಮಾಡಿದರು.

ಬೆಳಿಗ್ಗೆ ಅಭ್ಯಾಸ ನಡೆಸಿದ ಪಂಜಾಬ್ ತಂಡದ ಬಲಗೈ ಬ್ಯಾಟರ್‌ಗಳಾದ ಮನದೀಪ್ ಸಿಂಗ್, ಅನ್ಮೋಲ್‌ಪ್ರೀತ್ ಸಿಂಗ್ ಅವರು ವೇಗದ ಮತ್ತು ಮಧ್ಯಮ ವೇಗ ಬೌಲರ್‌ಗಳನ್ನು ಹೆಚ್ಚು ಎದುರಿಸಿದರು.

ದಕ್ಷಿಣ ಆಫ್ರಿಕಾ ತಂಡದ ಎದುರಿನ ಏಕದಿನ ಕ್ರಿಕೆಟ್ ಪಂದ್ಯದಲ್ಲಿ 5 ವಿಕೆಟ್ ಗಳಿಸಿ ಮಿಂಚಿದ್ದ ಎಡಗೈ ವೇಗಿ ಅರ್ಷದೀಪ್ ಸಿಂಗ್ ಬೌಲಿಂಗ್ ಅಭ್ಯಾಸ ನಡೆಸಿದರು.



ಕರ್ನಾಟಕ ತಂಡದ ಮಯಂಕ್ ಅಗರವಾಲ್ ಜತೆ ಕೋಚ್ ಪಿ.ವಿ.ಶಶಿಕಾಂತ್ ಚರ್ಚಿಸಿದರು – ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ಬಿಟಿಎಂಗೆ ಜಯ

ಬೆಂಗಳೂರು: ಎಂ.ಡಿ. ಖಲೀಲ್ ಉಲ್ಲಾ ಗಳಿಸಿದ ಏಕೈಕ ಗೋಲಿನ ನೆರವಿನಿಂದ ಬಿಟಿಎಂ ಎಫ್.ಸಿ ತಂಡವು ಬುಧವಾರ ಆರಂಭಗೊಂಡ ಬಿಡಿಎಫ್‌ಎ ‘ಎ’ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 1–0ಯಿಂದ ಪರಿಕ್ರಮ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಮೈದಾನದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಶ್ರೀ ಗಜಾನನ ಎಫ್.ಸಿ ತಂಡವು 3–1ರಿಂದ ಬೆಂಗಳೂರು ಗನ್ನರ್ಸ್ ಎಫ್.ಸಿ ತಂಡವನ್ನು ಮಣಿಸಿತು. ಇನ್ನೊಂದು ಪಂದ್ಯದಲ್ಲಿ ಬ್ಲಿಟ್ಜ್ ಎಫ್.ಸಿ ತಂಡವು 1–0ಯಿಂದ ರೂರ್ಟ್ ಎಫ್.ಎಸ್ ತಂಡವನ್ನು ಸೋಲಿಸಿತು. ಬ್ಲಿಟ್ಜ್ ತಂಡದ ಪರ ಅಬ್ದುಲ್ ಮರ್ಷಿಕ್ ಮಾ ಗೋಲು ಗಳಿಸಿದರು.

ಕೇಪ್‌ಟೌನ್ ಟೆಸ್ಟ್‌ನಲ್ಲಿ ವೇಗಿಗಳ ಆರ್ಭಟ • ಬ್ಯಾಟರ್‌ಗಳ ಪರದಾಟ • ಸಿರಾಜ್‌ಗೆ ಆರು ವಿಕೆಟ್ • ಕೊಹ್ಲಿ ದಿಟ್ಟ ಆಟ

ನ್ಯೂಲ್ಯಾಂಡ್‌ನಲ್ಲಿ ವಿಕೆಟ್ ಪತನದ ಭರಾಟೆ

ಪ್ರಜಾವಾಣಿ ವಾರ್ತೆ

ಕೇಪ್‌ಟೌನ್: ನ್ಯೂಲ್ಯಾಂಡ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಬುಧವಾರ ವೇಗದ ಬೌಲರ್‌ಗಳದ್ದೇ ಪಾರುಪತ್ಯ. ಬ್ಯಾಟರ್‌ಗಳಿಗೆ ಪೆವಿಲಿಯನ್ ಪರೇಡ್ ಮಾತ್ರ!

ಇಲ್ಲಿ ಆರಂಭವಾದ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಸರಣಿಯ ಎರಡನೇ ಟೆಸ್ಟ್‌ನ ಪ್ರಥಮ ದಿನವೇ 23 ವಿಕೆಟ್‌ಗಳು ಪತನವಾದವು. ಸರಣಿಯ ಮೊದಲ ಪಂದ್ಯದಲ್ಲಿ ಇನಿಂಗ್ಸ್ ಮತ್ತು 32 ರನ್‌ಗಳಿಂದ ಗೆದ್ದಿದ್ದ ಆತಿಥೇಯ ತಂಡವು ಇಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಬ್ಯಾಟರ್‌ಗಳ ಸ್ವರ್ಗವೆಂದೇ ಬಿಂಬಿಸಲಾಗಿದ್ದ ಪಿಚ್‌ನಲ್ಲಿ ಎಲ್ಲವೂ ತಿರುವುಮುರುವಾಯಿತು.

ಭಾರತದ ವೇಗಿ ಮೊಹಮ್ಮದ್ ಸಿರಾಜ್ (15ಕ್ಕೆ6) ದಾಳಿಗೆ ತತ್ತರಿಸಿದ ದಕ್ಷಿಣ ಆಫ್ರಿಕಾ 23.2 ಓವರ್‌ಗಳಲ್ಲಿ 55 ರನ್ ಗಳಿಸಿ ಆಲೌಟ್ ಆಯಿತು. 121 ನಿಮಿಷದಲ್ಲಿ ಆತಿಥೇಯರ ಮೊದಲ ಇನಿಂಗ್ಸ್ ಮುಕ್ತಾಯವಾಯಿತು.

ಊಟದ ವಿರಾಮದ ನಂತರ ಇನಿಂಗ್ಸ್ ಆರಂಭಿಸಿದ ಭಾರತ ತಂಡ 34.5 ಓವರ್‌ಗಳಲ್ಲಿ 153 ರನ್ ಗಳಿಸಿ ಆಲೌಟ್ ಆಯಿತು. ಇದರೊಂದಿಗೆ 98 ರನ್‌ಗಳ ಮುನ್ನಡೆ ಗಳಿಸಿತು. ಎರಡನೇ ಇನಿಂಗ್ಸ್ ಆರಂಭಿಸಿದ ದಕ್ಷಿಣ ಆಫ್ರಿಕಾ ತಂಡವು ದಿನದಾಟದ ಮುಕ್ತಾಯಕ್ಕೆ 17 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 62 ರನ್ ಗಳಿಸಿದೆ. ಈ ಇನಿಂಗ್ಸ್‌ನಲ್ಲಿ ಮುಕೇಶ್ ಕುಮಾರ್ (25ಕ್ಕೆ2) ಆತಿಥೇಯರಿಗೆ ಆರಂಭಿಕ ಪೆಟ್ಟುಕೊಟ್ಟರು.

ಸೊನ್ನೆಗೆ ಆರು ವಿಕೆಟ್: ಒಂದು ಹಂತದಲ್ಲಿ ಭಾರತ ತಂಡವು ಉತ್ತಮ ಮೊತ್ತದ ಮುನ್ನಡೆ ಗಳಿಸುವ ಭರವಸೆ ಮೂಡಿಸಿತ್ತು. ಆದರೆ ನಾಟಕೀಯ ತಿರುವು ಕಂಡ ಇನಿಂಗ್ಸ್‌ನಲ್ಲಿ 'ವಿಶ್ವದಾಖಲೆಯ ಕುಸಿತ' ಕಂಡಿತು. 33 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 153 ರನ್ ಗಳಿಸಿತ್ತು. ಇದರ ನಂತರದ 11 ಎಸೆತಗಳಲ್ಲಿ ಆರು ವಿಕೆಟ್‌ಗಳು ಪತನಗೊಂಡವು. ಈ ಹಂತದಲ್ಲಿ ತಂಡದ ಮೊತ್ತಕ್ಕೆ ಒಂದೂ ರನ್ ಸೇರಲಿಲ್ಲ.

ವಿರಾಟ್ ಕೊಹ್ಲಿ (46; 59ಎ, 4X6, 6X1) ಮತ್ತು ಕೆ.ಎಲ್. ರಾಹುಲ್ (8; 33ಎ) ಅವರ ಜೊತೆಯಾಟ ಕುದುರಿತ್ತು. ಆದರೆ 34ನೇ ಓವರ್‌ನ ಮೊದಲ ಎಸೆತದಲ್ಲಿ ಕೆಟ್ಟ ಹೊಡೆತವಾಡಿದ ರಾಹುಲ್ ಔಟಾಗುವುದರೊಂದಿಗೆ ಭಾರತ ತಂಡವು ಕುಸಿಯಿತು. ಅದೇ ಓವರ್‌ನಲ್ಲಿ ರಾಹುಲ್ ಸೇರಿದಂತೆ ಒಟ್ಟು ಮೂರು ವಿಕೆಟ್ ಕಬಳಿಸಿದ ಲುಂಗಿ ಗಿಡಿ ಮಿಂಚಿದರು. ನಂತರದ ಓವರ್‌ನಲ್ಲಿ ರಬಾಡ ಅವರು ಕೊಹ್ಲಿ ಮತ್ತು ಪ್ರಸಿದ್ಧಕೃಷ್ಣ ವಿಕೆಟ್‌ಗಳನ್ನು ಗಳಿಸಿದರು. ಸಿರಾಜ್ ರನ್‌ಔಟ್ ಆದರು.


ಇನಿಂಗ್ಸ್ ಆರಂಭದಲ್ಲಿಯೇ ಭಾರತಕ್ಕೆ ಆಘಾತ ಎದುರಾಯಿತು. ಮೂರನೇ ಓವರ್‌ನಲ್ಲಿ ರಬಾಡ ಎಸೆತದ ವೇಗ ಅಂದಾಜಿಸುವಲ್ಲಿ ಎಡವಿದ ಯಶಸ್ವಿ ಜೈಸ್ವಾಲ್ ಕ್ಲೀನ್‌ಬೌಲ್ಡ್ ಆದರು. ನಾಯಕ ರೋಹಿತ್ ಶರ್ಮಾ (39; 50ಎ, 4X7) ಮತ್ತು ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಶುಭಮನ್ ಗಿಲ್ (36; 55ಎ, 4X5) ಎರಡನೇ ವಿಕೆಟ್ ಜೊತೆಯಾಟದಲ್ಲಿ 55 ರನ್ ಸೇರಿಸಿದರು. ರಾಹುಲ್ ಮತ್ತು ಕೊಹ್ಲಿ ಐದನೇ ವಿಕೆಟ್ ಜೊತೆಯಾಟದಲ್ಲಿ 43 ರನ್ ಗಳಿಸಿದರು.

ಎಲ್ಗರ್ ಕೊನೆಯ ಇನಿಂಗ್ಸ್: ವಿದಾಯದ ಪಂದ್ಯವಾಡಿದ ಡೀನ್ ಎಲ್ಗರ್ ತಮ್ಮ ವೃತ್ತಿಜೀವನದ ಕೊನೆ ಇನಿಂಗ್ಸ್‌ನಲ್ಲಿ 12 ರನ್ ಗಳಿಸಿದರು. ಅದರಲ್ಲಿ ಎರಡು ಬೌಂಡರಿಗಳಿದ್ದವು. ಅವರು ಏಡನ್ ಮರ್ಕರಂ ಜೊತೆಗೆ ಮೊದಲ ವಿಕೆಟ್ ಜೊತೆಯಾಟದಲ್ಲಿ 37 ರನ್ ಸೇರಿಸಿದರು.

11ನೇ ಓವರ್‌ನಲ್ಲಿ ಮುಕೇಶ್ ಕುಮಾರ್ ಹಾಕಿದ ಎಸೆತದಲ್ಲಿ ವಿರಾಟ್ ಕೊಹ್ಲಿ ಪಡೆದ ಕ್ಯಾಚ್‌ಗೆ ಎಲ್ಗರ್ ಔಟಾದರು. ಅವರು ಮೊದಲ ಇನಿಂಗ್ಸ್‌ನಲ್ಲಿ 4 ರನ್ ಗಳಿಸಿದ್ದರು. ಭಾರತದ ಎದುರು ಟೆಸ್ಟ್‌ಗಳಲ್ಲಿ ಒಟ್ಟು ಒಂದು ಸಾವಿರ ರನ್ ಗಳಿಸಿದ ಬ್ಯಾಟರ್ ಆದರು.

ಭಾರತ ವಿರುದ್ಧ ಕನಿಷ್ಠ ರನ್ ದಾಖಲೆ: ದಕ್ಷಿಣ ಆಫ್ರಿಕಾ ಮೊದಲ ಇನ್ನಿಂಗ್ಸ್‌ನಲ್ಲಿ ಗಳಿಸಿದ 55 ರನ್ ಭಾರತದ ವಿರುದ್ಧ ತಂಡವೊಂದು ಗಳಿಸಿದ ಕನಿಷ್ಠ ಮೊತ್ತ ಇದಾಗಿದೆ. 2021ರಲ್ಲಿ ನ್ಯೂಜಿಲೆಂಡ್ ತಂಡವು 62 ರನ್‌ಗೆ ಆಲೌಟ್ ಆಗಿದ್ದು ಈವರೆಗಿನ ದಾಖಲೆಯಾಗಿತ್ತು.


ದಕ್ಷಿಣ ಆಫ್ರಿಕಾದ ವಿಕೆಟ್ ಪಡೆದ ಸಂಭ್ರಮದಲ್ಲಿ ಭಾರತ ತಂಡದ ಆಟಗಾರರು –ಪಿಟಿಐ ಚಿತ್ರ


ವಿರಾಟ್ ಕೊಹ್ಲಿ


ಆರು ವಿಕೆಟ್ ಪಡೆದ ಭಾರತದ ಮೊಹಮ್ಮದ್ ಸಿರಾಜ್ ಬೌಲಿಂಗ್ – ಎಎಫ್‌ಪಿ ಚಿತ್ರ

ಪ್ಯಾಲೆಸ್ಟೀನ್ ಬೆಂಬಲಿಗರ ಘೋಷಣೆ

ಕೇಪ್‌ಟೌನ್ (ಪಿಟಿಐ): ಇಸ್ರೇಲ್ ಸೇನೆ ಯನ್ನು ಬೆಂಬಲಿಸಿ ಹೇಳಿಕೆ ನೀಡಿರುವ 19 ವರ್ಷದೊಳಗಿನವ ತಂಡದ ನಾಯಕ ಡೇವಿಡ್ ಟೀಗರ್ ಅವರನ್ನು ತಂಡದಿಂದ ಕೈಬಿಡಬೇಕೆಂದು ಆಗ್ರಹಿಸಿ ಪ್ಯಾಲೆಸ್ಟೀನ್ ಪರ ಗುಂಪು, ಎರಡನೇ ಟೆಸ್ಟ್ ಆರಂಭಕ್ಕೆ ಮುನ್ನ ನ್ಯೂಲ್ಯಾಂಡ್ಸ್ ಕ್ರೀಡಾಂಗಣದ ಹೊರಗೆ ಇಸ್ರೇಲ್ ವಿರೋಧಿ ಘೋಷಣೆಗಳನ್ನು ಕೂಗಿತು.

'ಜನಾಂಗೀಯ ತಾರತಮ್ಯ ಎಸಗುತ್ತಿರುವ ಇಸ್ರೇಲ್ ಅನ್ನು ಬಹಿಷ್ಕರಿಸಿ' ಎಂದು ಪ್ರತಿಭಟನಕಾರರು ಹಿಡಿದಿದ್ದ ಫಲಕಗಳಲ್ಲಿ ಬರೆಯಲಾಗಿತ್ತು. ಸ್ವತಂತ್ರ್ಯ ಪಾಲೆಸ್ಟೀನ್ ಸ್ಥಾಪನೆ ಮಾಡುವಂತೆಯೂ ಗುಂಪು ಘೋಷಣೆ ಕೂಗಿತು.

ಸ್ಕೋರ್ ಕಾರ್ಡ್

ಮೊದಲ ಇನ್ನಿಂಗ್ಸ್: ದಕ್ಷಿಣ ಆಫ್ರಿಕಾ 55 (23.2 ಓವರ್‌ಗಳಲ್ಲಿ)

ಮರ್ಕರಂ ಸಿ ಜೈಸ್ವಾಲ್ ಬಿ ಸಿರಾಜ್ 2 (10ಎ)
ಎಲ್ಗರ್ ಬಿ ಸಿರಾಜ್ 4 (15ಎ)
ಝೂರ್ಜಿ ಸಿ ರಾಹುಲ್ ಬಿ ಸಿರಾಜ್ 2 (17ಎ)
ಟ್ರಿಸ್ಟನ್ ಸಿ ರೋಹಿತ್ ಬಿ ಬೂಮ್ರಾ 3 (11ಎ)
ಡೇವಿಡ್ ಸಿ ಜೈಸ್ವಾಲ್ ಬಿ ಸಿರಾಜ್ 12 (17ಎ, 4x2)
ಕೈಲ್ ಸಿ ಗಿಲ್ ಬಿ ಸಿರಾಜ್ 15 (30ಎ, 4x1)
ಯಾನ್ಸೆನ್ ಸಿ ರಾಹುಲ್ ಬಿ ಸಿರಾಜ್ 0 (3ಎ)
ಕೇಶವ್ ಸಿ ಬೂಮ್ರಾ ಬಿ ಮುಕೇಶ್ 3 (13ಎ)
ರಬಾಡ ಸಿ ಅಯ್ಯರ್ ಬಿ ಮುಕೇಶ್ 5 (13ಎ)
ನಾಂದ್ರೆ ಸಿ ಜೈಸ್ವಾಲ್ ಬಿ ಬೂಮ್ರಾ 4 (11ಎ, 4x1)
ಲುಂಗಿ ಗಿಡಿ ಔಟಾಗದೆ 0 (0ಎ)
ಇತರೆ: 5 (ಬೈ 4, ಲೆಗ್‌ಬೈ 1)
ವಿಕೆಟ್ ಪತನ: 1-5 (ಏಡನ್ ಮರ್ಕರಂ; 3.2), 2-8 (ಡೀನ್ ಎಲ್ಗರ್; 5.3), 3-11 (ಟ್ರಿಸ್ಟನ್ ಸ್ಟಬ್ಸ್; 8.3), 4-15 (ಟೋನಿ ಡಿ ಝೂರ್ಜಿ; 9.2), 5-34 (ಡೇವಿಡ್ ಬೆಡಿಂಗ್‌ಹ್ಯಾಮ್; 15.2), 6-34 (ಮಾರ್ಕೊ ಯಾನ್ಸೆನ್; 15.5), 7-45 (ಕೈಲ್ ವೆರೆಯನ್; 17.5), 8-46 (ಕೇಶವ್ ಮಹಾರಾಜ್; 19.6), 9-55 (ನಾಂದ್ರೆ ಬರ್ಗರ್; 22.6), 10-55 (ಕಗಿಸೊ ರಬಾಡ; 23.2)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 8–1–25–2, ಮೊಹಮ್ಮದ್ ಸಿರಾಜ್ 9–3–15–6, ಪ್ರಸಿದ್ಧ ಕೃಷ್ಣ 4–1–10–0, ಮುಕೇಶ್ ಕುಮಾರ್ 2.2–2–0–2

ಭಾರತ 153 (34.5 ಓವರ್‌ಗಳಲ್ಲಿ)

ಯಶಸ್ವಿ ಬಿ ರಬಾಡ 0 (7ಎ)
ರೋಹಿತ್ ಸಿ ಯಾನ್ಸೆನ್ ಸಿ ಬರ್ಗರ್ 39 (50ಎ, 4x7)
ಶುಭಮನ್ ಸಿ ಯಾನ್ಸೆನ್ ಬಿ ಬರ್ಗರ್ 36 (55ಎ, 4x5)
ವಿರಾಟ್ ಸಿ ಮರ್ಕರಂ ಬಿ ರಬಾಡ 46 (59ಎ, 4x6, 6x1)
ಶ್ರೇಯಸ್ ಸಿ ವೆರೆಯನ್ ಬಿ ಬರ್ಗರ್ 0 (2ಎ)
ರಾಹುಲ್ ಸಿ ವೆರೆಯನ್ ಬಿ ಗಿಡಿ 8 (33, 4x1)
ಜಡೇಜ ಸಿ ಯಾನ್ಸೆನ್ ಬಿ ಗಿಡಿ 0 (2ಎ)
ಬೂಮ್ರಾ ಸಿ ಯಾನ್ಸೆನ್ ಬಿ ಗಿಡಿ 0 (2ಎ)
ಸಿರಾಜ್ ರನ್‌ಔಟ್ (ಬರ್ಗರ್) 0 (1ಎ)
ಪ್ರಸಿದ್ಧ ಕೃಷ್ಣ ಸಿ ಮರ್ಕರಂ ಬಿ ರಬಾಡ 0 (3ಎ)
ಮುಕೇಶ್ ಔಟಾಗದೆ 0 (0ಎ)
ಇತರೆ: 24 (ಬೈ 4, ಲೆಗ್‌ಬೈ 10, ನೋಬಾಲ್ 5, ವೈಡ್ 5)
ವಿಕೆಟ್ ಪತನ: 1-17 (ಯಶಸ್ವಿ ಜೈಸ್ವಾಲ್; 2.1), 2-72 (ರೋಹಿತ್ ಶರ್ಮಾ; 14.2), 3-105 (ಶುಭಮನ್ ಗಿಲ್; 20.6), 4-110 (ಶ್ರೇಯಸ್ ಅಯ್ಯರ್; 22.2), 5-153 (ಕೆ.ಎಲ್.ರಾಹುಲ್; 33.1), 6-153 (ರವೀಂದ್ರ ಜಡೇಜ; 33.3), 7-153 (ಜಸ್‌ಪ್ರೀತ್ ಬೂಮ್ರಾ; 33.5), 8-153 (ವಿರಾಟ್ ಕೊಹ್ಲಿ;34.2), 9-153 (ಮೊಹಮ್ಮದ್ ಸಿರಾಜ್; 34.4), 10-153 (ಪ್ರಸಿದ್ಧ ಕೃಷ್ಣ; 34.5)
ಬೌಲಿಂಗ್: ಕಗಿಸೊ ರಬಾಡ 11.5–2–38–3, ಲುಂಗಿ ಗಿಡಿ 6–1–30–3, ನಾಂದ್ರೆ ಬರ್ಗರ್ 8–2–42–3, ಮಾರ್ಕೊ ಯಾನ್ಸೆನ್ 9–2–29–0

ಎರಡನೇ ಇನ್ನಿಂಗ್ಸ್: ದಕ್ಷಿಣ ಆಫ್ರಿಕಾ 3 ವಿಕೆಟ್‌ಗೆ 62 (17 ಓವರ್‌ಗಳಲ್ಲಿ)

ಮರ್ಕರಂ ಔಟಾಗದೆ 36 (51ಎ, 4x6)
ಎಲ್ಗರ್ ಸಿ ಕೊಹ್ಲಿ ಬಿ ಮುಕೇಶ್ 12 (28ಎ, 4x2)
ಝೂರ್ಜಿ ಸಿ ರಾಹುಲ್ ಬಿ ಮುಕೇಶ್ 1 (7ಎ)
ಟ್ರಿಸ್ಟನ್ ಸಿ ರಾಹುಲ್ ಬಿ ಬೂಮ್ರಾ 1 (14ಎ)
ಡೇವಿಡ್ ಔಟಾಗದೆ 7 (6ಎ, 4x1)
ಇತರೆ: 5 (ಲೆಗ್‌ಬೈ 1, ನೋಬಾಲ್ 4)
ವಿಕೆಟ್ ಪತನ: 1-37 (ಎಲ್ಗರ್; 10.2), 2-41 (ಝೂರ್ಜಿ; 12.1), 3-45 (ಟ್ರಿಸ್ಟನ್;15.2)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 6–0–25–1, ಸಿರಾಜ್ 5–2–11–0, ಮುಕೇಶ್ 6–2–25–2

ಟೆಸ್ಟ್ ಪಂದ್ಯದ ಒಂದೇ ದಿನದಲ್ಲಿ ಹೆಚ್ಚು ವಿಕೆಟ್ ಪತನ

ವಿಕೆಟ್	ಪಂದ್ಯ	ಸ್ಥಳ	ವರ್ಷ	ದಿನದಾಟ
27	ಇಂಗ್ಲೆಂಡ್–ಆಸ್ಟ್ರೇಲಿಯಾ	ಲಾರ್ಡ್ಸ್	1888	2
25	ಆಸ್ಟ್ರೇಲಿಯಾ–ಇಂಗ್ಲೆಂಡ್	ಮೆಲ್ಬರ್ನ್	1902	1
24	ಇಂಗ್ಲೆಂಡ್–ಆಸ್ಟ್ರೇಲಿಯಾ	ದ ಓವಲ್	1896	2
24	ಭಾರತ–ಅಫ್ಘಾನಿಸ್ತಾನ	ಬೆಂಗಳೂರು	2018	2
23	ದ.ಆಫ್ರಿಕಾ–ಆಸ್ಟ್ರೇಲಿಯಾ	ಕೇಪ್‌ಟೌನ್	2011	2
23	ದ.ಆಫ್ರಿಕಾ–ಭಾರತ	ಕೇಪ್‌ಟೌನ್	2024	1

ರ‍್ಯಾಂಕಿಂಗ್: ಅಗ್ರ ಹತ್ತರಲ್ಲಿ ಕೊಹ್ಲಿ


ವಿರಾಟ್ ಕೊಹ್ಲಿ


ಆರ್. ಅಶ್ವಿನ್

ದುಬೈ (ಪಿಟಿಐ): ಭಾರತ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ, ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಮತ್ತೆ ಅಗ್ರ ಹತ್ತರೊಳಗೆ ಸ್ಥಾನ ಪಡೆದಿದ್ದಾರೆ.

ಬುಧವಾರ ಪ್ರಕಟವಾದ ರ‍್ಯಾಂಕಿಂಗ್‌ನಲ್ಲಿ ವಿರಾಟ್ ಒಂಬತ್ತನೇ ಸ್ಥಾನದಲ್ಲಿದ್ದಾರೆ. ಒಟ್ಟು ನಾಲ್ಕು ಸ್ಥಾನಗಳ ಬಡ್ತಿ ಪಡೆದಿದ್ದಾರೆ. 2022ರಲ್ಲಿ ಅವರು ಅಗ್ರ ಹತ್ತು ಸ್ಥಾನಗಳಿಂದ ಹೊರಬಿದ್ದಿದ್ದರು.

ಹೋದ ವಾರ ಸೆಂಚುರಿಯನ್‌ನಲ್ಲಿ ನಡೆದ ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಪಂದ್ಯದಲ್ಲಿ ಅವರು ಎರಡು ಇನಿಂಗ್ಸ್‌ಗಳಲ್ಲಿ ಕ್ರಮವಾಗಿ 38 ಮತ್ತು 76 ರನ್ ಗಳಿಸಿದ್ದರು. ಅದರೊಂದಿಗೆ ಟಾಪ್ ಟೆನ್ ಬ್ಯಾಟರ್‌ಗಳ ಸಾಲಿಗೆ ಮರಳಿದರು.

ನ್ಯೂಜಿಲೆಂಡ್ ತಂಡದ ಕೇನ್ ವಿಲಿಯಮ್ಸನ್ ಅಗ್ರಸ್ಥಾನದಲ್ಲಿದ್ದಾರೆ. ಇಂಗ್ಲೆಂಡ್ ತಂಡದ ಜೋ ರೂಟ್ ಮತ್ತು ಆಸ್ಟ್ರೇಲಿಯಾದ ಸ್ಟೀವ್ ಸ್ಮಿತ್ ಕ್ರಮವಾಗಿ 2 ಮತ್ತು 3ನೇ ಸ್ಥಾನಗಳಲ್ಲಿದ್ದಾರೆ. ಭಾರತ ತಂಡದ ನಾಯಕ ರೋಹಿತ್ ಶರ್ಮಾ 14ನೇ ಸ್ಥಾನಕ್ಕೆ ಇಳಿದಿದ್ದಾರೆ. ಅವರು ಸೆಂಚುರಿಯನ್ ಟೆಸ್ಟ್‌ನಲ್ಲಿ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದರು.

11 ಸ್ಥಾನಗಳ ಬಡ್ತಿ ಪಡೆದಿರುವ ಕನ್ನಡಿಗ ಕೆ.ಎಲ್. ರಾಹುಲ್ 51ನೇ ಸ್ಥಾನಕ್ಕೇರಿದ್ದಾರೆ. ಬೌಲರ್‌ಗಳ ವಿಭಾಗದಲ್ಲಿ ಆರ್. ಅಶ್ವಿನ್ ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ. ರವೀಂದ್ರ ಜಡೇಜ ಮತ್ತು ಜಸ್‌ಪ್ರೀತ್ ಬೂಮ್ರಾ ಅವರು ಕ್ರಮವಾಗಿ 4 ಹಾಗೂ 5ನೇ ಸ್ಥಾನದಲ್ಲಿದ್ದಾರೆ.

ಆಲ್‌ರೌಂಡರ್‌ಗಳ ವಿಭಾಗದಲ್ಲಿ ಜಡೇಜ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಅಶ್ವಿನ್ ಎರಡನೇ ಸ್ಥಾನದಲ್ಲಿದ್ದಾರೆ.

ತಂಡಗಳ ವಿಭಾಗದಲ್ಲಿ ಭಾರತವು 118 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ತಂಡವು ಕ್ರಮವಾಗಿ ಎರಡು ಹಾಗೂ ಮೂರನೇಯ ಸ್ಥಾನಗಳಲ್ಲಿವೆ.

ಐಸಿಸಿ ವಾರ್ಷಿಕ ಪ್ರಶಸ್ತಿ ರೇಸ್‌ನಲ್ಲಿ ಸೂರ್ಯಕುಮಾರ್, ಜೈಸ್ವಾಲ್



ಸೂರ್ಯಕುಮಾರ್, ಯಶಸ್ವಿ ಜೈಸ್ವಾಲ್

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಟಗಾರ ಸೂರ್ಯಕುಮಾರ್ ಯಾದವ್ ಅವರು ಈ ವರ್ಷದ ಐಸಿಸಿ ವರ್ಷದ ಟಿ20 ಕ್ರಿಕೆಟಿಗ ಪ್ರಶಸ್ತಿ ರೇಸ್‌ನಲ್ಲಿ ಮುಂಚೂಣಿಯಲ್ಲಿದ್ದಾರೆ.

2022ರಲ್ಲಿಯೂ ಅವರು ವರ್ಷದ ಕ್ರಿಕೆಟಿಗ ಪ್ರಶಸ್ತಿ ಜಯಿಸಿದ್ದರು. ಇದೀಗ ಈ ವರ್ಷವೂ ಪೈಪೋಟಿಯಲ್ಲಿದ್ದಾರೆ. 17 ಪಂದ್ಯಗಳಿಂದ 733 ರನ್‌ಗಳನ್ನು ಗಳಿಸಿದ್ದಾರೆ. 33 ವರ್ಷದ ಸೂರ್ಯ 155.95ರ ಸ್ಟ್ರೈಕ್‌ರೇಟ್ ಹೊಂದಿದ್ದಾರೆ.

ಸೂರ್ಯ ಅವರು ಈಚೆಗೆ ಆಸ್ಟ್ರೇಲಿಯಾ ಎದುರಿನ ಟಿ20 ಸರಣಿಯಲ್ಲಿ ಭಾರತ ತಂಡದ ನಾಯಕತ್ವ ವಹಿಸಿದ್ದರು.

ಈ ವಿಭಾಗದಲ್ಲಿ ಸಿಕಂದರ್ ರಝಾ (ಜಿಂಬಾಬ್ವೆ), ಅಲ್ಪೇಶ್ ರಾಮಜಾನಿ (ಉಗಾಂಡ) ಹಾಗೂ ಮಾರ್ಕ್ ಚಾಪ್‌ಮನ್ (ನ್ಯೂಜಿಲೆಂಡ್) ಸ್ಪರ್ಧೆಯಲ್ಲಿದ್ದಾರೆ. ಭಾರತದ ಯುವ ಬ್ಯಾಟರ್ ಯಶಸ್ವಿ ಜೈಸ್ವಾಲ್ ಅವರನ್ನು ಉದಯೋನ್ಮುಖ ಕ್ರಿಕೆಟರ್ ವಿಭಾಗದಲ್ಲಿ ನಾಮನಿರ್ದೇಶನ ಮಾಡಲಾಗಿದೆ. ಈ ವಿಭಾಗದಲ್ಲಿ ನಾಲ್ವರು ಆಟಗಾರರು ನಾಮನಿರ್ದೇಶನಗೊಂಡಿದ್ದಾರೆ.

22 ವರ್ಷದ ಯಶಸ್ವಿ ಟೆಸ್ಟ್‌ನಲ್ಲಿ 283 ಮತ್ತು ಟಿ20 ಮಾದರಿಯಲ್ಲಿ 430 ರನ್ ಗಳಿಸಿದ್ದಾರೆ. ಚುಟುಕು ಮಾದರಿಯಲ್ಲಿ ಅವರು 159.25ರ ಸ್ಟ್ರೈಕ್‌ರೇಟ್ ಹೊಂದಿದ್ದಾರೆ. ಅವರ ವಿಭಾಗದಲ್ಲಿ ನ್ಯೂಜಿಲೆಂಡ್ ತಂಡದ ರಚಿನ್ ರವೀಂದ್ರ, ದಕ್ಷಿಣ ಆಫ್ರಿಕಾದ ಜೆರಾಲ್ಡ್ ಕೊಟ್ಜಿಯಾ ಮತ್ತು ಶ್ರೀಲಂಕಾದ ದಿಲ್ಶಾನ್ ಮಧುಶಂಕಾ ಸ್ಪರ್ಧೆಯಲ್ಲಿದ್ದಾರೆ.


ಪ್ರೊ ಕಬಡ್ಡಿ ಪಂದ್ಯದಲ್ಲಿ ಪುಣೇರಿ ಪಲ್ಟನ್ ಮತ್ತು ಯುಪಿ ಯೋಧಾಸ್ ತಂಡಗಳ ನಡುವೆ ಹಣಾಹಣಿ

ಮೂರನೇ ಟೆಸ್ಟ್: ಪ್ಯಾಟ್ ಕಮಿನ್ಸ್ ದಾಳಿ, ಜಮಾಲ್ ತಿರುಗೇಟು

ಸಿಡ್ನಿ(ಎಎಫ್‌ಪಿ): ಪಾಕಿಸ್ತಾನ ತಂಡವು ಬುಧವಾರ ಇಲ್ಲಿ ಆರಂಭವಾದ 3ನೇ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್ ದಾಳಿಗೆ ಅಲ್ಪಮೊತ್ತಕ್ಕೆ ಕುಸಿಯುವ ಭೀತಿ ಎದುರಿಸಿತ್ತು. ಆದರೆ, ಮಧ್ಯಮ ಮತ್ತು ಕೆಳಕ್ರಮಾಂಕದ ಬ್ಯಾಟರ್‌ಗಳು ಪಾಕ್ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗೌರವಾರ್ಹ ಮೊತ್ತ ಗಳಿಸಲು ಕಾರಣರಾದರು.

ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ಬುಧವಾರ ಆರಂಭವಾದ ಮೂರನೇ ಟೆಸ್ಟ್ ಪಂದ್ಯದ ಮೊದಲ ದಿನದಾಟದಲ್ಲಿ ಪಾಕಿಸ್ತಾನ ತಂಡವು 77.1 ಓವರ್‌ಗಳಲ್ಲಿ 313 ರನ್ ಗಳಿಸಿತು. ಟಾಸ್ ಗೆದ್ದು ಬ್ಯಾಟಿಂಗ್ ಆರಂಭಿಸಿದ ಪಾಕ್ ತಂಡದ ಆರಂಭಿಕ ಜೋಡಿ ಅಬ್ದುಲ್ಲಾ ಶಫೀಕ್ ಮತ್ತು ಸಯಾಮ್ ಅಯೂಬ್ ಅವರಿಬ್ಬರೂ ಖಾತೆ ತೆರೆಯದೇ ಪೆವಿಲಿಯನ್ ಸೇರಿದರು. ಇಬ್ಬರು ತಲಾ 2 ಎಸೆತ ಎದುರಿಸಿದ್ದು ವಿಶೇಷ. ಶಫೀಕ್ ಮತ್ತು ಅಯೂಬ್ ವಿಕೆಟ್‌ಗಳನ್ನು ಕ್ರಮವಾಗಿ ಸ್ಟಾರ್ಕ್ ಮತ್ತು ಹ್ಯಾಜಲ್‌ವುಡ್ ಗಳಿಸಿದರು. ನಂತರ ಮಧ್ಯಮ ಕ್ರಮಾಂಕವನ್ನು ನಾಯಕ ಕಮಿನ್ಸ್ (61ಕ್ಕೆ5) ಕಾಡಿದರು. ಇದರಿಂದಾಗಿ ತಂಡವು 96 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿತು.

ರಿಜ್ವಾನ್ (88; 103ಎ,) ಮತ್ತು ಆಘಾ ಸಲ್ಮಾನ್ (53; 67ಎ, 4X8) ಆರನೇ ವಿಕೆಟ್ ಜೊತೆಯಾಟದಲ್ಲಿ 96 ರನ್‌ಗಳನ್ನು ಸೇರಿಸಿದರು. 9ನೇ ಕ್ರಮಾಂಕದಲ್ಲಿ ಬಂದ ಆಮಿರ್ ಜಮಾಲ್ (82; 97ಎ) ಮಿಂಚಿನ ಬ್ಯಾಟಿಂಗ್ ಮಾಡಿದರು.

ಕಮಿನ್ಸ್ ದಾಖಲೆ: ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ಕಮಿನ್ಸ್ ತಮ್ಮದೇ ದೇಶದ ಸ್ಪಿನ್ನರ್ ನಾಥನ್ ಲಿಯಾನ್ ಅವರ 162 ವಿಕೆಟ್‌ಗಳ ದಾಖಲೆ ಮುರಿದರು. 38 ಪಂದ್ಯಗಳಲ್ಲಿ ಕಮಿನ್ಸ್ ಒಟ್ಟು 163 ವಿಕೆಟ್ ಪಡೆದು ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್ ಎನಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: 77.1 ಓವರ್‌ಗಳಲ್ಲಿ 313 (ಶಾನ್ ಮಸೂದ್ 35, ಮೊಹಮ್ಮದ್ ರಿಜ್ವಾನ್ 88, ಬಾಬರ್ ಆಜಂ 26, ಆಘಾ ಸಲ್ಮಾನ್ 53, ಆಮಿರ್ ಜಮಾಲ್ 82, ಮಿಚೆಲ್ ಸ್ಟಾರ್ಕ್ 75ಕ್ಕೆ2, ಪ್ಯಾಟ್ ಕಮಿನ್ಸ್ 61ಕ್ಕೆ5). ಆಸ್ಟ್ರೇಲಿಯಾ 1 ಓವರ್‌ನಲ್ಲಿ ವಿಕೆಟ್ ನಷ್ಟವಿಲ್ಲದೆ 6.

ರಾಷ್ಟ್ರೀಯ ಬಾಲ್ ಬ್ಯಾಡ್ಮಿಂಟನ್: ಮಹದೇವಸ್ವಾಮಿ, ದಿವ್ಯಾಗೆ ನಾಯಕತ್ವ

ಮಂಗಳೂರು: ಮಹಾರಾಷ್ಟ್ರದಲ್ಲಿ ಇದೇ 6ರಿಂದ 10ರ ವರೆಗೆ ನಡೆಯಲಿರುವ ರಾಷ್ಟ್ರೀಯ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ರಾಜ್ಯ ಪುರುಷ ಹಾಗೂ ಮಹಿಳೆಯರ ತಂಡಗಳನ್ನು ಪ್ರಕಟಿಸಲಾಗಿದೆ.

ಪುರುಷರ ತಂಡವನ್ನು ಮಹಾದೇವಸ್ವಾಮಿ ಹಾಗೂ ಮಹಿಳೆಯರ ತಂಡವನ್ನು ದಿವ್ಯಾ ಎಂ.ಎಸ್ ಮುನ್ನಡೆಸುವರು.

ತಂಡಗಳು: ಪುರುಷರ ವಿಭಾಗ: ಮಹದೇವಸ್ವಾಮಿ (ನಾಯಕ), ಚೇತನ್, ಶ್ರೀನಿವಾಸ್, ಆಕಾಶ್, ಆಕಾಂಕ್ಷ್, ರಂಜಿತ್, ಗಿರೀಶ್, ಶಿವಸಾಗರ್, ಜೀವನ್. ಕೋಚ್: ಜಂಬಣ್ಣ, ವ್ಯವಸ್ಥಾಪಕ: ಕೌಶಲ್ ರಾಮ್; **ಮಹಿಳೆಯರ ವಿಭಾಗ:** ದಿವ್ಯಾ ಎಂ.ಎಸ್ (ನಾಯಕಿ), ಪಲ್ಲವಿ, ಗಾಯತ್ರಿ, ಸಹನಾ, ಮೇಘನಾ, ಲಿಖಿತಾ, ಪ್ರಿಯಾ, ತನುಶ್ರೀ, ಗಗನ, ಲಕ್ಷ್ಮಿ ದೇವಿ. ಕೋಚ್: ಪ್ರವೀಣ್ ಕುಮಾರ್, ವ್ಯವಸ್ಥಾಪಕಿ: ಕವನ ಎಂ.ಎಂ.

ಪುಣೇರಿ ಯಶಸ್ಸಿನ ಓಟ ಅಬಾಧಿತ

ನೊಯ್ಡಾ: ಯಶಸ್ಸಿನ ಓಟ ಮುಂದುವರಿಸಿದ ಪುಣೇರಿ ಪಲ್ಟನ್ ತಂಡ, ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಬುಧವಾರ 40–31 ಪಾಯಿಂಟ್‌ಗಳಿಂದ ಯು.ಪಿ. ಯೋಧಾಸ್ ತಂಡವನ್ನು ಸೋಲಿಸಿತು. ಪುಣೇರಿ 41 ಅಂಕ ಗಳಿಸಿ ಅಗ್ರಸ್ಥಾನದಲ್ಲಿ ಮುಂದುವರಿದಿದೆ.

ನೊಯ್ಡಾದಲ್ಲಿ ನಡೆದ ಪಂದ್ಯದಲ್ಲಿ ಪುಣೇರಿ ಪರ ಅಸ್ಲಂ ಮುಸ್ತಾಫಾ 11 ಅಂಕ ಕಲೆಹಾಕಿ ಮಿಂಚಿದರು. ಇದು 9 ಪಂದ್ಯ ಗಳಲ್ಲಿ ಪುಣೇರಿ ತಂಡಕ್ಕೆ 8ನೇ ಜಯ.

ಇನ್ನೊಂದು ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡ 45–31 ಪಾಯಿಂಟ್‌ಗಳಿಂದ ಹರಿಯಾಣ ಸ್ಟೀಲರ್ಸ್ ತಂಡವನ್ನು ಮಣಿಸಿತು. ಜೈಪುರ ತಂಡದ ಪ್ರಮುಖ ರೈಡರ್ ಅರ್ಜುನ್ ದೇಶ್ವಾಲ್ 14 ಪಾಯಿಂಟ್ಸ್ ಸಂಗ್ರಹಿಸಿದರು. ಜೈಪುರ 34 ಪಾಯಿಂಟ್ಸ್ ಸಂಗ್ರಹಿಸಿದ್ದು ಮೂರನೇ ಸ್ಥಾನದಲ್ಲಿದೆ. ಗುಜರಾತ್ ಜೈಂಟ್ಸ್ (34) ಎರಡನೇ ಸ್ಥಾನದಲ್ಲಿದೆ. ಸ್ಟೀಲರ್ಸ್ ಪರ ಚಂದನ್ 11 ಪಾಯಿಂಟ್ಸ್ ಗಳಿಸಿದರು. ಈ ತಂಡ ಏಳನೇ ಸ್ಥಾನದಲ್ಲಿದೆ.